

ದುಡಿವ ಜನರ ಪ್ರಾಣ ಮಿತ್ರ ರೂ. 3.00 ಸಂಪುಟ 22 ಸಂಚಿಕೆ 19 ಮೇ 3-9, 1999

ಐಕ್ಯರಂಗ






ಬಿಜೆಪಿ ಸರಕಾರದ ಪತನಕ್ಕೆ ಯಾರು ಹೊಣೆ?



ನಾಟೋ ಬಾಂಬ್ ಧಾಳಿಯ ಹಿಂದೆ ಗಾಂಜಾ ವ್ಯಾಪಾರದ ಕಳ್ಳ ಡಾಲರ್!









ಜಾತಿ ಪದ್ಧತಿ, ಅಸ್ಪೃಶ್ಯತೆ ವಿರೋಧಿಸಿದ ಮೂರು ಚಳುವಳಿಗಳು

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ

2ನೇ ರಾಜ್ಯ ಸಮ್ಮೇಳನ - ಮೇ 7ರಿಂದ 9

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 2ನೇ ರಾಜ್ಯ ಸಮ್ಮೇಳನವನ್ನು ಪ್ರಥಮ ಬಾರಿಗೆ ಬೆಂಗಳೂರು ನಗರದ ಕರೂರ್ ವೈಶ್ಯಬ್ಯಾಂಕ್ ಸಭಾಂಗಣದಲ್ಲಿ ಮಾರ್ಚ್ 7 ರಿಂದ 9 ವರೆಗೆ ಸಂಘಟಿಸಲಾಗಿದೆ.

ವಿವಿಧ ಜಿಲ್ಲೆಗಳಿಂದ ಸುಮಾರು ಐದು ಸಾವಿರ ಕೃಷಿ ಕೂಲಿಕಾರರು ಮೇ 7 ರಂದು ಬೆಂಗಳೂರಿಗೆ ಆಗಮಿಸಲಿದ್ದು ಚಿಕ್ಕ ಲಾಲ್‌ಬಾಗ್‌ನಿಂದ ವರ್ಣರಂಜಿತ ಮೆರವಣಿಗೆಯಲ್ಲಿ ಬನ್ನಪ್ಪ ಪಾರ್ಕ್‌ಗೆ ತಲುಪುತ್ತದೆ. ಮೆರವಣಿಗೆಯಲ್ಲಿ ಪಾಲ್ಗೊಂಡು ಬೇರೆ ಬೇರೆ ಜಿಲ್ಲೆಯ ಕೂಲಿಕಾರರನ್ನು ಉದ್ದೇಶಿಸಿ ಅ.ಭಾ.ಪ್ರ. ಕಾರ್ಯದರ್ಶಿ ವಿಜಯರಾಘವನ್, ಸಿ.ಪಿ.ಐ(ಎಂ) ಶಾಸಕರಾದ ಜಿ. ವಿ. ಶ್ರೀರಾಮರೆಡ್ಡಿ, ಜಿ.ಎನ್. ನಾಗರಾಜ್ ಇನ್ನಿತರರು ಮಾತನಾಡಲಿದ್ದಾರೆ.

ಅಸ್ಪೃಶ್ಯತೆ ಮತ್ತು ಜಾತಿ ಭೇಧದ ವಿರುದ್ಧ ವಿಚಾರ ಸಂಕಿರಣ

ಇಂದು ಸಮಾಜದಲ್ಲಿ ಜಾತಿಭೇದ ತೀವ್ರವಾಗುತ್ತಿದ್ದು ಅದು ರಾಜಕೀಯ ಸಾಮಾಜಿಕ, ಶಿಕ್ಷಣ, ಸಾಂಸ್ಕೃತಿಕ ಕ್ಷೇತ್ರಗಳನ್ನು ಹೆಚ್ಚು ವ್ಯಾಪಿಸುತ್ತಿರುವುದು ಅಪಾಯಕಾರಿ. ಕರ್ನಾಟಕದಲ್ಲಿ ದಲಿತ ಸಮುದಾಯದಲ್ಲಿ ಮೂಡುತ್ತಿರುವ ಎಚ್ಚರ ಮತ್ತು ತಮ್ಮ ಹಕ್ಕುಗಳನ್ನು ಸಾಧಿಸಿಕೊಳ್ಳಲು ಅವರು ಹೋರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ಸಾವಿರಾರು ವರ್ಷದಿಂದ ಅವರ ಮೇಲೆ ತಮಗೆ ಇದ್ದ ಬಿಗಿಹಿಡಿತವನ್ನು ಮುಂದುವರಿಸಲು ತೀವ್ರತರವಾದಂತಹ ದೌರ್ಜನ್ಯಗಳು ಹೆಚ್ಚುತ್ತಿವೆ.

ಈಗ ಹೆಚ್ಚುತ್ತಿರುವ ಜಾತಿಭೇದ ಹಾಗೂ ದಲಿತರ ಮೇಲೆ ದೌರ್ಜನ್ಯಗಳು ಸಾವಿರಾರು ವರ್ಷಗಳಿಂದ ಮುಂದುವರಿಸಿಕೊಂಡು ಬಂದ ಅಸ್ಪೃಶ್ಯತೆ ಆಚರಣೆಗಳು ಅತ್ಯಂತ ಬಡವರಾದ ಹಾಗೂ ದಲಿತ ಸಮುದಾಯದ ಬಹುಭಾಗವನ್ನುಳ್ಳ ಕೃಷಿಕೂಲಿಕಾರರ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದಿಂದ ಸಮ್ಮೇಳನದ ಭಾಗವಾಗಿ ಮೇ. 8 ರಂದು ಮುಂಜಾನೆ 10-30ಕ್ಕೆ ಬೆಂಗಳೂರು ವಿಶ್ವ ವಿದ್ಯಾಲಯದ ಸೆನೆಟ್ ಹಾಲ್‌ನಲ್ಲಿ ಅಸ್ಪೃಶ್ಯತೆ ಮತ್ತು ಜಾತಿ ಬೇಧದ ವಿರುದ್ಧ ವಿಚಾರ ಸಂಕಿರಣ ಏರ್ಪಡಿಸಿದೆ. ಇದರಲ್ಲಿ ಪ್ರೊ॥ ಚಂದ್ರಶೇಖರ ಪಾಟೀಲ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕರ್ನಾಟಕ ಸರಕಾರ ಮತ್ತು ದಲಿತ ನಾಟಕಕಾರ ಎಲ್. ಹನುಮಂತಯ್ಯ, ಅ.ಭಾ.ಪ್ರ. ಕಾರ್ಯದರ್ಶಿ ವಿಜಯ ರಾಘವನ್, ರಾಜ್ಯ ಅಧ್ಯಕ್ಷ ಜಿ. ಎನ್. ನಾಗರಾಜ್‌ವರು ವಿಚಾರ ಮಂಡಿಸಲಿದ್ದಾರೆ. ಮತ್ತು ಪ್ರಗತಿಪರ ಸಂಘಟನೆ ಮುಖಂಡರುಗಳು ಅಸ್ಪೃಶ್ಯ ಮತ್ತು ಜಾತಿಬೇಧ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿದ್ದಾರೆ.

ಮಾ 8 -9 ವಿವಿಧ ತಾಲುಕುಗಳಿಂದ ಬರುವ ಕೃಷಿಕಾರ್ಮಿಕ ಪ್ರತಿನಿಧಿಗಳ ಅಧಿವೇಶನ ಪ್ರಾರಂಭಗೊಳ್ಳುತ್ತದೆ. ಅಧಿವೇಶನದ ಸಂದರ್ಭದಲ್ಲಿ ಇಡಿ ರಾಜ್ಯದ ರಾಜಕೀಯ ಪರಿಸ್ಥಿತಿ, ಹೊಸ ಆರ್ಥಿಕ ನೀತಿ ಕೋಮುವಾದದ ದುಷ್ಪರಿಣಾಮಗಳು, ಕೂಲಿಕಾರರಿಗೆ ಕನಿಷ್ಟ ಕೂಲಿ, ಅಖಿಲ ಭಾರತ ಕಾನೂನು ಭೂಮಿ, ವಸತಿ, ಹಸಿರು ಕಾರ್ಡ್ ಹಾಗೂ ರೇಶನ್‌ನಲ್ಲಿ 14 ಜೀವನಾವಶ್ಯಕ ವಸ್ತುಗಳಿಗಾಗಿ, ಮಹಿಳೆಯರಿಗೆ ಸಮಾನಕೂಲಿ, ಹೆರಿಗೆ ಭತ್ಯೆ, ಶೌಚಾಲಯ ಸೌಲಭ್ಯಗಳ ನಿರ್ಮಿಸುವಂತೆ, ಸರಕಾರಕ್ಕೆ ಒತ್ತಾಯಿಸುವುದಲ್ಲದೆ, ಆಳುವ ಪ್ರಭುಗಳ ದೌರ್ಜನ್ಯ, ಸಾಮಾಜಿಕ ಅಸಮಾನತೆಯ ನೀತಿಗಳ ವಿರುದ್ಧ ಹೋರಾಟಗಳ ಬಗ್ಗೆ ಈ ಸಮ್ಮೇಳನ ನಿರ್ಣಯಗಳನ್ನು ಕೈಗೊಳ್ಳಲಿದೆ.

ಮೂರು ದಿನ ನಡೆಯುವ 2ನೇ ರಾಜ್ಯ ಸಮ್ಮೇಳನದ ಸಿದ್ಧತೆಗೆ ಸ್ವಾಗತ ಸಮಿತಿ ರಚಿಸಿಕೊಳ್ಳಲಾಗಿದೆ. ಇದಕ್ಕೆ ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷರಾಗಿದ್ದಾರೆ. ಜಿ.ಎನ್. ನಾಗರಾಜ್ ಉಪಾಧ್ಯಕ್ಷರು, ಶ್ರೀಮತಿ ಪ್ರಭಾ, ಕಾರ್ಯದರ್ಶಿಯಾಗಿ ಪಿ. ಜಗನ್ನಾಥ, ಸಹಕಾರ್ಯದರ್ಶಿಗಳಾಗಿ ವಿಜಯಕುಮಾರ್, ಚಲುವರಾಜ್, ಖಜಾಂಚಿ ಕೆ. ಪ್ರಕಾಶ್, ವೆಂಕಟಾಚಲಯ್ಯ, ಚಂದ್ರಪ್ಪ ಹೊಸ್ಕೆರ, ಚಂದ್ರಶೇಖರ್, ಐಕ್ಯರಂಗ ಬಳಗ ಇವರನ್ನು ಆಯ್ಕೆ ಮಾಡಲಾಗಿದ್ದು ಅದರ ತಯಾರಿ ಪ್ರಾರಂಭಗೊಂಡಿದೆ.




ಒಳಪುಟಗಳಲ್ಲಿ ....

ಮುಂದಿನ ಪ್ರಧಾನಿ ಹೇಗಿರಬೇಕು?

ಒಂದು ಜನಮತ ಸಂಗ್ರಹ

ಏಪ್ರಿಲ್ 17 ರಂದು ವಾಜಪೇಯಿ ಸರಕಾರ ವಿಶ್ವಾಸಮತ ಕಳಕೊಂಡು ರಾಜಿನಾಮೆ ನೀಡಿದ ಮೇಲೆ ಪರ್ಯಾಯ ಸರಕಾರ ರಚಿಸುವ ಪ್ರಯತ್ನದಲ್ಲಿ ಜಾತ್ಯಾತೀತ ರೆಲ್ಲರ ಕಣ್ಣುಗಳು ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಕಡೆಗೆ ತಿರುಗಿದ್ದವು. ಎರಡೂವರೆ ವರ್ಷಗಳ ನಂತರ ಮತ್ತೆ ಹಲವು ಕಡೆಗಳಿಂದ ಪ್ರಧಾನ ಮಂತ್ರಿ ಸ್ಥಾನಕ್ಕೆ ಜ್ಯೋತಿಬಸುರವರ ಹೆಸರಿನ ಸೂಚನೆಗಳು ಬರಲಾರಂಭಿಸಿದವು. ಈ ಸೂಚನೆಗಳು ಬರಲಾರಂಭಿಸಿದಾಗ ಬಿಜೆಪಿ ಮುಖಂಡರ ಮುಖಗಳಲ್ಲಿ ಭಯ, ಆತಂಕ ಮೂಡುತ್ತಿದ್ದವು. ರಾಜಕೀಯ ವಲಯಗಳಲ್ಲಿ ಮಾತ್ರವಲ್ಲ, ಈ ಬಾರಿ ಬೂರ್ಜ್ವಾ ಪತ್ರಿಕೆಗಳ ಅಭಿಪ್ರಾಯ ಸಂಗ್ರಹಗಳಲ್ಲೂ ಜ್ಯೋತಿಬಸುರವರ ಹೆಸರು ಬಹಳವಾಗಿ ಕೇಳಿಬಂತು. ಏಕಿರಬಹುದು? ಟೈಂಸ್ ಆಫ್ ಇಂಡಿಯಾ'ದ ಬೆಂಗಳೂರು ಸಂಚಿಕೆ ನಡೆಸಿದ ಅಭಿಪ್ರಾಯ ಸಂಗ್ರಹದಲ್ಲಿ ಕೇಳಿಬಂದ ಉತ್ತರಗಳು ಇದರ ಒಂದು ಇಣುಕು ನೋಟ ನೀಡಿವೆ. 'ಬಿಜೆಪಿಯೇತರ ಮುಖಂಡರಲ್ಲಿ ಮುಂದಿನ ಪ್ರಧಾನಿಯಾಗಲು ಅತ್ಯಂತ ಅರ್ಹರು ಯಾರು? ಏಕೆ?' ಇದು ಈ ಪತ್ರಿಕೆ ಕೇಳಿದ್ದ ಪ್ರಶ್ನೆ. ಇದಕ್ಕೆ ಉತ್ತರವಾಗಿ ಓದುಗರಿಂದ ಭಾರಿ ಪ್ರಮಾಣದಲ್ಲಿ ಟೆಲಿಫೋನ್ ಕರೆಗಳು ಬಂದವಂತೆ. ಇವುಗಳಲ್ಲಿ ಗಮನಾರ್ಹ ಸಂಖ್ಯೆಯ ಉತ್ತರಗಳಲ್ಲಿ ಜ್ಯೋತಿಬಸು ಅಥವಾ ಮನಮೋಹನ್ ಸಿಂಗರ ಹೆಸರುಗಳು ಕೇಳಿಬಂದವಂತೆ. ಮನಮೋಹನ್ ಸಿಂಗ್‌ರವರ ಹೆಸರೇನೋ ಸರಿ, ಟೆಲಿಫೋನ್ ಇರುವ ಮಧ್ಯಮ, ಮೇಲ್-ಮಧ್ಯಮ ವರ್ಗಗಳ ಜನಗಳ ಬಾಯಲ್ಲಿ ಜ್ಯೋತಿಬಸುರವರ ಹೆಸರೇ? ಭಾರತದ ಈಗಿನ ಪರಿಸ್ಥಿತಿ ಸಿಪಿಐ(ಎಂ) ಮತ್ತು ಎಡ ಶಕ್ತಿಗಳ ನೀತಿಬದ್ಧ ನಿಲುವು ಹಲವು ಪೂರ್ವಾಗ್ರಹಗಳನ್ನು ಹೇಗೆ ಒಡೆಯಲಾ ರಂಭಿಸಿದೆ ಎಂಬುದಕ್ಕೆ ಬಹುಶಃ ಇದೊಂದು ನಿದರ್ಶನ. ಜ್ಯೋತಿಬಸುರವರು ಪ್ರಧಾನ ಮಂತ್ರಿಯಾಗ ಬೇಕೆಂದು ಆಶಿಸಿರುವ ಬೆಂಗಳೂರು ನಿವಾಸಿಗಳ ಅಭಿಪ್ರಾಯಗಳನ್ನು ನೋಡಿ.



● ನಮಗೆ ಸೋನಿಯಾಗಾಂಧಿ, ಜಯಲಲಿತಾ ಅಥವಾ ಮುಲಾಯಂ ಸಿಂಗ್ ಯಾದವ್ ಬೇಡ, ಜ್ಯೋತಿಬಸು ಬೇಕು ಎಂದರಂತೆ ಜೆ.ಪಿ.ನಗರದ ನವನೀತಾ ಪಾಲ್.

● ಭಾರತ ಭ್ರಷ್ಟಾಚಾರದಲ್ಲಿ ಮುಳುಗಿರುವ ಒಂದು ಯುಗದಲ್ಲಿ ಜ್ಯೋತಿಬಸು ಒಬ್ಬ ಸೂಕ್ತ ಪ್ರಧಾನಮಂತ್ರಿಯಾಗಬಲ್ಲರು. ನಮಗೆ ಉನ್ನತ ಸ್ಥಾನದಲ್ಲಿ ಒಬ್ಬ ಸ್ವಚ್ಛ ವ್ಯಕ್ತಿ ಬೇಕಾಗಿದೆ. ಜ್ಯೋತಿಬಸು ಮಾನವೀಯರು, ರಾಜಕಾರಣದಲ್ಲಿ ನುರಿತವರು, ಪಾಂಡಿತ್ಯಪೂರ್ಣರು ಹಾಗೂ ಸಮತೋಲನ ವ್ಯಕ್ತಿ. ಅವರು ಬುದ್ಧಿವಂತರು, ಸೂಕ್ಷ್ಮಜ್ಞರು ಎಂದರಂತೆ ಹೆಚ್.ಎ.ಎಲ್. ಎರಡನೇ ಹಂತದ ನಿವಾಸಿ ರವಿಶಂಕರ್.

● ಜ್ಯೋತಿಬಸುರವರು ತನ್ನ ರಾಜ್ಯದಲ್ಲಿ ಪ್ರಗತಿಪರ ಕಾರ್ಯಕ್ರಮಗಳನ್ನು ನಿರಂತರವಾಗಿ ಜಾರಿಗೆ ತಂದ ಏಕೈಕ ಮುಖ್ಯಮಂತ್ರಿ. ಇತರ ಮುಖ್ಯಮಂತ್ರಿಗಳು ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹಾರುವವರು. ಯಾವುದೇ ಬದ್ಧತೆಯಿಲ್ಲದೆ ಕೇವಲ ಕುರ್ಚಿಯ ಮೇಲೆ ಕಣ್ಣಿಟ್ಟವರು ಎಂದರು ಜೀವನ್ ಭೀಮಾ ನಗರ ವಾಸಿ ಗಂಗಾ ಬಾಳಿಗ.

● ತಾನು ಜ್ಯೋತಿಬಸುರವರನ್ನು ಪ್ರಧಾನಿಯಾಗಿ ಕಾಣಲು ಬಯಸುವುದೇಕೆಂದರೆ ಅವರು ಸಮರ್ಥ, ಅನುಭವೀ ಹಾಗೂ ಭ್ರಷ್ಟರಲ್ಲದ ರಾಜಕಾರಣಿ ಎಂದರು ಚಾಮರಾಜ ಪೇಟೆಯ ಜಿ.ನೆಹರೂ.

● ಜ್ಯೋತಿ ಬಸು ರಾಜಕಾರಣಿಯಾಗಿಯೂ, ಆಡಳಿತಗಾರನಾಗಿಯೂ ಅತ್ಯಂತ ಅರ್ಹ ವ್ಯಕ್ತಿ. ಅತೀ ದೀರ್ಘ ಅವಧಿಯ ಮುಖ್ಯ ಮಂತ್ರಿಯಾಗಿರುವವರು. ಭಾರತದ ರಾಜಕಾರಣದ ಈ 'ಭೀಷ್ಮ ಪಿತಾಮಹ' ಇತರೆಲ್ಲರಿಗಿಂತಲೂ ಎಷ್ಟೋ ಉನ್ನತ ವ್ಯಕ್ತಿ ಎಂದರು ಮಹಾತ್ಮಾ ಗಾಂಧಿ ರಸ್ತೆಯ ಆರ್.ವಿ.ನಾಥನ್.

● ಮುಂದಿನ ಪ್ರಧಾನಿಯಾಗಲು ಅತ್ಯುತ್ತಮ ವ್ಯಕ್ತಿಯೆಂದರೆ ಜ್ಯೋತಿಬಸು. ಏಕೆಂದರೆ ಅವರು ಅತ್ಯಂತ ಅನುಭವಶಾಲಿ. ಒಬ್ಬ ರಾಷ್ಟ್ರೀಯ ಮುಖಂಡನಾಗುವ ಎಲ್ಲಾ ಸಾಮರ್ಥ್ಯಗಳು ಅವರಲ್ಲಿವೆ ಎಂದರು ಮಲ್ಲೇಶ್ವರಂ ನಿವಾಸಿ ಕೆ.ವಿ.ಸತೀಶ್.

● ಜ್ಯೋತಿ ಬಸುರವರೇ ಅತ್ಯುತ್ತಮ ಆಯ್ಕೆ. ಏಕೆಂದರೆ ಅವರಿಗೆ ಪ್ರೌಢತೆಯಿದೆ, ರಾಜಕೀಯ ಅನುಭವವಿದೆ, ಬಹಳ ದೀರ್ಘ ಕಾಲ ಮುಖ್ಯಮಂತ್ರಿಯಾಗಿ ಉಳಿದವರು. ಅಗತ್ಯ ತೇಜಸ್ಸು ಅವರಿಗಿದೆ ಎಂದರು ಜೀವನಭೀಮಾ ನಗರದ ಇನ್ನೊಬ್ಬ ನಿವಾಸಿಯಾದ ರೂಪಾ ಬ್ಯಾತ್‌ಬಾಲ್.



ಇ.ಕೆ. ನಾಯನಾರ್ ದಾಖಲೆ

ಕೇರಳದ ಮುಖ್ಯಮಂತ್ರಿ ಇ.ಕೆ. ನಾಯನಾರ್ ಅವರು ನೂತನ ದಾಖಲೆಯನ್ನು ನಿರ್ಮಿಸಿದ್ದಾರೆ. ಕ್ರಿಕೆಟ್‌ನ ಎಡಬಿಡದ ಗಲಾಟೆಯ ಮಧ್ಯೆ ಇಕೆಎನ್ ಸದ್ದಿಲ್ಲದೆ ಈ ದಾಖಲೆ ನಿರ್ಮಿಸಿಬಿಟ್ಟಿದ್ದಾರೆ.

ಕೇರಳದ ಮುಖ್ಯ ಮಂತ್ರಿಗಳ ಪೈಕಿ ಅತಿಹೆಚ್ಚು ದಿನ ಅಧಿಕಾರ ನಡೆಸಿದ ದಾಖಲೆ ಈಗ ಇ.ಕೆ. ನಾಯನಾರ್ ಅವರದ್ದು.

ಎರಂಬಾಳ ಕೃಷ್ಣನ್ ನಾಯರ್ (ಇ.ಕೆ. ನಾಯನಾರ್) ಅವರು ಕೇರಳದಲ್ಲಿ ಅತಿ ಹೆಚ್ಚು ಕಾಲ ಮುಖ್ಯ ಮಂತ್ರಿಯಾಗಿದ್ದ ಕೆ. ಕರುಣಾಕರನ್ ಅವರ ದಾಖಲೆಯನ್ನು ಮುರಿದರು.

. ಇ.ಕೆ. ನಯನಾರ್ ಅವರು 3,246 ದಿನ (15.4.1999 ರಂದು) ಮುಖ್ಯಮಂತ್ರಿಯಾಗಿರುವುದಡ ಮೂಲಕ ಅದುವರೆಗೂ 3,245 ದಿನಗಳ ಕಾಲ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ ಕರುಣಾಕರನ್ ಅವರ ಹೆಸರಿನಲ್ಲಿ ಇದ್ದ ದಾಖಲೆಯನ್ನು ಅಳಿಸಿಹಾಕಿದರು.

ಇ.ಕೆ. ನಾಯನಾರ್ ಕೇರಳಕ್ಕೆ ಮೂರನೆ ಬಾರಿ ಮುಖ್ಯಮಂತ್ರಿ ಯಾಗಿದ್ದರು. 1980 ಹಾಗೂ 81 ರಲ್ಲಿ 20 ತಿಂಗಳ ಕಾಲ, 1987 ರಿಂದ 1991 ರವರೆಗೆ 4 ವರ್ಷ 4ತಿಂಗಳ ಕಾಲ ಈಗ 1996 ರಿಂದ ಅಧಿಕಾರದಲ್ಲಿರುವ ಕಾಲ 2 ವರ್ಷ 11 ತಿಂಗಳು ಕಳೆದಿದೆ.

'ನಮ್ಮುಡೆ ಇ.ಕೆ. ನಯನಾರ್' (ನಮ್ಮ ಇ.ಕೆ. ನಾಯನಾರ್) ಎಂದೇ ಪ್ರೀತಿಯಿಂದ ಕೇರಳದಾದ್ಯಂತ ಕರೆಯಲ್ಪಡುವ ಇಕೆಎನ್ ಅವರು ಇನ್ನಷ್ಟು ಮತ್ತಷ್ಟು ದಾಖಲೆಗಳನ್ನು ನಿರ್ಮಿಸಲಿ.

'ಐಕ್ಯರಂಗ'ದಲ್ಲಿ ಓದುಗರಿಗಾಗಿ ಹೊಸ ಅಂಕಣಗಳು

ಹೊಸ ಸ್ವರೂಪದ 'ಐಕ್ಯರಂಗ' ಈಗಾಗಲೇ ನಿಮ್ಮ ಕೈಸೇರಲಾರಂಭಿಸಿದೆ. ಈ ದಿಕ್ಕಿನಲ್ಲಿ ಇನ್ನಷ್ಟು ವಿಸ್ತಾರಗೊಳ್ಳಲು ಕೆಲವು ಹೊಸ ಅಂಕಣಗಳನ್ನು ಪ್ರಾರಂಭಿಸಬೇಕೆಂದಿದ್ದೇವೆ. ಇಧರಲ್ಲಿ ನಮ್ಮ ಓದುಗರ ಸಕ್ರಿಯ ಸಹಕಾರ ನಮಗೆ ಅಗತ್ಯ. ನಿಮ್ಮ ಅನಿಸಿಕೆಗಳನ್ನು ತಿಳಿಸುವ 'ಓದುಗರ ಓಲೆಗಳು' ಹಾಗೂ ನಿಮ್ಮ ಪ್ರಶ್ನೆಗಳಿಗೆ ಮೀಸಲಾದ 'ಪ್ರಶ್ನೋತ್ತರ' ಅಂಕಣಗಳನ್ನು ಸದ್ಯದಲ್ಲೇ ಆರಂಭಿಸಲಿದ್ದೇವೆ. ನಿಮ್ಮ ಪತ್ರಗಳನ್ನು, ಪ್ರಶ್ನೆಗಳನ್ನು ಆದಷ್ಟು ಬೇಗನೇ ನಮಗೆ ಕಳಿಸಿ. ಜತೆಗೆ 'ಐಕ್ಯರಂಗ' ನಿಮ್ಮ ಬಂಧುಗಳೂ, ಗೆಳೆಯರು ಓದುವಂತೆ ಪ್ರೇರೇಪಿಸಿ.

- ಸಂಪಾದಕರು

'ಐಕ್ಯರಂಗ' ಕ್ಕೆ ವರದಿ ಕಳಿಸುವವರ ಗಮನಕ್ಕೆ

ರಾಜ್ಯದ ವಿವಿಧ ಕಡೆಗಳಲ್ಲಿ ದುಡಿಯುವ ಜನಗಳ ಹೋರಾಟದ ವರದಿಗಳು ನಮಗೆ ಬರುತ್ತಿರುತ್ತವೆ. ಆದರೆ ಇವುಗಳನ್ನು ಪ್ರಕಟಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಮುಖ್ಯಕಾರಣ ಈ ವರದಿಗಳ ಸ್ವರೂಪ. ಬೇರೆ ದಿನಪತ್ರಿಕೆಗಳಿಗೆ ಕಳಿಸುವ ಸುದ್ದಿಗಳನ್ನೇ ನಮ್ಮಂತಹ ಪತ್ರಿಕೆಗೆ ಕಳಿಸಿದರೆ ನಮ್ಮ ಓದುಗರಿಗೆ ಅದರಿಂದ ಪ್ರಯೋಜನವಾಗದು. ನಮಗೆ ಕಳಿಸುವ ಇಂತಹ ವರದಿಗಳಲ್ಲಿ ನಿರ್ದಿಷ್ಟ ಹೋರಾಟದ/ ಪ್ರತಿಭಟನೆಯ ಹಿನ್ನೆಲೆಯಲ್ಲಿಯ ಸಮಸ್ಯೆಯ ಹಾಗೂ ಹೋರಾಟ/ ಪ್ರತಿಭಟನೆಯನ್ನು ಹೇಗೆ ಸಂಘಟಿಸಲಾಯಿತು ಎಂಬ ಒಂದು ಚಿತ್ರ ರಾಜ್ಯದ ಇತರ ಓದುಗರಿಗೂ ಸಿಗುವಂತೆ ಆಕರ್ಷಕವಾಗಿ ಬರೆದು ಕಳಿಸಿದ ವರದಿಗಷ್ಟೇ ಇನ್ನು ಮುಂದೆ ಆದ್ಯತೆ ನೀಡಲಾಗುವುದು ಎಂಬುದನ್ನು ಗಮನಿಸಬೇಕಾಗಿ ಕೋರಿಕೆ.

- ಸಂಪಾದಕರು.

ಬಿಜೆಪಿ ಸರ್ಕಾರದ ಪತನಕ್ಕೆ ಹೊಣೆ ಯಾರು?


ವಾಜಪೇಯಿಯವರು ಹುತಾತ್ಮರಾಗಬಯಸಿದ್ದಾರೆ!

ಅವರ ದುಃಖತಪ್ತ, ಮ್ಲಾನ ಮುಖದ ಫೋಟೋ ಹೊತ್ತು ದೇಶದ ತುಂಬಾ ತಿರುಗಿ ಓಟು ಯಾಚಿಸಲು ಬಿಜೆಪಿ ತುದಿಗಾಲ ಮೇಲೆ ನಿಂತಿದೆ. ಅದರಲ್ಲಿ ನಮಗೂ ಒಂದು ಪಾಲುಕೊಡಿ ಎಂದು ಜಾರ್ಜ್, ಹೆಗಡೆ, ನಾಯ್ಡು ಮುಂತಾದ ನಾಯಕರು ಗೋಗೆರೆಯುತ್ತಿದ್ದಾರೆ. 'ರಾಷ್ಟ್ರೀಯ ಸುಳ್ಳರ ಸಂಘ'ವೂ ಮತ್ತು ಅದರ ಪರಿವಾರವೂ ತನ್ನ ಹಲವು ನಾಲಗೆಗಳ ಕರಾಮತ್ತನ್ನು ಹರಿಯಬಿಟ್ಟಿದೆ. ಸುಳ್ಳು ಹೇಳುವ ಸ್ಫೂರ್ತಿಗೆ ಸ್ವದೇಶಿಯಾದರೇನು? ವಿದೇಶಿಯಾದರೇನು? ಹೇಗಿದ್ದರೂ ಗೋಬೆಲ್ಸ್‌ನ ವಾರಸುದಾರರಲ್ಲವೇ?

ನೋಡಿ, ಎಂತಹ ಸಾಧು ಮನುಷ್ಯ! ಆಕಳಿನಂತಹ ಸಾಧು. ಇಂತಹ ಸಂತನನ್ನು ಅಧಿಕಾರದಿಂದ ಇಳಿಸಿದರು! 'ಕೆಳಗಿಳಿಸಿದವರು ಇವರು, ಇವರನ್ನು ಕೇಳಿ' ಎಂಬ ಜಾಹೀರಾತು. ವೆಚ್ಚ ಲಕ್ಷಗಳವಲ್ಲ, ಕೋಟಿಗಳು..... "ಕೇಳಿರಿ ಇವರನ್ನು" ರಾಷ್ಟ್ರದ ವಿವಿಧ ಪಕ್ಷಗಳ ಹಿರಿಯ ನಾಯಕರನ್ನು ಕೀಳು ಭಾಷೆಯಲ್ಲಿ ಪರಿಚಯಿಸಲಾಗಿದೆ. 'ಸಂಘ ಪರಿವಾರ' ಎಷ್ಟು ಸಂಕಟ ಅನುಭವಿಸುತ್ತಿರಬಹುದು! ಅದೆಷ್ಟು ಹತಾಶರಾಗಿರಬಹುದು!

ವಾಜಪೇಯಿಯವರನ್ನು ಹುತಾತ್ಮರಂತೆ 'ನಗಿಸ'ಲಾಗಿದೆ. ಈ ನಿರ್ಲಿಪ್ತ ಸಂತ ಕಳೆದುಕೊಳ್ಳಲು ಏನೂ ಇಲ್ಲದ ತ್ಯಾಗಿ ಎಂದು ಚಿತ್ರಿಸಿರುವಾಗ 'ಎಲ್ಲವನ್ನೂ' ಕಳಕೊಂಡಂತಹ ಮುಖ(ವಾಡ) ಯಾಕೆ? ಇಲ್ಲ, ಅವರು ಕ್ಯಾಮರಕ್ಕೆ ಪೋಜು ಕೊಡುತ್ತಿರಬೇಕು. ನಮ್ಮ ಹಳ್ಳಿಯಲ್ಲಿ ಗಾದೆ ಮಾತೊಂದಿದೆ- *"ಹುಲಿಯಂತಾಗಲು ಹಪಾಹಪಿಸಿದ ನರಿಯು ಮೈತುಂಬಾ ಬರೆ ಎಳೆದುಕೊಂಡಿತಂತೆ"!*

ಹೇಯ, ಅಸಭ್ಯ, ಅನಾಗರೀಕ ಜಾಹೀರಾತು ನೀಡಿರುವುದಕ್ಕೆ ... ಛೀಮಾರಿ ಹಾಕಬಹುದು. ಚುನಾವಣಾ ಆಯೋಗ ಆಕ್ಷೇಪಿಸಬಹುದೆಂದು ಭಾವಿಸಿದ ಬಿಜೆಪಿಯು ಬಣ್ಣ ಬದಲಾಯಿಸಿದೆ- 'ಲೋಕಅಭಿಯಾನ - ದೆಹಲಿ'. ಇದು ಮುಖ ಉಳಿಸಿಕೊಳ್ಳುವ ಮುಖವಾಡ. ಒಮ್ಮೆ ಹಿಂದುತ್ವ, ಸಕಾರಾತ್ಮಕ ಜಾತ್ಯಾತೀತತೆ, ಇನ್ನೊಮ್ಮೆ ದೇಶಪ್ರೇಮ, ಸ್ವದೇಶಿ, ಮಂದಿರ ನಿರ್ಮಾಣ...... ಜನ ಮಾನಸದಲ್ಲಿನ ಅಮೂಲ್ಯ ಪದಗಳ ಮಾನ ಕಳೆದ ಮಹನೀಯರು ಇವರು.



ಇದು ಈಗ ದಿವಂಗತರಾಗಿರುವ ಇರ್ಫಾನ್ ಹುಸೇನ್‌ರವರ ವ್ಯಂಗ್ಯಚಿತ್ರ. 'ಮಿ. ಫ್ಲಾಪ್' ಇದು ವಾಜಪೇಯಿಯವರಿಗೆ ಅವರಿಟ್ಟ ಹೆಸರು. ಈ ಪ್ರತಿಭಾವಂತ ಯುವ ವ್ಯಂಗ್ಯಚಿತ್ರಕಾರನ ಕೊಲೆ ವಾಜಪೇಯಿಯವರ 13 ತಿಂಗಳ 'ಅಸಂಖ್ಯ ಸಾಧನೆ'ಗಳಲ್ಲಿ ಒಂದು - ಏಕೆಂದರೆ ದಿಲ್ಲಿ ಬಿಜೆಪಿಯ ಆಳ್ವಿಕೆಯಲ್ಲಿ ದೇಶದ 'ಅಪರಾಧ ರಾಜಧಾನಿ'ಯೂ ಆಗಿಬಿಟ್ಟಿದೆ. ಈ ಯುವಕನ ತಪ್ಪಾದರೂ ಏನಿತ್ತು?

ವಾಜಪೇಯಿ ಸರಕಾರದ ತಪ್ಪುಗಳು ಮಾತ್ರ ಅಸಂಖ್ಯ.

ಈ ಬಗ್ಗೆ ತಿಳಿಯಲು ಓದಿ -

'ಬಿಜೆಪಿಯ ಒಂದು ವರ್ಷದ ವಿನಾಶಕಾರಿ ಆಡಳಿತ'

ಲೇ: ಸೀತಾರಾಂ ಯೆಚೂರಿ

ಪ್ರಕಟಣೆ: ಸಿಪಿಐ(ಎಂ) ಕರ್ನಾಟಕ ರಾಜ್ಯಸಮಿತಿ

ಬೆಲೆ ರೂ. 5.00

ಪಾಠ ಯಾರಿಗೆ ಕಲಿಸಬೇಕಾಗಿದೆ ಎಂದು ನೀವೇ ನಿರ್ಧರಿಸಿ

ಈ ಸರಕಾರವನ್ನು ಉರುಳಿಸಿದ್ದಾದರೂ ಯಾರು? ಉರುಳಿಸಿದ್ದು ಯಾಕೆ?

"ನನ್ನ ಸರ್ಕಾರವನ್ನು ಉರುಳಿಸಲು ಕಾರಣಗಳೇ ಇರಲಿಲ್ಲ. ವಿಷಯ, ವಿವಾದಗಳಾದರೂ ಏನು ಎಂದು ಕೇಳಿದೆ, ಅದಕ್ಕೆ ಪ್ರತಿಪಕ್ಷಗಳಲ್ಲಿ ಉತ್ತರ ಇರಲಿಲ್ಲ" ಎಂದು ದೂರದರ್ಶನದಲ್ಲಿ ಸಬೂಬು ಕೇಳುತ್ತಾರೆ ಉಸ್ತುವಾರಿ ಪ್ರಧಾನಿ ವಾಜಪೇಯಿ. ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯುವಾಗ ಪ್ರಧಾನಿ ವಾಜಪೇಯಿ ಇರಲಿಲ್ಲವೇ? ಹಾಗಾದರೆ ಅಲ್ಲಿ ಅವರು ಚರ್ಚೆಗೆ ಧೀರ್ಘ ಉತ್ತರ ಯಾಕೆ ನೀಡಬೇಕಿತ್ತು?

'ಸರ್ಕಾರವನ್ನು ಉರುಳಿಸಲಾಯಿತು' ಎಂದು ಆರೋಪಿಸುವ ಮೊದಲು ಆತ್ಮವಿಮರ್ಶೆ ಅಗತ್ಯವಿತ್ತು. ಹಿಂದೆ 13 ದಿನಗಳು ಈಗ ಕೇವಲ 13 ತಿಂಗಳಲ್ಲಿ ಅಧಿಕಾರದ ದಾಹಕ್ಕೆ ಅವರು ಆಡದ ಆಟವಿಲ್ಲ. ಮಾಡದ ಕೃತ್ಯಗಳಿಲ್ಲ. ಎಷ್ಟೊಂದು ರಾಜಿಗಳು, ಡೊಗ್ಗು ಸಲಾಮುಗಳು ಒಮ್ಮೆ ಸಮತಾಪಕ್ಷ, ತೃಣಮೂಲ ಕಾಂಗ್ರೆಸ್‌ನೊಂದಿಗೆ, ಮತ್ತೊಮ್ಮೆ ಬಿಜೆಪಿ-ತೆಲುಗುದೇಶಂನೊಂದಿಗೆ, ಎಐಡಿಎಂಕೆ ಮತ್ತು ಬಿಜೆಪಿ, ಅಕಾಲಿ ಹಾಗೂ ಬಿಜೆಪಿ ...... ಹೀಗೆ ಎಷ್ಟು ಬಾರಿ ಝುಟಾಪಟಿ! ವಾಜಪೇಯಿಯವರು ಇಂತಹ ಸಂಧಾನಗಳು ಮತ್ತು ಸದಾ ಆರ್‌ಎಸ್‌ಎಸ್ ನ ಒತ್ತಡದಲ್ಲೇ ಕಾಲ ಕಳೆದರು. ತನ್ನ ಕಾತರಗಳ ಭಾರದಲ್ಲೇ ಸರ್ಕಾರ ಕುಸಿಯಿತು. ಅವರದ್ದೇ ಮಿತ್ರ ಪಕ್ಷ ಬೆಂಬಲ ವಾಪಸು ಪಡೆಯಿತು. ಸಮರ್ಥ ಪ್ರಧಾನಿ ಎಂಬುದು ವ್ಯರ್ಥವಾಗಿರುವ ಘೋಷಣೆಯೀಗ. ಅದಕ್ಕೀಗ ತಿಲಾಂಜಲಿ. ಹೊಸ ಘೋಷಣೆ - "ಭಾರತದ ನೈಜ ನಾಯಕ"!

ಸರ್ಕಾರ ಉರುಳುವ ಸಂದರ್ಭಕ್ಕೆ ಮೊದಲಿನ ವಿಷಯಗಳು ಇರಲಿಲ್ಲವೇ? ಇಡೀ ದೇಶವೇ ಪ್ರಶ್ನೆ ಕೇಳುತ್ತಿತ್ತು, ಸ್ವತಃ ಜಯಲಲಿತಾ ಅದನ್ನು ಪುನರುಚ್ಚರಿಸಿದರು - ಪ್ರಧಾನಿಯವರ ಆಪ್ತ ವಲಯದಲ್ಲಿದ್ದ ಮೋಹನ್ ಗುರುಸ್ವಾಮಿಯವರು ಮಾಡಿದ ಆರೋಪವಾಗಿರುವ 'ಹಣಕಾಸು ದುರ್ವ್ಯವಹಾರ ವಿವಿಧ ಕಂಪನಿಗಳೊಂದಿಗೆ, ಪ್ರಧಾನಿ, ಗೃಹಸಚಿವ ಅಡ್ವಾಣಿ, ಪ್ರಮೋದ್ ಮಹಾಜನ್‌ರು ನಡೆಸಿದ ಭ್ರಷ್ಟಾಚಾರಗಳ ತನಿಖೆಗೆ ಆಗ್ರಹ, ಇನ್ನೊಂದು ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಭಾಗವತ್‌ರವರ ವಿನಾಕಾರಣ ವಜಾ - ಅದರ ಹಿಂದೆ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್ ರ ಕೈವಾಡ - ದೇಶದ್ರೋಹಿ ಶಕ್ತಿಗಳೊಂದಿಗೆ ಅವರ ಸಂಪರ್ಕ - ಸಮರ್ಥನೆಯ ಅಂಶಗಳು ....!, ಇವುಗಳ ಬಗ್ಗೆ ವಿವರಿಸಲು ಆಗ್ರಹಿಸಿದರೆ ವಾಜಪೇಯಿ ಸರಕಾರ ಒಪ್ಪಲಿಲ್ಲ. ಒಪ್ಪಿದ್ದರೆ... ವಿಷಯ ಬೇರೆಯಾಗುತ್ತಿತ್ತು. ಪ್ರಧಾನಿ ವಾಜಪೇಯಿಗೆ ಕೇಳಬೇಕಿದೆ - ಇವು ಸರ್ಕಾರದ ಪತನಕ್ಕೆ ಕಾರಣವಾದ ಅಂಶಗಳಲ್ಲಿ ಕೆಲವು ಅಲ್ಲವೇ?


ಈ ಸರ್ಕಾರ ಎಂದೋ ಉರುಳಬೇಕಿತ್ತು.

ಮಾತ್ರವಲ್ಲ ಧರ್ಮನಿರಪೇಕ್ಷ, ಪ್ರಜಾಪ್ರಭುತ್ವೀಯ, ಶಾಂತಿಪ್ರಿಯ ಭಾರತಕ್ಕೆ ಈ ಸರ್ಕಾರ ದೊಡ್ಡ ಕಳಂಕವಾಗಿತ್ತು. ಈ 13 ತಿಂಗಳಲ್ಲಿ ಮಾಡಿರುವ ಹಾನಿ ಒಂದೇ ಎರಡೇ. 18 ಪಕ್ಷಗಳ ಸಂದರ್ಭ-ಸಾಧಕ ಕಿಚಡಿ ಸರ್ಕಾರ. ಆರ್.ಎಸ್.ಎಸ್. ನ ಕರಾಳ ಹಿಂದೂರಾಷ್ಟ್ರದ ಕಲ್ಪನೆಗೆ ಪ್ರಧಾನಿ ವಾಜಪೇಯಿ ಸಮರ್ಪಣೆ, ಆರ್ಥಿಕ ರಂಗದಲ್ಲಿ ಸ್ವದೇಶಿ ಹೇಳುತ್ತಾ ಭರದಿಂದ ವಿದೇಶೀಕರಣ, ಜನಸಾಮಾನ್ಯರು ಬಳಸುವ ವಸ್ತುಗಳ ಬೆಲೆ ಗಗನಕ್ಕೆ, ನಿರುದ್ಯೋಗದ ಹೆಚ್ಚಳ, ದುರ್ಬಲರು, ಮಹಿಳೆಯರು, ಅಲ್ಪಸಂಖ್ಯಾತರ ಮೇಲೆ ಅವಿರತ ದೌರ್ಜನ್ಯಗಳು - ಅವುಗಳ ಸಮರ್ಥನೆ, ಸುಧಾರಿಸುತ್ತಿದ್ದ ನೆರೆಹೊರೆ ಬಾಂಧವ್ಯಗಳ ನಾಶ - ಅಣ್ವಸ್ತ್ರಗಳ ಪೈಪೋಟಿಗೆ ನಾಂದಿ, ಸಂವಿಧಾನದ 356 ನೇ ಕಲಮಿನ ದುರ್ಬಳಕೆ, ಅತ್ಯಂತ ಪ್ರತೀಗಾಮಿ, ಛಿದ್ರಕಾರಿ, ಪ್ರತ್ಯೇಕತಾವಾದಿಗಳಿಗೆ ಕುಮ್ಮಕ್ಕು, ಶಿಕ್ಷಣದ ಕೋಮುವಾದೀಕರಣ...... ರಾಜಕೀಯ ನೈತಿಕತೆಯೇ ಇಲ್ಲದ ನಿರ್ಲಜ್ಜ ನಡವಳಿಕೆ..... **ಇಲ್ಲ ಈ ಸರ್ಕಾರ ಎಂದೋ ತೊಲಗಬೇಕಿತ್ತು..**

ಸರ್ಕಾರದ ಪತನದಿಂದ ದೇಶದ ಜನರು ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಾರೆ. ಸಂಕಟವಾಗುತ್ತಿರುವುದು ಭ್ರಷ್ಟಾಚಾರಿಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ, ಕಾಳಸಂತೆಕೋರರಿಗೆ..., ದೇಶಿಯ ಗುತ್ತೇದಾರ ರಿಗೆ, ಅವರುಗಳ ಮುಖವಾಣಿಗಳಾಗಿರುವ ಮಾಧ್ಯಮಗಳಿಗೆ... ಅದಕ್ಕಲ್ಲವೇ ಇಷ್ಟೊಂದು ಗೊಂದಲಗಳನ್ನು ಹುಟ್ಟು ಹಾಕುತ್ತಿರುವುದು.

ಅಸ್ಥಿರತೆ ಯಾರಿಗೆ?

ಇದು ಸಮ್ಮಿಶ್ರ ಸರ್ಕಾರಗಳ ಅವಧಿ. ಏಕಪಕ್ಷದ ಪ್ರಭುತ್ವವನ್ನು ದೇಶದ ಪ್ರಬುದ್ಧ ಮತದಾರರು ತಿರಸ್ಕರಿಸಿದ್ದಾರೆ. ಇಂತಹ ಪ್ರಭುತ್ವ, ಪ್ರಬಲವಾಗಿದ್ದು ಜನರ ಸುಲಿಗೆ, ದಬ್ಬಾಳಿಕೆಗಳು ಅಡೆತಡೆಯಿಲ್ಲದೇ ನಡೆಯಕೂಡದು ಎಂಬುದು ಈ ತೀರ್ಪಿನ ಹಿಂದಿರುವ ಸತ್ವ. ಅಸ್ಥಿರತೆ ಎಂಬುದು ಆಳುವ ವರ್ಗಗಳಿಗೆ ಉಂಟಾಗಿರುವ ಸ್ಥಿತಿ. ಒಮ್ಮೆ ಕಾಂಗ್ರೆಸ್, ಇನ್ನೊಮ್ಮೆ ಬಿಜೆಪಿ. ಅಥವಾ ಆಯಾ ರಾಜ್ಯಗಳಲ್ಲಿ ಆಳುತ್ತಿರುವ ಭೂಮಾಲಕ, ಬಂಡವಾಳಶಾಹಿ ಪಕ್ಷಗಳಿಗೆ ಮತದಾರರು ಸೋಲು ನೀಡಿದ್ದಾರೆ. ಹೊಸ ಹೊಸ ಪಕ್ಷಗಳನ್ನು ಬೆಂಬಲಿಸಿದ್ದಾರೆ. ಕಾರಣ ದಿವಾಳಿಕೋರ ಆರ್ಥಿಕ ನೀತಿಗಳಿಂದಾಗಿ ಮತ್ತು ಕೋಮುವಾದದ ಅಪಾಯಗಳಿಂದಾಗಿ ಮತದಾರರು ಸರ್ಕಾರಗಳನ್ನು ಬದಲಿಸುತ್ತಾ ಬಂದಿದ್ದಾರೆ. ಇಂತಹ ಸನ್ನಿವೇಶದಲ್ಲಿ ಜನರ ಮನಸ್ಸನ್ನು



ಗೆಲ್ಲಲು ಬಲಪಂಥೀಯ ಪಕ್ಷಗಳಿಗೆ ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ದೇಶದ ಪ್ರಜಾಪ್ರಭುತ್ವೀಯ ಸಂಸದೀಯ ವ್ಯವಸ್ಥೆಯನ್ನು ಬುಡಮೇಲು ಮಾಡಬೇಕೆ? ಅಥವಾ ಈ ಪಕ್ಷಗಳು ತಮ್ಮ ಜನವಿರೋಧಿ ನೀತಿಗಳನ್ನು ಬದಲಾಯಿಸಿಕೊಳ್ಳಬೇಕೆ? ಅಧ್ಯಕ್ಷೀಯ, ಸರ್ಕಾರ ಎರಡು ಪಕ್ಷಗಳು ವ್ಯವಸ್ಥೆ ಎಂಬ ಮಾತುಗಳೆಲ್ಲಾ ಪ್ರಜಾಸತ್ತೆಗೆ ವಿರೋಧವಾದ ಪಿತೂರಿಗಳ ಭಾಗವಾಗಿದೆ.

ದೇಶವು ಇಂತಹ ಅನೇಕ ಸಂದಿಗ್ಧ ಸ್ಥಿತಿಯನ್ನು ಎದುರಿಸುತ್ತಾ ಬರುತ್ತಿರುವಾಗ ದೊಡ್ಡ ವಿರೋಧ ಪಕ್ಷವಾಗಿ, ಕಾಂಗ್ರೆಸ್ ಪಕ್ಷವು ಬಿಜೆಪಿ ಸರ್ಕಾರವನ್ನು ಅಧಿಕಾರದಿಂದ ತೊಲಗಿಸಲು ಪ್ರಯತ್ನಿಸಬೇಕಿತ್ತು. ಆದರೆ ಆ ದಿಶೆಯಲ್ಲಿ ಯತ್ನಿಸಲಿಲ್ಲ. ಈಗಲೂ ಸರ್ಕಾರ ಪತನವಾದ ಮೇಲೆ ಸಹಜವಾಗಿಯೇ ಕಾಂಗ್ರೆಸ್ ಮೇಲಿತ್ತು ಪರ್ಯಾಯ ಸರ್ಕಾರ ರಚಿಸುವ ಹಾಗೂ ದೇಶವನ್ನು ಕೋಮುವಾದಿಗಳ ಪೀಡೆಯಿಂದ ಪಾರು ಮಾಡುವ ಹೊಣೆ. ಆದರೆ ಕಾಂಗ್ರೆಸ್ ಈ ಜವಾಬ್ದಾರಿಯನ್ನು ಹೊಣೆಗಾರಿಕೆಯಿಂದ ನಿರ್ವಹಿಸಲಿಲ್ಲ. ಧರ್ಮನಿರಪೇಕ್ಷವಾದ ಮೂರನೇ ರಂಗದ ಸರ್ಕಾರ ರಚನೆಗೊಳ್ಳುವ ಪ್ರಕ್ರಿಯೆಗೆ ಬೆಂಬಲ ನೀಡುವುದು ಅವರ ಹೊಣೆಯಾಗಿತ್ತು. ಆದರೆ ಕಾಂಗ್ರೆಸ್ ಪೂರ್ಣವಾಗಿ ತನ್ನದೇ ಸರ್ಕಾರ ರಚಿಸಲು ಮುಂದಾಯಿತು. ಇಂತಹ ಪ್ರಯತ್ನಕ್ಕೆ ಇತರೆ ಕೆಲವು ಪಕ್ಷಗಳು ಅವರ ರಾಜ್ಯಗಳ ರಾಜಕೀಯ ಪ್ರಶ್ನೆಗಳನ್ನೇ ನೋಡಿ ಬೆಂಬಲಿಸಿದಿರುವಾಗ ಸಮ್ಮಿಶ್ರ ಸರ್ಕಾರಕ್ಕಾಗಿ ಪ್ರಯತ್ನಿಸಬೇಕಾಗಿತ್ತು. ಆದರೆ ಸರ್ಕಾರ ರಚನೆಯ ಪ್ರಕ್ರಿಯೆಯನ್ನು ಕಾಂಗ್ರೆಸ್ ಕೈಬಿಟ್ಟಿತು ಮಾತ್ರವಲ್ಲ ತೃತೀಯ ರಂಗ ಸರ್ಕಾರ ರಚಿಸುವ ಅವಕಾಶವನ್ನೂ ತಿರಸ್ಕರಿಸಿತು. ತನ್ನ ಪಕ್ಷವೊಂದೇ ಸರ್ಕಾರ ರಚಿಸಿ ಅಧಿಕಾರದಲ್ಲಿ ಉಳಿಯಬೇಕು ಎಂಬ ಅದರ ಧೋರಣೆ ಏಕಪಕ್ಷೀಯ ಸರ್ವಾಧಿಕಾರತನದ್ದು. ಯಾವುದೇ ಒಂದೇ ಪಕ್ಷ ಅಧಿಕಾರ ನಡೆಸುವ ಸ್ಥಿತಿ ಈಗ ಅಸಾಧ್ಯವಾಗಿದೆ.

ಉಳಿದವರನ್ನೇಕೆ ದೂರಬೇಕು?

ಪರ್ಯಾಯ ಸರ್ಕಾರದ ರಚನೆ ಸಾಧ್ಯವಿಲ್ಲವೆಂದಾದರೆ ಸರ್ಕಾರ ಉರುಳಿಸಬಾರದಿತ್ತು ಇದು ಬಿಜೆಪಿ ವಾದ. ಅದನ್ನೇ ಹಲವಾರು ಮಾಧ್ಯಮಗಳು, ಪತ್ರಿಕೆಗಳು ದಿನದಿನವೂ ಕಾರುತ್ತಿವೆ. ಅಂದರೆ ದೇಶದಲ್ಲಿ ಹಿಂದೆಂದೂ ಇಲ್ಲದಂತೆ ಕ್ರಿಶ್ಚಿಯನ್ ನರಮೇಧ ನಡೆದರೂ, ಶಿಕ್ಷಣ, ಸೈನ್ಯ, ಆಡಳಿತದ ಕೋಮುವಾದೀಕರಣವಾದರೂ, ದೇಶದ ಜನರೆಲ್ಲ ಆತಂಕಕ್ಕೊಳಗಾದರೂ ಸಂಸತ್ ಸದಸ್ಯರು ಈ ಸರ್ಕಾರವನ್ನು ರಕ್ಷಿಸಬೇಕು. ಕೋಮುವಾದಿ ಪಡೆಗಳು ಮತ್ತಷ್ಟು ಕ್ರೌರ್ಯಗಳನ್ನು ನಡೆಸಲು ಬಿಡಬೇಕು. ಬೆಲೆ ಏರಿಕೆಯ ಬೇಗೆಯಲ್ಲಿ ಕೈಗಾರಿಕೆ, ಕೃಷಿಗಳ ನಾಶವಾಗುವ ಆಮದು ರಫ್ತು ನೀತಿಗಳಿಂದ ದೇಶದ ಜನರೆಲ್ಲ ಬೆಂದರೂ ಸುಮ್ಮನಿರಬೇಕು. ಇದು ಅವರ ವಾದದ ಅರ್ಥ. ಅಣ್ಣಾ ಡಿಎಂಕೆ ಬಿಜೆಪಿ ಕೂಟ ಸರ್ಕಾರದಿಂದ ಹೊರನಡೆದು ಆ ಅಪವಿತ್ರ ಮೈತ್ರಿ ಕೂಟ ಕುಸಿದರೆ ಆಗ ಬಿಜೆಪಿಯ ವಿರುದ್ಧ ಮತ ಪಡೆದ ವಿರೋಧ ಪಕ್ಷಗಳು ತಮಗೆ ಮತ ನೀಡಿದ ಜನರಿಗೆ ವಂಚಿಸಿ ಈ ಸರ್ಕಾರವನ್ನು ರಕ್ಷಿಸಿಕೊಳ್ಳಬೇಕೇ? ಅಥವಾ ತಮ್ಮ ಸರ್ಕಾರವನ್ನು ರಕ್ಷಿಸಿಕೊಳ್ಳುವ ಹೊಣೆ ಮೈತ್ರಿಕೂಟಕ್ಕೆ ಇಲ್ಲವೇ? ಅದಕ್ಕಾಗಿ ಹೇಳಬಾರದ ಪ್ರಯತ್ನಗಳನ್ನೆಲ್ಲಾ ಮಾಡಲಿಲ್ಲವೆ? ಅವರು ಯಶಸ್ವಿಯಾಗಲಿಲ್ಲವಾದರೆ ಉಳಿದವರನ್ನೇಕೆ ದೂರಬೇಕು? ಇದು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾದ ಪ್ರಶ್ನೆ.

ಇಂತಹ ಸನ್ನಿವೇಶದಲ್ಲಿ ಮತ್ತೆ ಜನರ ಮುಂದೆ ಸಾರ್ವತ್ರಿಕ ಚುನಾವಣೆಗಳು ಬಂದಿವೆ. ಇದು ಅನಪೇಕ್ಷಿತವಾದರೂ ಅನಿವಾರ್ಯವಾಗಿದೆ. ಇದನ್ನೊಂದು ಅವಕಾಶವಾಗಿ ದೇಶದ ಜನತೆ ಪರಿಗಣಿಸಬೇಕು. ಮುಂದಿನ ಚುನಾವಣೆಯಲ್ಲಿ ಕೋಮುವಾದೀ, ಫ್ಯಾಸಿಸ್ಟ್ ಮನೋಭಾವದ ಬಿಜೆಪಿ, ಮಿತ್ರಕೂಟವನ್ನು ಸೋಲಿಸಿ ಧೂಳೀಪಟ ಮಾಡಬೇಕಿದೆ. ಮೂರನೇ ರಂಗವು ಪರ್ಯಾಯವಾಗಿ ಪ್ರಜಾಪ್ರಭುತ್ವ ಧರ್ಮನಿರಪೇಕ್ಷತೆಯ ಆಧಾರದಲ್ಲಿ, ಸ್ಥಳೀಯ ದ್ವಂದ್ವಗಳನ್ನು ಬದಿಗಿರಿಸಿ ಒಂದಾಗಬೇಕಿದೆ. ಎಡ, ಪ್ರಜಾಪ್ರಭುತ್ವೀಯ, ಧರ್ಮನಿರಪೇಕ್ಷತೆಯ ಶಕ್ತಿಗಳೆಲ್ಲಾ ಒಂದು ಗೂಡಬೇಕು.. ಪ್ರಭಾವ ವಿಸ್ತರಿಸಬೇಕು. ಕರಾಳ ಬಿಜೆಪಿ ಹಾಗೂ ಮಿತ್ರ ಪಕ್ಷಗಳನ್ನು ಬಯಲಿಗೆಳೆಯಬೇಕು. ಇದು ದೇಶ ಉಳಿಸಲು ಈಗಿರುವ ಮಾರ್ಗ.

- ಎಸ್.ವೈ.ಗುರುಶಾಂತ್

ಮುಳವಾಡ ಯಾತ ನೀರಾವರಿ ಪೂರ್ಣಗೊಳಿಸಲು ಧರಣಿ ಸತ್ಯಾಗ್ರಹ

ಪಂಚನದಿಗಳ ಬೀಡು ಬಿಜಾಪುರ ಜಿಲ್ಲೆ. ಆದರೆ ಬರಗಾಲದ ನೆಲೆ ಬೀಡೂ ಬಿಜಾಪುರ ಜಿಲ್ಲೆ. ಬಿಜಾಪುರ ಜಿಲ್ಲೆಯ ಕರಿಮಣ್ಣಿನಲ್ಲಿ ಉತ್ತಮ ಹತ್ತಿ ಮತ್ತು ಶೇಂಗಾ (ನೆಲಕಡಲೆ) ಬೆಳೆಯುತ್ತಿದ್ದು ನಮ್ಮ ದೇಶದ ಹತ್ತಿ ಗಿರಣಿ ಮತ್ತು ಎಣ್ಣೆ ಕೈಗಾರಿಕೆಗೆ ಇವೆರಡರ ಅವಶ್ಯಕತೆಯಿದ್ದು ಅದನ್ನು ಪೂರೈಸುವ ಉದ್ದೇಶದಿಂದಲೇ ಬ್ರಿಟಿಷರು ಕೃಷ್ಣಾ ಮೇಲ್ದಂಡ ಯೋಜನೆಯ ರೂಪರೇಶೆ ತಯಾರಿಸಿದ್ದರು. ಅದರಲ್ಲಿ ನೀರಾವರಿ, ವಿದ್ಯುತ್ ಉತ್ಪಾದನೆಯ (ಛಾಯಾ-ಭಗವತಿ, ಆಲಮಟ್ಟಿ) ಅಂಶಗಳೂ ಒಳಗೊಂಡಿದ್ದವು. ಸ್ವಾತಂತ್ರ್ಯ ಸಿಕ್ಕ ನಂತರ ಈ ಯೋಜನೆಗಳ ಅನುಷ್ಠಾನಕ್ಕಾಗಿ ಅಂದಿನ ಕಮ್ಯುನಿಷ್ಟ್ ಪಾರ್ಟಿ ಹಲವಾರು ಹೋರಾಟಗಳನ್ನು ಸಾರ್ವಜನಿಕರ ಬೆಂಬಲದಿಂದ ನಡೆಸುತ್ತಾ ಬಂದಿತ್ತು. ಕೇಂದ್ರ-ರಾಜ್ಯ ಸರಕಾರಗಳು ಅದರತ್ತ ಗಮನಹರಿಸಲು ನಿರಾಕರಿಸಿದಾಗ 1964 ರಲ್ಲಿ ಕಮ್ಯುನಿಸ್ಟ್ ಪಾರ್ಟಿ ನೇತೃತ್ವದಲ್ಲಿ 30 ದಿವಸಗಳ ಅನ್ನ ಸತ್ಯಾಗ್ರಹ ಬಿಜಾಪುರ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ನಡೆದಾಗ ಕೇಂದ್ರ ಸರಕಾರ ಅದರತ್ತ ಗಮನ ಹರಿಸಿ, ಅಂದಿನ ಕೇಂದ್ರದ ನೀರಾವರಿ ಮಂತ್ರಿ ಡಾ. ಕೆ. ಎಲ್. ರಾವ್ ಅವರನ್ನು ಬಿಜಾಪುರಕ್ಕೆ ಕಳುಹಿಸಿ ಸ್ಥಳ ವೀಕ್ಷಣೆ ನಡೆಸಿದ ನಂತರ ಅಂದಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರಿಂದ ಅಡಿಗಲ್ಲು ಹಾಕಲಾಯಿತು. ಆಗಿನ ಅಂದಾಜಿನ ಪ್ರಕಾರ 10 ಲಕ್ಷಕ್ಕೂ ಹೆಚ್ಚು ಪ್ರದೇಶಕ್ಕೆ (ಎಕ್ರೆ) ನೀರು ಒದಗಿಸುವ ಈ ಯೋಜನೆಯ ಖರ್ಚು ರೂ. 100 ಕೋಟಿ ಮಾತ್ರ. ಆದರೆ ಕೇಂದ್ರ-ರಾಜ್ಯ ಸರಕಾರಗಳೆರಡೂ ಈ ಯೋಜನೆಯ ಕುರಿತು ನಿಷ್ಕಾಳಜಿವಹಿಸಿದ್ದರಿಂದ ಸಾಕಷ್ಟು ಹಣ ಮಂಜೂರಾಗದೆ ಯೋಜನೆ ಕುಂದುತ್ತಾ ನಡೆಯಿತು. ಇಂಜಿನಿಯರು, ನೌಕರರೆಲ್ಲ ಕೆಲಸವಿಲ್ಲದೆ ಸರಕಾರಿ ಖಜಾನೆಗೆ ಭಾರವಾಗುಳಿದರು. ಮುಳುಗಡೆ ಹೆಸರಿನಲ್ಲಿ ಕೋಟ್ಯಾವಧಿ ರೂಪಾಯಿ ವಿನಾಕಾರಣ ವ್ಯಯವಾಗುತ್ತ ನಡೆಯಿತು. ರೈತ ಸಂಘ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಹಾಗೆಯೇ ಸಾರ್ವಜನಿಕರ ನಿರಂತರ ಪ್ರತಿಭಟನೆ, ಹೋರಾಟ, ಈ ಯೋಜನೆ ಕುರಿತು ಆಂಧ್ರ ಸರಕಾರ ಮೇಲಿಂದ ಮೇಲೆ ಎಬ್ಬಿಸುತ್ತಿದ್ದ ತಕರಾರುಗಳಿಂದಾಗಿ ರಾಜ್ಯ ಸರಕಾರ ಇತ್ತೀಚಿನ 2-3 ವರ್ಷಗಳಲ್ಲಿ ಈ ಯೋಜನೆಯತ್ತ ಹೆಚ್ಚು ಕಾಳಜಿ ವಹಿಸಿ 4000 ಕೋಟಿ ರೂಪಾಯಿಯಷ್ಟು ಖರ್ಚುಮಾಡಿದೆ. ಆದರೆ ಕಾಲುವೆ ತೋಡುವ ಕೆಲಸ ಅಸಮರ್ಪಕವಾಗಿದೆ. ಯಾತ ನಿರಾವರಿ ಕೆಲಸಗಳು ಕುಂಟುತ್ತ ನಡೆದಿವೆ. ಒಂದುನೂರು ಕೋಟಿ ರೂ.ಯಲ್ಲಿ ಮುಗಿಯಬೇಕಾದ ಯೋಜನೆಗೆ ರೂ. 5000ಕೋಟಿಗೂ ಹೆಚ್ಚು ಖರ್ಚಾಗುವ ಸಾಧ್ಯತೆಯಿದೆಯೆಂದು ಸರಕಾರವೇ ಹೇಳುತ್ತಿದೆ. 2000 ಇಸವಿಯೊಳಗಾಗಿ ಈ ಯೋಜನೆಗಳೆಲ್ಲ ಮುಗಿದು ನಮ್ಮ ಪಾಲಿನ ನೀರು ಬಿಜಾಪುರ ರಾಯಚೂರು, ಗುಲ್ಬರ್ಗಾ ಜಿಲ್ಲೆಗಳ ರೈತರಿಗೆ ಲಭ್ಯವಾಗಬೇಕಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ಅಂಗವಾಗಿ ಬಸವನ ಬಾಗೇವಾಡಿ ತಾಲೂಕಿನಲ್ಲಿ ಮುಳವಾಡ ಯಾತ ನೀರಾವರಿ ಯೋಜನೆ ರೂಪಿಸಲಾಗಿದೆ. ಬಿಜಾಪುರ, ಬಸವನಬಾಗೇವಾಡಿ ಮತ್ತು ಜಮಖಂಡಿ ತಾಲೂಕಿನ ಕೆಲವು ಭಾಗ ಕೃಷ್ಣಾನದಿಗಿಂತ ಎತ್ತರದಲ್ಲಿದ್ದು ಆಲಮಟ್ಟಿಯಲ್ಲಿ ನೀರು ಸಂಗ್ರಹವಾದರೂ ಈ ತಾಲೂಕಿನ ಭೂಮಿಗೆ ನೀರು, ಸಿಗಲಾರದಂಥ ಪರಿಸ್ಥಿತಿ ಇರುವುದರಿಂದಲೇ ಮುಳವಾಡಯಾತ ನೀರಾವರಿ ಯೋಜನೆ ಕೈಗೊಳ್ಳಲಾಯಿತು. ಈ ಯೋಜನೆ ಪೂರ್ಣವಾದರೆ ಬಸವನ ಬಾಗೇವಾಡಿ ತಾಲೂಕಿನ 41,648 ಎಕ್ರೆ, ಜಮಖಂಡಿಯ 14,653 ಎಕ್ರೆ, ಬಿಜಾಪುರದ 20,820 ಎಕ್ರೆ, ಭೂಮಿಗೆ ನೀರು ಲಭ್ಯವಾಗುತ್ತದೆ. ಆಲಮಟ್ಟಿಯ ಯೋಜನೆಯ ಜೊತೆಯಲ್ಲಿಯೇ ಮುಳವಾಡಯಾತ ನೀರಾವರಿ ಯೋಜನೆಯನ್ನು ಕೈಗೊಳ್ಳಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿ.ಪಿ.ಐ(ಎಂ) ಹೋರಾಡುತ್ತಲೇ ಬಂದ ಪರಿಣಾಮವಾಗಿ ಕೆಲಸ ಪ್ರಾರಂಭವಾಗಿ 2-3 ಕೋಟಿ ರೂ. ಖರ್ಚುಮಾಡಲಾಗಿದೆ.

1983ರಲ್ಲಿ ರೈತ ಸಂಘ ಮತ್ತು ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬಿಜಾಪುರದಲ್ಲಿ ಆಮರಣ ಉಪವಾಸ ಕೈಗೊಂಡ ಪರಿಣಾಮವಾಗಿ ಮುಳವಾಡ ಯಾತ ನೀರಾವರಿಗಾಗಿ ಚೀಫ್ ಇಂಜಿನಿಯರ್ ಕಚೇರಿ ಸ್ಥಾಪನೆಮಾಡಲಾಯಿತು. ಕೆಲಸ ಪ್ರಾರಂಭಮಾಡಲಾಯಿತು. ಆದರೆ ಪ್ರಗತಿ ಕಾಣಲಿಲ್ಲ. 1988ರಲ್ಲಿ 33 ಮಠಾಧೀಶರು ನೀಲಗುಂದ ಸ್ವಾಮಿಯವರ ನೇತೃತ್ವದಲ್ಲಿ ಹೋರಾಟ ನಡೆಯಿತು. ರೈತ ಸಂಘದ ಮುಖಂಡ ಭೀಮಸಿ ಕಲಾದಗಿಯವರನ್ನೊಳಗೊಂಡು ಹಲವಾರು ಜನರು ಜೈಲುವಾಸ ಅನುಭವಿಸಬೇಕಾಯಿತು. ಬಂಗಾರಪ್ಪನವರ ಆಶ್ವಾಸನೆ ಸ್ವಲ್ಪ ಹಣ ಬಿಡುಗಡೆಯಲ್ಲಿ ಹೋರಾಟ ಮುಗಿಯಿತು. 1995ರಲ್ಲಿ ಬಾಗೇವಾಡಿ ತಾಲೂಕಿನ ಮಟ್ಯಾಳ ಕ್ರಾಸಿನಲ್ಲಿ ರೈತ ಸಂಘದ ಯಶಸ್ವಿ ಹೋರಾಟ ನಡೆದು ಆಗ ನೀರಾವರಿ ಮಂತ್ರಿಗಳಾಗಿದ್ದ ಮುದ್ದಪ್ಪ ಮುನಿಯಪ್ಪನವರು, ಚಂದ್ರಶೇಖರ ಬಾಳೆಯವರ ಜೊತೆಯಲ್ಲಿ ಸತ್ಯಾಗ್ರಹ ಶಿಬಿರಕ್ಕೆ ಬಂದು ರೂ. 17 ಕೋಟಿ ಮಂಜೂರುಮಾಡಿ ಯೋಜನೆಗೆ ಚಾಲನೆ ನೀಡಿದರು. ಆದರೆ ಹಣ ಖರ್ಚಾಗುತ್ತಿದೆ. ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಇನ್ನು 6-7 ತಿಂಗಳೊಳಗೆ ಕೆಲಸ ಮುಗಿಸಬೇಕಾಗಿರುವುದರಿಂದ ಕರ್ನಾಟಕ ಪ್ರಾಂತ ರೈತ ಸಂಘದ ಬಿಜಾಪುರ ಜಿಲ್ಲಾ ಘಟಕ 26-4-99 ರಿಂದ ಬಸವನ ಬಾಗೇವಾಡಿಯಲ್ಲಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಪ್ರಾರಂಭಿಸಿದೆ. ಮಧ್ಯಾಹ್ನ 12 ಗಂಟೆಗೆ ಬಸವೇಶ್ವರ ಗುಡಿಯಿಂದ ರೈತರ ಬೃಹತ್ ಮೆರವಣಿಗೆ ತಹಶೀಲದಾರ ಕಚೇರಿಗೆ ಹೋಗಿ ಬಿಜಾಪುರದಿಂದ ಆಗಮಿಸಿದ ಅಸಿಸ್ಟೆಂಟ್ ಕಮಿಶನರಿಗೂ, ತಹಶೀಲ್ದಾರರಿಗೂ ಮನವಿಯನ್ನರ್ಪಿಸಿ ಎಚ್ಚರಿಕೆ ಗಂಟೆ ಬಾರಿಸಿತು. ಸಿ.ಪಿ.ಐ(ಎಂ) ಮುಖಂಡ ಎನ್.ಕೆ. ಉಪಾಧ್ಯಾಯ, ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ, ಜನವಾದಿ ಮಹಿಳಾ ಸಂಘಟನೆಯ ಸುರೇಖಾ ರಜಪೂತ ವಿದ್ಯಾರ್ಥಿ ಸಂಘದ ಪಾಟೀಲ ಮೊದಲಾದವರು ಭಾಷಣ ಮಾಡಿ ಹೋರಾಟಕ್ಕೆ ಯಶ ಕೋರಿದರು. ರೈತ ಮುಂಖಂಡರಾದ ರಾಮಚಂದ್ರ, ರೋಡಗಿ, ನಭೀಸಾಬ, ಧವಳಗಿ, ಸಾಯಬಣ್ಣ ಹಂದಿಗಮಾರು, ವೈ.ಎಸ್. ಮಮದಾಪುರ, ಶರಣಪ್ಪ ಹಳ್ಳಿ, ಸುಭಾಷ್‌ಗೌಡ ಪಾಟೀಲ ಮೊದಲಾದವರು ಮುಖಂಡತ್ವವಹಿಸಿದ್ದಾರೆ. ಸಾರ್ವಜನಿಕರು ಈ ಹೋರಾಟವನ್ನು ಸ್ವಾಗತಿಸಿ ಧರಣೆಯಲ್ಲಿ ಭಾಗವಹಿಸಲು ಉತ್ಸಾಹ ತೋರಿಸುತ್ತಿದ್ದಾರೆ. ತನು, ಮನ,ಧನದಿಂದ ಸಹಾಯ ಮಾಡುತ್ತಿದ್ದಾರೆ.

- ಎನ್. ಕೆ. ಉಪಾಧ್ಯಾಯ

ಅಂಗನವಾಡಿ ನೌಕರರ ಯಶಸ್ವಿ ಮಂಡ್ಯ ಜಿಲ್ಲಾ ಸಮ್ಮೇಳನ

ಕಡುಬಡತನದಲ್ಲಿ ದುಡಿಯುತ್ತಿರುವ ಅಂಗನವಾಡಿ ನೌಕರರ ಪ್ರಥಮ ಮಂಡ್ಯ ಜಿಲ್ಲಾ ಸಮ್ಮೇಳನದ ಉದ್ಘಾಟನಾ ಸಮಾರಂಭ ಏಪ್ರಿಲ್ 4 ರಂದು ಬೆಳಿಗ್ಗೆ 12 ಗಂಟೆಗೆ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ನಡೆಯಿತು. ಈ ಸಮ್ಮೇಳನದ ಉದ್ಘಾಟನೆಯನ್ನು ಸಿ.ಐ.ಟಿ.ಯು ರಾಜ್ಯ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ನೆರವೇರಿಸಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಕನಿಷ್ಠ ಜೀವನ ನಡೆಸಲು ಅಗತ್ಯವಾದ ಸಂಬಳವನ್ನು ನಿಗಧಿಗೊಳಿಸಬೇಕು ಹಾಗೂ ರಾಜ್ಯ ಮತ್ತು ಕೇಂದ್ರ, ಸರ್ಕಾರಗಳೆರಡೂ ಶ್ರೀಸಾಮಾನ್ಯರನ್ನು ಕಡೆಗಣಿಸಿ ಶ್ರೀಮಂತರನ್ನು ಬೆಂಬಲಿಸುತ್ತಿವೆ. ಬಿ.ಜೆ.ಪಿ. ನೇತೃತ್ವದ ಕೇಂದ್ರ ಸರ್ಕಾರ ಮತಾಂಧತೆಯಿಂದ ತುಂಬಿ ಕ್ರೈಸ್ತರು, ಮುಸಲ್ಮಾನರು ಹಾಗೂ ದಲಿತರ ಮೇಲೆ ಧಾಳಿ ನಡೆಸುತ್ತಿದೆ. ಜನತಾ ದಳ ನೇತೃತ್ವದ ರಾಜ್ಯ ಸರ್ಕಾರದ ಚುಕ್ಕಾಣಿ ಹಿಡಿದಿರುವ ಜೆ. ಹೆಚ್. ಪಟೇಲರು ಸಮಾಜವಾದಿಗಳೆನಿಸಿಕೊಂಡು ಬಂಡವಾಳಶಾಹಿಗಳಂತೆ ನಡೆದುಕೊಳ್ಳುತ್ತಿದ್ದಾರೆ. ದೇಶವನ್ನು ಆಳಿರುವ ಕಾಂಗ್ರೆಸ್, ಬಿ.ಜೆ.ಪಿ., ಜನತಾ ದಳ ಭ್ರಷ್ಟ ಪಕ್ಷಗಳಾಗಿದ್ದು ಸ್ವಾತಂತ್ರ್ಯ ಬಂದು 50 ವರ್ಷ ಕಳೆದರೂ ಹಿಂದುಳಿದ, ಅಲ್ಪ ಸಂಖ್ಯಾತ ಹಾಗೂ ಬಡಜನರ ಕಲ್ಯಾಣಕ್ಕಾಗಿ ದುಡಿದಿಲ್ಲ ಎಂದರು. ಸಮಾರಂಭದಲ್ಲಿ ಸಿ.ಐ.ಟಿ.ಯು ಜಿಲ್ಲಾಧ್ಯಕ್ಷರಾದ ಶಂಕರಯ್ಯ, ಸಿ.ಪಿ.ಐ(ಎಂ) ಜಿಲ್ಲಾ ಪ್ರಾದೇಶಿಕ ಸಮಿತಿ ಕಾರ್ಯದರ್ಶಿಯವರಾದ ಎಂ. ಪುಟ್ಟಮಾದು, ಜಿಲ್ಲಾ ಗ್ರಾಮ ಪಂಚಾಯಿತಿ ನೌಕರರ ಕಾರ್ಯದರ್ಶಿ ಮೂರ್ತಿ, ಸಿ.ಐ.ಟಿ.ಯು ಜಿಲ್ಲಾ ಕಾರ್ಯದರ್ಶಿ ಹನುಮಂತು, ಮಂಡ್ಯ ತಾಲ್ಲೂಕು ಅಂಗನವಾಡಿ ನೌಕರರ ಸಂಘದ ಕಾರ್ಯದರ್ಶಿ ಪುಷ್ಪಾವತಿ, ಅಧ್ಯಕ್ಷರಾದ ಪಂಕಜ, ಮಳವಳ್ಳಿಯ ಅಂಗನವಾಡಿ ಮುಖಂಡರಾದ ವಿ.ಜಯಲಕ್ಷ್ಮಿ ಮದ್ದೂರಿನ ರತ್ನಮ್ಮ ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಎಸ್. ವರಲಕ್ಷ್ಮಿ ವಹಿಸಿದ್ದರು. ಜಿಲ್ಲಾ ಅಂಗನವಾಡಿ ನೌಕರರ ಸಂಘಟನಾ ಸಮಿತಿಯ ಸಂಚಾಲಕರಾದ ಡಿ.ಸಿ. ಚೌಡೇಗೌಡರು ಸ್ವಾಗತಿಸಿ, ಪ್ರಭಾಮಣಿಯವರು ವಂದಿಸಿದರು. ಸಮಾರಂಭದ ನಿರೂಪಣೆಯನ್ನು ಮಳವಳ್ಳಿ ತಾಲ್ಲೂಕು ಅಂಗನವಾಡಿ ನೌಕರರ ಮುಖಂಡರಾದ ಶಾರದಮ್ಮನವರು ನಿರ್ವಹಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಸುಮಾರು 1000 ಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಭಾಗವಹಿಸಿದ್ದರು.

ನಂತರ ಮಂಡ್ಯ ನಗರದ ಲಕ್ಷ್ಮಿಜನಾರ್ಧನ ಬಾಲಕಿಯರ ಪ್ರೌಢಶಾಲೆಯಲ್ಲಿ ಏಪ್ರಿಲ್ 4-5 ರಂದು ಎರಡು ದಿವಸ ಸಮ್ಮೇಳನ ಯಶಸ್ವಿಯಾಗಿ ಜರುಗಿತು. ಈ ಸಮ್ಮೇಳನದಲ್ಲಿ 100 ಜನ ಪ್ರತಿನಿಧಿಗಳು ಭಾಗವಹಿಸಿ ಐ.ಸಿ.ಡಿ.ಎಸ್. ಯೋಜನೆಯ ಜಾರಿಯ ಮಹತ್ವ ಹಾಗೂ ಅಗತ್ಯಗಳ ಬಗ್ಗೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಹಾಗೂ ನೌಕರರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಾಯಿತು. ದೇಶದಲ್ಲಿ ಹಿಂದಿನ ಸರ್ಕಾರಗಳು ಹಾಗೂ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿ.ಜೆ.ಪಿ. ಸರ್ಕಾರ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿಯನ್ನು ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಕೊಡುತ್ತೇವೆಂದು ಪೊಳ್ಳು ಆಶ್ವಾಸನೆ ಕೊಡುತ್ತಾ ಬಂದಿವೆ. ಆದ್ದರಿಂದ ಮುಂದೆ ಈ ಪೊಳ್ಳು ಆಶ್ವಾಸನೆಗಳನ್ನು ಬಿಟ್ಟು ಮಹಿಳೆಯರಿಗೆ ಶೇ 33 ಮೀಸಲಾತಿಯನ್ನು ಕೊಡಬೇಕೆಂದು ನಿರ್ಣಯ ತೆಗೆದುಕೊಳ್ಳಲಾಯಿತು. ಮತ್ತು ಈ ಹಿಂದೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಸಭೆ ಕರೆದು ಚರ್ಚಿಸಲಾಗಿತ್ತಾದರೂ ಸಂಬಂಧಪಟ್ಟ ಅಧಿಕಾರಿಗಳು ನಿಗಧಿತ ವೇಳೆಯಲ್ಲಿ ವೇತನ ಕೊಡುತ್ತಿಲ್ಲ. ಆರ್ಥಿಕ ಸಮೀಕ್ಷೆ ಹಣ ಕೊಟ್ಟಿಲ್ಲ, ಬಾಡಿಗೆ ಹಣ ಕೊಟ್ಟಿಲ್ಲದಿರುವ ಬಗ್ಗೆ ಹೆರಿಗೆ ಭತ್ಯೆ ಹಾಗೂ ಹಲವಾರು ಸ್ಥಳೀಯ ಸಮಸ್ಯೆಗಳನ್ನು 2 ತಿಂಗಳೊಳಗಾಗಿ ಬಗೆಹರಿಸಬೇಕೆಂದು ಸಮ್ಮೇಳನ ನಿರ್ಣಯ ಅಂಗಿಕರಿಸಿ ಎಚ್ಚರಿಸಿದೆ. ಇಲ್ಲದಿದ್ದರೆ ಮುಂದಿನ ದಿವಸದಲ್ಲಿ ಈ ರೀತಿಯ ಸಮಸ್ಯೆಗಳ ವಿರುದ್ಧ ಉಗ್ರವಾದ ಹೋರಾಟವನ್ನು ಮಾಡಬೇಕಾಗುತ್ತದೆಂದು ಜಿಲ್ಲಾ ಪ್ರಥಮ ಸಮ್ಮೇಳನ ತೀರ್ಮಾನಿಸಿದೆ.

ಕಾರ್ಯಕರ್ತೆಯರಿಗೆ 150-00, ಸಹಾಯಕಿಯರಿಗೆ 75-00 ರೂಗಳನ್ನು ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಪಾಸು ಮಾಡಿರುವುದು ಬಡತನದಲ್ಲಿ ದುಡಿಯುತ್ತಿರುವ ಅಂಗನವಾಡಿ ನೌಕರರಿಗೆ ಸಾಕಾಗುವುದಿಲ್ಲ. ಆದ್ದರಿಂದ ಕನಿಷ್ಠ ಕೂಲಿಯನ್ನು ಜಾರಿಗೆ ತರಬೇಕೆಂದು ಸಮ್ಮೇಳನ ನಿರ್ಣಯ ಕೈಗೊಂಡಿದೆ.

ಸಮ್ಮೇಳನದಲ್ಲಿ ಅಂಗನವಾಡಿ ನೌಕರರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸಮಿತಿಗೆ ಕೆಳಗಿನ ಪದಾಧಿಕಾರಿಗಳು ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿ ಲೋಲಾಕ್ಷಿ, ಉಪಾಧ್ಯಕ್ಷರಾಗಿ ಶಹಜಾನ್, ಕಾರ್ಯದರ್ಶಿಯಾಗಿ ಡಿ.ಸಿ. ಚೌಡೇಗೌಡ, ಸಹ ಕಾರ್ಯದರ್ಶಿಯಾಗಿ ಶಾರದಮ್ಮ, ಖಜಾಂಚಿಯಾಗಿ ಪ್ರಭಾಮಣಿಯವರು ಆಯ್ಕೆಯಾಗಿದ್ದಾರೆ. ಈ ಕಾರ್ಯಕಾರಿ ಸಮಿತಿಗೆ 12 ಜನ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಸಮ್ಮೇಳನದ ಅಂಗವಾಗಿ ಸಮಾರೋಪ ಸಮಾರಂಭ ನಡೆದು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಸಿ.ಪಿ.ಎಂ. ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಶ್ರೀ ಪುಟ್ಟಮಾದಯ್ಯನವರು ಮಹಿಳೆಯರು ಮೌಢ್ಯತೆ ಬಿಟ್ಟು ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಂಡು ಹೋರಾಟದ ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂದು ತಿಳಿಸಿದರು. ಸಿ.ಐ.ಟಿ.ಯು ಜಿಲ್ಲಾ ಕಾರ್ಯದರ್ಶಿ ಹನುಮಂತು ಮಾತನಾಡಿ ಸಂಘಟಿತ ಹೋರಾಟವಲ್ಲದೆ, ಬೇರಾವ ಮಾರ್ಗದಿಂದ ಇಂದಿನ ಸಮಸ್ಯೆಗಳು ಬಗೆಹಿರಿಯುವುದಿಲ್ಲ ಎಂದರು. ಅಂಗನವಾಡಿ ನೌಕರರ ಸಂಘದ ನೂತನ ಜಿಲ್ಲಾಧ್ಯಕ್ಷೆ ಲೋಲಾಕ್ಷಮ್ಮ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಅಂಗನವಾಡಿ ನೌಕರರ ಕಾರ್ಯದರ್ಶಿ ವರಲಕ್ಷ್ಮಿ ಜಿಲ್ಲಾ ಕಾರ್ಯದರ್ಶಿ ಚೌಡೇಗೌಡ, ಸಹಕಾರ್ಯದರ್ಶಿ ಶಾರದಮ್ಮ ಖಜಾಂಚಿಯವರಾದ ಪ್ರಭಾಮಣಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಪಾಧ್ಯಕ್ಷರಾದ ಶಹಜಾನ್ ವಂದನಾರ್ಪಣೆ ಸಲ್ಲಿಸಿದರು.

ಬಿ.ಜೆ.ಪಿ. ನೇತೃತ್ವದ ಸರಕಾರದ ಒಂದು ವರ್ಷದ ವಿನಾಶಕಾರಿ ಆಡಳಿತದ ವಿರುದ್ಧ ಪ್ರಚಾರಾಂದೋಲನ

ಕುಂದಾಪುರ ಬಿಜೆಪಿ ನೇತೃತ್ವದ ಸರಕಾರದ ವಿರುದ್ಧ ರಾಜಕೀಯ ಪ್ರಚಾರದ ಅಂಗವಾಗಿ ಕುಂದಾಪುರ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಏಪ್ರಿಲ್ 12 ರಂದು ಬಸ್ರೂರ್ ಬಸ್ ನಿಲ್ದಾಣದ ಬಳಿ ಸಾರ್ವಜನಿಕ ಸಭೆ ನಡೆಯಿತು. ಬಸ್ರೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಯುತ ಮಹಾಲಿಂಗನವರು ಸಭೆಯ ಅಧ್ಯಕ್ಷತೆ ವಹಿಸಿದರು. ಪಕ್ಷದ ಜಿಲ್ಲಾ ಸಮಿತಿಯ ಸದಸ್ಯರಾದ ದಾಸಭಂಡಾರಿಯವರು ಸ್ವಾಗತಿಸಿ ಪ್ರಚಾರ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು.

ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸಿ.ಪಿ.ಐ.(ಎಂ)ನ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಬಿ. ಮಾಧವನವರು ಮಾತನಾಡಿ ಕೇವಲ ಅಧಿಕಾರ ಲಾಲಸೆಯಿಂದ ಒಟ್ಟಿಗೆ ಸೇರಿದ ಸಂದರ್ಭ ಸಾಧಕರ ಕೂಟದ ಅಸಮರ್ಥ ಆಡಳಿತವು ರಾಷ್ಟ್ರೀಯ ಸಂಪನ್ಮೂಲಗಳನ್ನು ಕೋಟಿಗಟ್ಟಲೆಯಲ್ಲಿ ಖರ್ಚುಮಾಡಿ, ತಾನು ಹೇಗೋ ಎಂದು ವರ್ಷವನ್ನು ಪೂರ್ತಿಗೊಳಿಸಿದ್ದೇ ಮಹತ್ತರ ಸಾಧನೆ ಎಂದು ಕೊಚ್ಚಿಕೊಳ್ಳುತ್ತಿದೆ ಎಂದರು.

ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯ ಹಾಗೂ ತಾಲೂಕು ಸಮಿತಿಯ ಕಾರ್ಯದರ್ಶಿಯವರಾದ ಕೆ. ಶಂಕರರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ವೆಂಕಟೇಶನವರು ಧನ್ಯವಾದಗಳನ್ನ ರ್ಪಿಸಿದರು.

ಭಟ್ಕಳ

ತಾಲೂಕಿನ ನೂರಾರು ಸಿ.ಪಿ.ಐ(ಎಂ) ಕಾರ್ಯಕರ್ತರು, ಕಾರ್ಮಿಕರು, ಸಾರ್ವಜನಿಕರು ಬಂಕ್ರಲ್ ಮೈದಾನದಲ್ಲಿ ಏಪ್ರಿಲ್ 16 ರಂದು ಬಹಿರಂಗ ಸಭೆ ನಡೆಸಿದರು.

ಸಭೆಯನ್ನುದ್ದೇಶಿಸಿ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಸದಸ್ಯ ಕೆ. ಶಂಕರ ಮತ್ತು ಸಿ.ಪಿ.ಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯ ಯು ದಾಸ ಭಂಡಾರಿ ಮಾತನಾಡಿದರು.

ಮೊದಲು ಉ.ಕ.ಜಿಲ್ಲಾ ಸಿ.ಪಿ.ಐ(ಎಂ) ಸಮಿತಿ ಸದಸ್ಯ ತಿಲಕ್‌ಗೌಡ ಸ್ವಾಗತಿಸಿ, ಕೊನೆಯಲ್ಲಿ ಭಟ್ಕಳ ಸಿ.ಪಿ.ಐ.(ಎಂ) ಮುಖಂಡ ಕಾಂ!! ಸುಭಾಸಕೊಪ್ಪೀಕರ್ ವಂದಿಸಿದರು.

ಶುಭಾಶಯ

ಮಂಗಳೂರು ಶಕ್ತಿನಗರ ಡಿ.ವೈ.ಎಫ್.ಐ.ನ ಮುಂದಾಳು ಮೋಹನ್‌ದಾಸ್, ಕಾವೂರಿನ ಗೀತಾರೊಂದಿಗೆ, ಸಂಗಾತಿ ವಿಶಾಲಾಕ್ಷಿ ಶಕ್ತಿನಗರ್ ರವರು ಶ್ರೀವಾಮನ-ಮಳಲಿ ಯುವರೊಂದಿಗೆ ವಿವಾಹವಾದ ಸಂತೋಷದ ಸಂದರ್ಭದಲ್ಲಿ 101 ರೂಪಾಯಿ ಗಳನ್ನು ಐಕ್ಯರಂಗಕ್ಕೆ ನೆನಪಿನ ಕಾಣಿಕೆಯಾಗಿ ನೀಡಿರುತ್ತಾರೆ. ಮೋಹನ್‌ದಾಸ್ ಮತ್ತು ವಿಶಾಲಾಕ್ಷಿಯವರು ಸಿ.ಪಿ.ಐ(ಎಂ) ಮಂಗಳೂರು ನಗರ ಸಮಿತಿ ಸದಸ್ಯರಾದ ಎ. ಈಶ್ವರ ಕುಲಾಲರವರ ಮಕ್ಕಳು. ನೂತನ ದಂಪತಿಗಳಿಗೆ 'ಐಕ್ಯರಂಗ' ಶುಭ ಹಾರೈಸುತ್ತದೆ.



ಕಾಂ. ಕನಕಗಿರಿ ಬಾಳಪ್ಪ ಕರ್ನಾಟಕ ಪ್ರಾಂತ ಕೃಷಿಕೂಲಿಕಾರ ಸಂಘದ ಜಿಲ್ಲ ಸಹ ಸಂಚಾಲಕರು, ಸಿಪಿಐ(ಎಂ)ನ ಗಂಗಾವತಿ ತಾಲ್ಲೂಕು ಸಮಿತಿ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಸಮಿತಿ ಸದಸ್ಯರು. ಅಸ್ಪೃಶ್ಯ ಎನಿಸಿಕೊಂಡ ಜಾತಿಯಲ್ಲಿ ದೇವದಾಸಿಯ ಮಗನಾಗಿ ಹುಟ್ಟಿ, ಬಾಲ್ಯದಿಂದಲೇ ಜೀತಗಾರನಾಗಿ ದುಡಿದು, ಹೋರಾಟದ ಮೂಲಕ ಅದರಿಂದ ಮುಕ್ತಿ ಪಡೆದು ನಂತರ ಅಷ್ಟಕ್ಕೇ ನಿಲ್ಲದೆ ಗಂಗಾವತಿ ತಾಲ್ಲೂಕಿನಲ್ಲಿ ತನ್ನಂತಹ ಕೃಷಿಕೂಲಿಕಾರರ ಹೋರಾಟಗಳನ್ನು ನಡೆಸಿ ಎಲ್ಲಾ ಜಾತಿಗಳ ಕೃಷಿಕೂಲಿಕಾರರ ಮುಖಂಡನಾಗಿ ಬೆಳೆದುಬಂದಿರುವವರು. ಇತ್ತೀಚೆಗೆ ಅವರು ಬೆಂಗಳೂರಿಗೆ ಬಂದಿದ್ದಾಗ 'ಐಕ್ಯರಂಗ'ದೊಡನೆ ತಮ್ಮ ಬದುಕು, ಹೋರಾಟದ ಅನುಭವಗಳನ್ನು ಹಂಚಿಕೊಂಡರು.

ಅಂದು 'ಅಸ್ಪೃಶ್ಯ' ಜೀತಗಾರ - ಇಂದು ಕೃಷಿಕಾರ್ಮಿಕ ಮುಖಂಡ

ಗಂಗಾವತಿಯ ಬಳಿಯ ಕನಕಗಿರಿ ಎಂಬಲ್ಲಿ ಹುಟ್ಟಿದ ಬಾಳಪ್ಪ ಅವರ ತಾಯಿ ಹಾಗೂ ಅಜ್ಜಿ ಇಬ್ಬರೂ ದೇವದಾಸಿಯರು. ವಯಸ್ಸೆಷ್ಟು ಎಂದು ಕೇಳಿದಾಗ 'ತಿಳೀದು' ಎಂದರು. ಸುಮಾರು 45 ಆಗಿರಬಹುದು. ಏಕೆಂದರೆ ಅವರ ತಾಯಿ ಭಿಕ್ಷೆ ಎತ್ತಿ ತಂದ 'ತೂತಿನ ಕಾಸು' ನೋಡಿದ ನೆನಪು ನನಗಿದೆ ಎನ್ನುತ್ತಾರೆ. ದೇವದಾಸಿಯಾಗಿದ್ದ ಇವರ ತಾಯಿಗೆ ಭೀಕರ ಬರದ ಆ ದಿನಗಳಲ್ಲಿ ತನ್ನ ಇಬ್ಬರು ಗಂಡು ಮಕ್ಕಳನ್ನು ಸಾಕಲು ಚರ್ಮ ಹದ ಮಾಡುವುದು, ಕಣದಲ್ಲಿ ಕೆಲಸ ಮಾಡುವುದು ಇಷ್ಟರಿಂದಲೇ ಸಾಧ್ಯವಿರಲಿಲ್ಲ. ಆದ್ದರಿಂದ ಜತೆಗೆ ಭಿಕ್ಷೆಯನ್ನೂ ಎತ್ತಬೇಕಾಗಿತ್ತು.

8 ವರ್ಷವಾದಾಗ ಅಣ್ಣ ಯಮುನಪ್ಪ ಮತ್ತು ಬಾಳಪ್ಪ ಇಬ್ಬರನ್ನೂ ಜೀತಕ್ಕೆ ಸೇರಿಸಲಾಯಿತು. ಅಲ್ಲಿಯೇ ಸುಮಾರು 10 ವರ್ಷ ಜೀತಗಾರನಾಗಿ ದುಡಿದರು. ಆಗಿನ ಅವರ ಬದುಕಿನ ಬಗ್ಗೆ ಕೇಳಿದೆವು. ದನದ ಕೊಟ್ಟಿಗೆಯಲ್ಲಿ ವಾಸ, ಪ್ರತ್ಯೇಕ ತಟ್ಟೆ ಲೋಟ, ಒಡೆಯರ ಮನೆಯ ದನ ಕಾಯುವ ಕೆಲಸ, ಅವರು ಹೇಳುವ ಬೇರೆ ಕೆಲಸಗಳನ್ನೂ ಮಾಡಬೇಕಾಗಿತ್ತು. ಅವರ ಮಕ್ಕಳೊಂದಿಗೆ ಆಟವಾಡುವ ಅವಕಾಶ ಇತ್ತು. ಆಗೇನಾದರೂ ಅವರು ತನ್ನನ್ನು ಮುಟ್ಟಿಸಿಕೊಂಡರೆ ಅವರು ಸ್ನಾನ ಮಾಡಬೇಕಾಗಿತ್ತು. ಆಗಾಗ 'ಲೇ ಮಾದಿಗ ಸೂಳೇಮಗನೇ' ಎಂಬ ಮಾತುಗಳನ್ನು ಕೇಳಬೇಕಾಗುತ್ತಿತ್ತು. ಆದರೆ ಇವೆಲ್ಲಾ ಆಗ ಸಹಜವೆನಿಸುತ್ತಿತ್ತು ಎಂದು ನೆನಪಿಸಿಕೊಳ್ಳುತ್ತಾರೆ ಬಾಳಪ್ಪ. 18 ವರ್ಷವಾಗುವವರೆಗೆ ಈ ಮನೆಯಲ್ಲೇ ಜೀತದಾಳುವಾಗಿದ್ದರು. ಮೊದಲು ಊಟ-ಬಟ್ಟೆ ಮಾತ್ರ. 3-4 ವರ್ಷಗಳ ನಂತರ ಬೇಸಾಯದ ಬೇರೆ ಕೆಲಸಗಳನ್ನು ಮಾಡಲಾರಂಭಿಸಿದಾಗ ವರ್ಷಕ್ಕೆ 250 ರೂ. ಕೊಡುತ್ತಿದ್ದರು. ಅದು ಹಾಗೂ ತಾಯಿಯ ದುಡಿತದ ಹಣ ಯಮುನಪ್ಪ ಮತ್ತು ಬಾಳಪ್ಪ ಅವರ ಮದುವೆ ಖರ್ಚಿಗೆ ಮುಗಿಯಿತು.

ಪರಿಸ್ಥಿತಿ ಹದಗೆಟ್ಟು ಯಜಮಾನ ಬಾಳಪ್ಪನನ್ನು ಗಂಗಾವತಿಯ ಆಂಧ್ರ ಕ್ಯಾಂಪಿನಲ್ಲಿದ್ದ ಇನ್ನೊಬ್ಬ ರೈತನ ಮನೆಗೊಯ್ದು ಪರಿಚಯಿಸಿದ. ಬಾಳಪ್ಪನ ಜೀತ ಅಲ್ಲಿಗೆ ವರ್ಗಗೊಂಡಂತಾಯಿತು. ಅಲ್ಲಿ ಮೈಮುರಿದು ಕೆಲಸ ಮಾಡುತ್ತಿದ್ದುದರಿಂದ ಹೊಸ ಯಜಮಾನನ ಒಲುಮೆ ದೊರೆಯಿತು. ಮದುವೆಯೂ ಆಯಿತು. ಎಲ್ಲವೂ ಚೆನ್ನಾಗಿ ನಡೆಯುತ್ತಿದ್ದಂತೆ ಕಾಣುತ್ತಿತ್ತು. ಆದ್ದರಿಂದ 'ದಲಿತ ಸಂಘ' ಎಂಬ ಸಂಘಟನೆಯ ಮುಖಂಡರು ಚಂದ್ರಶೇಖರ್ ಬಾಳೆ, ಗಂಗಾಧರ ಕುಷ್ಟಗಿ ಮತ್ತಿತರರು ದಲಿತರ ಪರಿಸ್ಥಿತಿಯ ಬಗ್ಗೆ ಬಂದು ಹೇಳುವಾಗ ವೈಮುರಿದು ದುಡಿಯಲಾಗದವರ ಮಾತು ಎಂದು ಮೊದಮೊದಲಿಗೆ ಬಾಳಪ್ಪನಿಗೆ ಅನ್ನಿಸಿತಂತೆ.

ನಿಜಸ್ಥಿತಿಯ ಅರಿವು - ಹೊಸ ತಿರುವು

ಈ ಸಂದರ್ಭದಲ್ಲಿ ನಡೆದ ಒಂದು ಘಟನೆ ಬಾಳಪ್ಪನ ಬದುಕಿಗೆ ಹೊಸ ತಿರುವು ನೀಡಿತು. ಬಾಳಪ್ಪನ ಒಡೆಯ ತನ್ನ ಜಮೀನಿನ ಪಕ್ಕದ ಮುಸ್ಲಿಮನೊಬ್ಬನ ಇನಾಂ ಜಮೀನನ್ನು ಖರೀದಿಸಿದ. ಆದರೆ ಈ ಜಮೀನಿನಲ್ಲಿ ಹರಿಜನನೊಬ್ಬ ವ್ಯವಸಾಯ ಮಾಡುತ್ತಿದ್ದುದರಿಂದ 'ದಲಿತ ಸಂಘ' ಈ ಬಗ್ಗೆ ತಕರಾರು ತೆಗೆಯಿತು. ಆಗ ತಾಲೂಕು ಕಚೇರಿಯಲ್ಲಿನ ಕುಲಕರ್ಣಿ ಈ ಜಮೀನಿನ ಖಾತೆ ಮಾಡಲು ಸಾಧ್ಯವಿಲ್ಲ, ನಿಮ್ಮ ಮನೆಯಲ್ಲಿ ಹರಿಜನ ಜೀತದಾಳು ಇದ್ದರೆ ಆತನ ಹೆಸರಿಗೆ ಮಾಡಬಹುದು ಎಂದರಂತೆ. ಬಾಳಪ್ಪನ ಹೆಸರಿನಲ್ಲಿ ಯಜಮಾನ ಈ 30 ಗುಂಟೆ ಜಮೀನಿನ ಖಾತೆ ಮಾಡಿಸಿದ. ಆದರೆ ಬಾಳಪ್ಪನಿಗೆ ಈ ವಿಷಯ ತಿಳಿಸಲೇ ಇಲ್ಲ. 'ದಲಿತ ಸಂಘ' ದಿಂದಲೇ ಈ ವಿಷಯ ತಿಳಿದದ್ದು. ಕೇಳಿ ಬಾಳಪ್ಪನಿಗೆ ಬಹಳ ಬೇಸರವಾಯಿತು. ಅದುವರೆಗಿನ 'ಮಧುರ' ಸಂಬಂಧದ ಬಗ್ಗೆ ಪ್ರಶ್ನೆಗಳೆದ್ದವು. ಒಡೆಯನೊಡನೆ ಮನಸ್ತಾಪವಾಯಿತು. ಬೇರೆ ಗುಡಿಸಲು ಹಾಕಿ ಪ್ರತ್ಯೇಕ ವಾಸ ಆರಂಭವಾಯಿತು. ಜೀತದಿಂದ ವಿಮುಕ್ತಿಯ ಹೋರಾಟವೂ ಆರಂಭವಾಯಿತು.

ಯಜಮಾನ ಇಷ್ಟಕ್ಕೇ ನಿಲ್ಲಲಿಲ್ಲ, 'ಬಾಳಪ್ಪ ಕುಡುಕ, ಇಸ್ಪೀಟ್ ಆಡ್ತಾನೆ, ಭೂಮಿ ಕಳೀತಾನೆ' ಎಂದೂ ಆದ್ದರಿಂದ ಆತನ ಹೆಂಡತಿಯ ಹೆಸರಿಗೆ ಖಾತೆ ಮಾಡಿಸಬೇಕು ಎಂದೂ ಅಪಪ್ರಚಾರ ಮಾಡಿ, ವಾಸ್ತವವಾಗಿ ತನ್ನ ಮಗಳ ಹೆಸರಿಗೆ (ಆಕೆ ಬಾಳಪ್ಪನ ಹೆಂಡತಿ ಎಂದು ಸುಳ್ಳು ಹೇಳಿ) ವರ್ಗಾಯಿಸಲು ಹುನ್ನಾರ ನಡೆಸಿದ. ಈ ಸುದ್ದಿ 'ದಲಿತ ಸಂಘ' ದಿಂದ ಬಾಳಪ್ಪನಿಗೆ ಸಿಕ್ಕಿತು. ಇನ್ನು ಸುಮ್ಮನಿರುವುದು ಸಾಧ್ಯವಾಗಲಿಲ್ಲ. 'ನನಗೆ ಒಡೆಯನ ಜಮೀನೂ ಬೇಡ, ಕೆಲಸವೂ ಬೇಡ' ಎಂದಿದ್ದ ಬಾಳಪ್ಪ ತನ್ನ ಹೆಸರಿನಲ್ಲಿ ಮಾಡಿದ್ದ ಜಮೀನಿನ ಕಬ್ಜಾ ಮಾಡಲು ನಿರ್ಧರಿಸಿದ. ಈ ವೇಳೆಗೆ ದಲಿತಸಂಘ ಕೃಷಿಕೂಲಿಕಾರರ ಸಂಘವಾಗಿ ಮಾರ್ಪಟ್ಟಿತ್ತು. ಈ ಸಂಘದ ಮುಖಂಡರ ನೆರವಿನಿಂದ ಧೈರ್ಯದಿಂದ ಹೋರಾಟ ನಡೆಸಿದ. ಕೊನೆಗೂ ಆ ಜಮೀನು ಬಾಳಪ್ಪನ ಕಬ್ಜಾಕ್ಕೆ ಬಂತು. ಇದರೊಂದಿಗೆ ಬಾಳಪ್ಪನ ಬದುಕಿನ ಹೊಸ ಅಧ್ಯಾಯವೂ ಆರಂಭವಾಯಿತು.

ಹೋರಾಟಗಳು ಹಲವು

ನಂತರ ನಡೆಸಿದ ಹೋರಾಟಗಳು ಹಲವು. ಇವುಗಳಲ್ಲಿ ಮೊದಲಿನದು 'ನಾಲಾ ಬರ್ಮಾ' ಹೋರಾಟ. ಹಳ್ಳದ ಬಗಲಿನ 4 ಎಕರೆ ಕಾಡು ಕಡಿದು ಮಾಡಿದ ಭೂಮಿಯ ಮೇಲೆ 18 ಕೃಷಿಕೂಲಿಕಾರರು ಹಕ್ಕು ಪಡೆಯುವಂತಾದ ಹೋರಾಟ ಇದು. ಈ ಹೋರಾಟದ ಮೂಲಕ ಕೃಷಿ ಕೂಲಿಕಾರರ ಸಂಘಟನೆಗೆ ಈ ಪ್ರದೇಶದಲ್ಲಿ ಹೊಸ ಒತ್ತು ದೊರೆಯಿತು.

ನಂತರದ್ದು ವಡ್ಡರಹಟ್ಟಿ ಕ್ಯಾಂಪ್ ಹೋರಾಟ. ಇದು ತಾವು ವಾಸವಾಗಿದ್ದ ಪ್ಲಾಟುಗಳನ್ನು ಪಡೆಯಲು ಕೃಷಿಕೂಲಿಕಾರರು ನಡೆಸಿದ ಹೋರಾಟ. ಜಮೀನ್ದಾರ

ಪುಟ 10 ನೋಡಿ

ಬಿ.ಜೆ.ಪಿ. ಕತೆ ಮುಗಿಯಿತು ! ನಮಗೊಂದು ಸಂಘ ಕೊಡಿ ಹೋರಾಡುತ್ತೇವೆ !

ಎನ್ನುತ್ತಾನೆ ಕೂಲಿಕಾರ ಫಕೀರಪ್ಪ

"ಒಂದು ಸಲ ಬಿ.ಜೆ.ಪಿ.ಗೆ ಓಟು ಕೊಡಿ, ನಿಮ್ಮನ್ನು ಎಷ್ಟು ಎತ್ತರಕ್ಕೆ ಏರಿಸ್ತೇವೆ ನೋಡಿ" ಎಂಬ ಅಬ್ಬರದ ಪ್ರಚಾರಕ್ಕೆ ಮನಸೋತು ಹಾವೇರಿ ತಾಲೂಕಿನ ಕನಕಪುರ ಗ್ರಾಮದ ಬಡ ಕೂಲಿಕಾರ ಫಕೀರಪ್ಪ ವೀರಪ್ಪ ಭಜಂತ್ರಿ ಎರಡು ವರ್ಷದ ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿ.ಜೆ.ಪಿ. ಅಭ್ಯರ್ಥಿ ಬಿ.ಎಂ. ಮೆಣಸಿನಕಾಯಿ ಅವರಿಗೆ ಮತ ನೀಡಿದ್ದ. ಅವರು ಗೆದ್ದು, ಕೇಂದ್ರದಲ್ಲಿ ಬಿ.ಜೆ.ಪಿ. ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಾಗ ಫಕೀರಪ್ಪ ಸಂತೋಷದಿಂದ ಬೀಗಿದ್ದ. ಆದರೆ, ಈಗ ಬಿ.ಜೆ.ಪಿ. ಸರಕಾರದ ವಿರುದ್ಧ ಅವನ ಸಿಟ್ಟು ನೆತ್ತಿಗೇರಿದೆ ! ಯಾಕೆ ?

ಮೊನ್ನೆ ಮಾರ್ಚ್ 15 ರಂದು ಸಂಜೆ ನಾನು ಮತ್ತು ಕಾಂ. ಪಿ.ಸಿ. ಜಾಬಿನ್ ಹಾನ್‌ಗಲ್‌ನಲ್ಲಿ ತಮ್ಮ ಪಕ್ಷದ ಸರ್ವ ಸದಸ್ಯರ ಸಭೆ ಮುಗಿಸಿಕೊಂಡು ಸರಕಾರಿ ಬಸ್‌ನಲ್ಲಿ ಹಾವೇರಿಗೆ ವಾಪಸ್ ಬರುತ್ತಿದ್ದೆವು. ದಾರಿ ಉದ್ದಕ್ಕೂ ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು ಮಾತನಾಡಿಕೊಳ್ಳುತ್ತಿದ್ದೆವು. ಸ್ವಲ್ಪ ದೂರ ಹೋಗುತ್ತಿದ್ದಂತೆ, ನಮ್ಮ ಮುಂದಿನ ಸೀಟ್‌ನಲ್ಲಿ ಕೂತಿದ್ದ ಪ್ರಯಾಣಿಕನೊಬ್ಬನು ನಮ್ಮ ಮಾತುಕತೆಯಲ್ಲಿ ಮಧ್ಯೆ ತಟ್ಟನೆ ಬಾಯಿಹಾಕಿ "ಬಿಜೆಪಿ ಸರಕಾರದ ಕತೆ ಮುಗಿಯಿತು" ಎಂದು ಕರಾರುವಾಕ್ ಆಗಿ ಹೇಳಿಬಿಟ್ಟ! (ಆಗಿನ್ನೂ ವಾಜಪೇಯಿ ಸರಕಾರ ಬಿದ್ದಿರಲಿಲ್ಲ) ಆ ಸಹಪ್ರಯಾಣಿಕನೇ ಕೂಲಿಕಾರ ಫಕೀರಪ್ಪ. ನಾವಿಬ್ಬರೂ ಆಸಕ್ತಿಯಿಂದ ಪ್ರಶ್ನೆಗಳನ್ನು ಕೇಳಿ ಅವರ ಅಭಿಪ್ರಾಯಗಳನ್ನು ಒಂದೊಂದಾಗಿ ತಿಳಿದುಕೊಂಡೆವು.

ಹಿಂದೆ, ಕಾಂಗ್ರೆಸ್‌ನ ದೀರ್ಘಕಾಲದ ಮತ್ತು ಜನತಾದಳದ ಮಧ್ಯಕಾಲದ ಸರಕಾರಗಳ ಆಡಳಿತದಿಂದ ಫಕೀರಪ್ಪ ಬಹಳ ಬೇಸತ್ತಿದ್ದ. 'ಒಂದು ಸಲ ಬಿಜೆಪಿಗೆ' ಎಂಬ ಮೋಡಿಗೆ ಮರುಳಾಗಿ ಬಿಜೆಪಿಗೆ ಕಳೆದ ಸಲ ತನ್ನ ಮತ ನೀಡಿದ್ದ. ಬಿಜೆಪಿ ತಾನು ಅಧಿಕಾರಕ್ಕೆ ಬಂದರೆ ಜನರನ್ನು ಮೇಲಕ್ಕೆ ಎತ್ತುವುದು ಎಂದು ಭರವಸೆ ನೀಡಿ ಜಯಗಿಟ್ಟಿಸಿಕೊಂಡು, ಅಧಿಕಾರಕ್ಕೆ ಬಂದು ಒಂದು ವರ್ಷದೊಳಗೇ ಬಡ ಜನರ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಮೇಲಕ್ಕೆ ಎತ್ತಿ ಬಡವರನ್ನು ಇನ್ನಷ್ಟು ಕೆಳಕ್ಕೆ ಇಳಿಸಿದ್ದೇ ಫಕೀರಪ್ಪನ ಸಿಟ್ಟಿಗೆ ಕಾರಣ.

ಫಕೀರಪ್ಪನ ಕುಟುಂಬ ದೊಡ್ಡದು. ಹೆಂಡತಿ ಮತ್ತು ಎರಡು ಮಕ್ಕಳ ಜೊತೆಗೇ ಅಣ್ಣ-ಅಣ್ಣನ ಹೆಂಡತಿ ಮತ್ತು ಆರು ಮಕ್ಕಳು, ಮೂರು ಜನ ತಮ್ಮಂದಿರು, ಇಬ್ಬರು ತಂಗಿಯಂದಿರು ವರ್ಷವಿಡೀ ತಾನು, ತನ್ನ ಹೆಂಡತಿ, ಅಣ್ಣ, ಅಣ್ಣನ ಹೆಂಡತಿ... ಹೀಗೆ ಎಲ್ಲರೂ ಒಂದಲ್ಲ ಒಂದು ಕೂಲಿ ಹುಡುಕಿಕೊಂಡು ದುಡಿಯುತ್ತಿದ್ದಾರೆ. ಹೊಲದ ಕೆಲಸ, ರಸ್ತೆ ಕೆಲಸ, ಮನೆ ಕೆಲಸ.... ಯಾವುದೂ ವಾರದ, ತಿಂಗಳ, ವರ್ಷದ ಎಲ್ಲಾ ದಿನಗಳಲ್ಲಿ ಸಿಗುತ್ತಿಲ್ಲ ಎಂದು ಫಕೀರಪ್ಪನ ಕಳವಳ. ಕೂಲಿ ಸಿಕ್ಕಿದ ದಿನಗಳಲ್ಲಿ 10-12 ಗಂಟೆಗಳ ಕಠಿಣ ದುಡಿತ. ಕೈತುಂಬಾ ಕೂಲಿ ಸಿಗುವದಿಲ್ಲ. ಗಂಡಾಳಿಗೆ ಗರಿಷ್ಠ ದಿನಕ್ಕೆ ರೂ. 30 ಮತ್ತು ಹೆಣ್ಮಕ್ಕಳಿಗೆ ಗರಿಷ್ಟ ರೂ. 15 ಕೂಲಿ. ಅದನ್ನು ನಗದು ಪಡೆಯಬೇಕಾದರೂ ಮಾಲಕರನ್ನು, ಕಂಟ್ರಾಕ್ಟರ್‌ಗಳನ್ನು ಕಾಡಿ ಬೇಡಿ ಸುಸ್ತಾಗುವುದು ಎನ್ನುತ್ತಾರೆ ಫಕೀರಪ್ಪ. ಇತ್ತೀಚಿಗೆ ಹಾವೇರಿ ಸಮೀಪ ಫಕೀರಪ್ಪ ಮತ್ತು ಹತ್ತು ಜನ ಸಂಗಾತಿಗಳು ಟೆಲಿಫೋನ್ ಇಲಾಖೆಯ ಕಂಟ್ರಾಕ್ಟರ್ ಒಬ್ಬನೊಡನೆ ಕೇಬಲ್ ಹಾಕಲು ಕಣಿವೆ ಅಗೆದುಕೊಟ್ಟು ತಲಾ ರೂ. 2000 ಸಂಪಾದಿಸಿದ್ದರು. ಇದುವರೆಗೆ ರೂ. 700 ಮಾತ್ರ ಪಾವತಿ ಆಗಿದ್ದು, ರೂ. 1300 ಬಾಕಿ ಪಾವತಿ ಮಾಡಲು ಕಾಂಟ್ರಾಕ್ಟರ್ ಸತಾಯಿಸುತ್ತಿರುವುದಾಗಿ ತನ್ನ ಗೋಳನ್ನು ಹೇಳಿಕೊಂಡ.

ಬಿಜೆಪಿ ಸರಕಾರ ಬಂದಂದಿನಿಂದ ಆಹಾರ ಧಾನ್ಯಗಳ, ಬೇಳೆಕಾಳುಗಳ, ಅಡಿಗೆ ತೈಲಗಳ, ತರಕಾರಿಗಳ, ಜೀನಸು ಸಾಮಗ್ರಿಗಳ ಬೆಲೆಗಳು ಹಿಂದೆಂದೂ ಕಾಣದಷ್ಟು ವಿಪರೀತವಾಗಿ ಏರಿರುವುದರಿಂದ ಫಕೀರಪ್ಪ ಕಂಗಾಲಾಗಿದ್ದಾರೆ. ದಿನಕ್ಕೆ ರೂ. 30 ಕೂಲಿ ಪಡೆದು ಅಕ್ಕಿ ಕೆ.ಜಿ.ಗೆ. ರೂ. 16 ಬೆಲೆಯಲ್ಲಿ ಗಂಡ, ಹೆಂಡತಿ, ಮಕ್ಕಳು, ಬಂಧುಗಳು ಬದುಕುವುದು ಹೇಗೆ ಎಂದು ಬಿ.ಜೆ.ಪಿ.ಯ ಸರಕಾರಕ್ಕೆ ಸವಾಲು ಹಾಕುತ್ತಾನೆ ಫಕೀರಪ್ಪ. ನೌಕರದಾರರ ಕುರಿತು ಫಕೀರಪ್ಪನಿಗೆ ಕಾಳಜಿ ಇದೆ. ನನ್ನನ್ನು ಮತ್ತು ಕಾಂ. ಜಾಬೀನ್‌ರನ್ನು ನೌಕರದಾರರೆಂದು ತಿಳಿದು, ತಿಂಗಳ 4-5 ಸಾವಿರ ಪಗಾರದಲ್ಲಿ ಬೇಳೆಕಾಳು, ತರಕಾರಿ, ಜೀನಸು, ಮನೆ ಬಾಡಿಗೆ, ನೀರು-ಲೈಟ್ ಬಿಲ್, ಗ್ಯಾಸ್, ಹಾಲು, ಶಾಲೆ, ಪುಸ್ತಕ..... ಇವುಗಳನ್ನು ಈ ಕಾಲದಲ್ಲಿ ನಿಭಾಯಿಸುವುದು ಹೇಗೆ ಎಂದು ಫಕೀರಪ್ಪ ಚಿಂತಿತನಾಗಿದ್ದಾನೆ. ಫಕೀರಪ್ಪನಿಗೆ ಹೊಲ ಇಲ್ಲ, ಸಣ್ಣ ಮನೆ ಇದೆ ಅಷ್ಟೆ. ಕೂಲಿಯಿಂದಲೇ ಬದುಕಬೇಕು.

ಓಟು ಗಿಟ್ಟಿಸಿ ಗೆದ್ದು ಬಂದಿರುವ ಎಂ.ಪಿ., ಎಂ.ಎಲ್.ಎ., ಪಂಚಾಯತ್ ಸದಸ್ಯ..... ಯಾರೊಬ್ಬರೂ ತನ್ನಂತಹ ಬಡವರ ಸಮೀಪವೇ ಬರುತ್ತಿಲ್ಲ ಎನ್ನುತ್ತಾನೆ ಫಕೀರಪ್ಪ. ನ್ಯಾಯ, ಹಕ್ಕು ಎಂದು ಹತ್ತು ಮಂದಿ ಜನರನ್ನು ಕರೆದುಕೊಂಡು ಇವರ ಮನೆ ಮುಂದೆ ಹೋಗಿ ಸ್ವಲ್ಪ ಗದ್ದಲ ಮಾಡಿದರೆ, ಕಲ್ಲು ಮಣ್ಣು ಅವರ ಮೇಲೆ ಬಿಸಾಕಿದರೆ, ಪೋಲೀಸ್ ಕೇಸುಗಳನ್ನು ಹಾಕಿಸಿ ತಮ್ಮನ್ನೆಲ್ಲಾ ಜೈಲಿಗೆ ಸೇರಿಸುತ್ತಾರೆ ಎನ್ನುತ್ತಾನೆ ಫಕೀರಪ್ಪ. ಮತ್ತೆ ತಮ್ಮ ಹೆಂಡಂದಿರು ಇವರ ಮನೆಗಳ ಮುಂದೆ ಬಂದು ತಮ್ಮ ಗಂಡಂದಿರನ್ನು ಬಿಡಿಸಲು ಗೋಳಾಡಿದರೆ, ಬೈದು ಕಳುಹಿಸುತ್ತಾರೆ ಮತ್ತು ಹಂಗಿಸಿ ಹಳಸಿದ ರೊಟ್ಟಿ - ಅನ್ನ ಭಿಕ್ಷ ಬಿಸಾಕ್ತಾರೆ ಎನ್ನುತ್ತಾನೆ ನೊಂದ ಫಕೀರಪ್ಪ.

ಫಕೀರಪ್ಪ ಪರಿಶಿಷ್ಟ ಜಾತಿಗೆ ಸೇರಿದವನು. ಅವನ ಹೆಂಡತಿ ಹಡೆದ ಮೂರು ಮಕ್ಕಳನ್ನು ಕಳೆದುಕೊಂಡು, ಎರಡನ್ನು ಹೇಗೋ ಉಳಿಸಿಕೊಂಡಿದ್ದಾರೆ. ಬೆಳೆದ ಮಗನನ್ನು ಊರಿನ ಪ್ರಾಥಮಿಕ ಶಾಲೆಗೆ ಕಳುಹಿಸುತ್ತಿದ್ದಾರೆ. ಬಡತನದ ಬೇಗೆಯಿಂದ ಮಗ ಶಾಲೆ ಬಿಟ್ಟು ಕೂಲಿ ಕೆಲಸಕ್ಕೆ ಮುಂದೆ ನೇರಬೇಕಾಗುವುದಲ್ಲ ಎಂದು ಚಿಂತೆಯಲ್ಲಿದ್ದಾರೆ. ಅವಳೂ, ಅವರ ಚಿಕ್ಕ ಕೂಸೂ ಫಕೀರಪ್ಪನ ಜೊತೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಫಕೀರಪ್ಪನ ತಮ್ಮನೊಬ್ಬ ಮೆಟ್ರಿಕ್ ಪಾಸಾಗಿ ಮುಂದೆ ಕಲಿಯದೆ ನಿರುದ್ಯೋಗಿಯಾಗಿದ್ದಾನೆ. ಹೆಚ್ಚಿಗೆ ಕಲಿಸಲು ಈ ಬಡ ಕುಟುಂಬಕ್ಕೆ ಆಗದು.

ಜನತಾದಳದವರು ತಮ್ಮ ಕುರ್ಚಿಗಾಗಿ ಕಚ್ಚಾಡುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸುಲಭವಾಗಿ ಅಧಿಕಾರ ಬಿಟ್ಟುಕೊಡಬೇಕಾಗುವುದು ಎನ್ನುತ್ತಾನೆ ಫಕೀರಪ್ಪ. ಬಿ.ಜೆ.ಪಿ.ಗೆ ಇನ್ನು ಅವಕಾಶ ಕೊಡುವುದಿಲ್ಲ ಎಂದು ಇವನು ಪ್ರತಿಜ್ಞೆ ಮಾಡಿದ್ದಾನೆ. ನಾನು ಮತ್ತು ಕಾಂ. ಜಾಬೀನ್ ಕೂಲಿಕಾರರನ್ನು ಸಂಘಟಿಸುವುದಾಗಿ ತಿಳಿದು "ನಮಗೊಂದು ಸಂಘ ಕಟ್ಟಿಕೊಡಿ, ದಿನಕ್ಕೆ ರೂ. 50 ಕೂಲಿ ಕೊಡಿಸಿರಿ, ಎಲ್ಲಾ ದಿನಗಳಲ್ಲಿ ಕೆಲಸ ಕೊಡಿಸಿರಿ. ನಾವು ಜನ ಕೂಡಿಸಿಕೊಡುತ್ತೇವೆ. ಹಕ್ಕಿಗಾಗಿ ಹೋರಾಡುತ್ತೇವೆ" ಎಂದಿದ್ದಾನೆ ಕೂಲಿಕಾರ ಬಂಧು ಫಕೀರಪ್ಪ. ನಾವು ನಮ್ಮ ವಿಳಾಸಗಳನ್ನು ಹಂಚಿಕೊಂಡಿದ್ದೇವೆ.

ಬಸ್‌ನಿಂದ ಇಳಿದವರೇ ಎಲ್ಲರೂ ಬಾದಾಮಿ ಹಾಲು ಕುಡಿದು ಬೀಳ್ಕೊಟ್ಟೆವು. ಸದ್ಯದಲ್ಲೇ ಫಕೀರಪ್ಪ 'ಕಾಂ. ಫಕೀರಪ್ಪ' ನಾಗಿ ಕೂಲಿಕಾರರ ಸಂಘದ ಮುಖಂಡನಾಗಿ ಮೂಡಿಬರುವ ನಿರೀಕ್ಷೆಯಲ್ಲಿ ನಾವು ಅಗಲಿದೆವು.

ಫಕೀರಪ್ಪನಂತಹ ನೂರಾರು, ಸಾವಿರಾರು ಬಡ ಕೂಲಿಗಾರರು ಸಂಘಕ್ಕಾಗಿ ನ್ಯಾಯಕ್ಕಾಗಿ, ಹೋರಾಟಕ್ಕಾಗಿ, ಮಾರ್ಗದರ್ಶನಕ್ಕಾಗಿ ಕಾಯುತ್ತಿದ್ದಾರೆ. ನಮ್ಮ ಮುಂದೆಯೇ ಬಂದು ನಿಲ್ಲುತ್ತಾರೆ. ನಮ್ಮ ಜವಾಬ್ದಾರಿ ಹೆಚ್ಚುತ್ತಿದೆ. ನಮ್ಮ ಕೆಲಸದ ವಿಧಾನ ಹೇಗೆ ಪುನರ್‌ರೂಪಿಸಬೇಕು ಎಂದು ನಾನು ಮೆಲುಕು ಹಾಕತೊಡಗಿದೆ....

ಸಿ.ಆರ್.ಭಟ್



ಜಾತಿ ಪದ್ಧತಿ, ಅಸ್ಪೃಶ್ಯತೆಯೆಂಬ ಜಾಲದ ವಿರುದ್ಧ ಸೆಣಸಿದ ಅಂಬೇಡ್ಕರ್, ಬಸವಣ್ಣ ಹಾಗೂ ಗುರುನಾನಕ, ಗುರುಗೋವಿಂದ ಸಿಂಗರನ್ನು
ನೆನೆಯುವುದು 'ಐಕ್ಯರಂಗ'ಕ್ಕೊಂದು ಹೆಮ್ಮೆ. ಈ ಮಾನವೀಯರು ಪ್ರತಿಯೊಬ್ಬರೂ ಚಳುವಳಿಗಾರರೂ ಹಾಗೂ ಭಾರತೀಯ ಸಮಾಜವನ್ನು ಮುಂದೆ
ಕೊಂಡೊಯ್ಯಲು ಸೆಣಸಿದ ಚಳುವಳಿಗಳ ನೇತಾರರು. ಆದುದರಿಂದ 'ದುಡಿವ ಜನರ ಪ್ರಾಣ ಮಿತ್ರ' ನಾದ ನಮ್ಮ ಪತ್ರಿಕೆ ದುಡಿವ ಜನ ಈ
ಚಳುವಳಿಗಳ ಸ್ವರೂಪವನ್ನು ಈ ಚಳುವಳಿಗಳ ಬಗ್ಗೆ ನಿಮ್ಮನ್ನು ಚಿಂತನೆಗೆ ಹಚ್ಚುವುದು, ಇಂದಿನ ದಿನಮಾನಗಳಿಗೆ ಪ್ರಸ್ತುತವಾಗುವಂತೆ ಈ ವಿಚಾರ
ಗಳನ್ನು ಜನಸಮುದಾಯಗಳ ಮುಂದೆ ಚರ್ಚೆಗೊಳಪಡಿಸುವುದರ ಮೂಲಕ ನಿಮ್ಮ ಮುಂದಿರಿಸುವುದು ಅತ್ಯಂತ ಸೂಕ್ತವಾದ ಕೆಲಸ. ಈ ಜಯಂತಿಗಳನ್ನು
ನಿಜವಾಗಿ ಆಚರಿಸಬೇಕಾದ ರೀತಿಗೆ ಒಂದು ಮಾದರಿ ಎಂದು 'ಐಕ್ಯರಂಗ' ಬಳಗದ ನಾವು ಭಾವಿಸಿದ್ದೇವೆ.

ಕಳೆದ ವಾರದಲ್ಲಿ ಪತ್ರಿಕೆಗಳ ತುಂಬಾ ಆಕ್ರಮಿಸಿದ್ದ ಬಿಜೆಪಿ ಸರ್ಕಾರದ ಪತನ, ಪರ್ಯಾಯ ಸರ್ಕಾರದ ರಚನೆಯ ಸುದ್ದಿಗಳ ನಡುವೆ ಜಾಗ
ಮಾಡಿಕೊಂಡವು, ಜನರ ಗಮನ ಸೆಳೆದವು ಮೂರು ಜಯಂತಿಗಳು. ಅಂಬೇಡ್ಕರ್‌ರವರ ಜನ್ಮ ದಿನಾಚರಣೆ, ಬಸವ
ಜಯಂತಿಗಳಂದು ರಾಜ್ಯಾದ್ಯಂತ ಸರ್ಕಾರದಿಂದ ಹಲವು ಸಂಘ ಸಂಸ್ಥೆಗಳಿಂದ ಸಮಾರಂಭ ಗಳು, ವಿಚಾರ ಸಂಕಿರಣಗಳು
ಸಂಘಟಿಸಲ್ಪಟ್ಟವು. ಬೆಂಗಳೂರಿನಲ್ಲಂತೂ ಕಾರ್ಯಕ್ರಮಗಳ ಸುರಿಮಳೆ.

ಜಾತಿಪದ್ಧತಿ, ಅಸ್ಪೃಶ್ಯತೆ ವಿರೋಧಿಸಿದ ಮೂರು ಚಳುವಳಿಗಳು



ಅಂಬೇಡ್ಕರ್ ಪ್ರತಿಮೆಗೆ ಹೂಮಾಲೆ, ಸರ್ಕಾರ ಏರ್ಪಡಿಸಿದ ಅಂಬೇಡ್ಕರ್ ಜಯಂತಿಯ ಸಮಾರಂಭದಲ್ಲಿ ದಲಿತರಿಂದ ಮೀಸಲಾತಿ ಸಂಬಂಧಿಸಿ ಪ್ರತಿಭಟನೆ, ಬಸವ ವಚನ ಗಾಯನ, ವಚನಕಾರರ ಚಳುವಳಿಯ ಬಗ್ಗೆ ವಿಚಾರ ಸಂಕಿರಣ, ವಿವಿಧ ಪತ್ರಿಕೆಗಳಲ್ಲಿ ವಿಶೇಷ ಲೇಖನಗಳು ಇವೆಲ್ಲವೂ ಘಟಿಸಿದವು.

ಹಾಗೆಯೇ ಪಂಜಾಬಿನಲ್ಲಿ ಸಿಖ್ ಧರ್ಮದ ಖಾಲ್ಸಾ ಪಂಥಕ್ಕೆ ಮೂರು ಶತಮಾನಗಳ



ಆಚರಣೆ ಬಗ್ಗೆ ವರದಿಗಳು. ದಿಲ್ಲಿಯಲ್ಲಿ ಆಡಳಿತ ನಡೆಸಿರುವ ಕೋಮುವಾದಿಗಳ ಮನಸ್ಸಿನ ತಾಳಕ್ಕೆ ತಕ್ಕಂತೆ ಮಣಿಪಾಲದಲ್ಲಿ ಕುಣಿಯುವ ಕನ್ನಡದ ವಾರಪತ್ರಿಕೆಯೊಂದರಲ್ಲಿ ವೇದಾಂತ, ಬ್ರಾಹ್ಮಣ್ಯದ ವಿರುದ್ಧ ಮೊಳೆತ ಸಿಖ್ ಧರ್ಮಕ್ಕೆ ಕಾವಿ ತೊಡಿಸುವ ಪ್ರಯತ್ನ.

ಕಳೆದ ವಾರವೇ 'ಐಕ್ಯರಂಗ' ೧೨ ಪುಟಗಳ ಹೊಸ ರೂಪದಲ್ಲಿ ಜಾತಿಭೇಧ, ಅಸ್ಪೃಶ್ಯತೆಗಳ ಶಾಪದ ಬಗ್ಗೆ ಕರ್ನಾಟಕದಲ್ಲಿ ಇನ್ನೂ ಇರುವ ಅಮಾನವೀಯ ಆಚರಣೆಗಳ ಬಗ್ಗೆ ವಿಶೇಷ ಲೇಖನ, ವರದಿಗಳನ್ನು ಪ್ರಕಟಿಸಿತ್ತು. ಚಳುವಳಿಯ ಒಟ್ಟು ಸ್ವರೂಪದ ಬಗ್ಗೆ ವಿಸ್ತಾರವಾದ ಅಧ್ಯಯನಕ್ಕೆ ಇಲ್ಲಿ ಅವಕಾಶವಿಲ್ಲ ಎಂಬ ಪುಟ ಮಿತಿಯನ್ನು ತಾವು ಗಮನದಲ್ಲಿಸಿಟ್ಟುಕೊಳ್ಳಬೇಕು.

- ಸಂಪಾದಕ

ಸಿಖ್ 'ಖಾಲ್ಸಾ'ದ ತ್ರಿಶತಮಾನೋತ್ಸವ

ದಮನ, ಶೋಷಣೆ, ಅನ್ಯಾಯ, ಅಸಮಾನತೆಯ ವಿರುದ್ಧ ಹೋರಾಟಕ್ಕೆ ಬದ್ಧತೆಯನ್ನು ನೆನಪಿಸುವಂತಾಗಬೇಕು

ಸುರ್ಜಿತ್

1699 ರ 'ಬೈಸಾಖಿ'ಯ ದಿನ. ಸ್ಥಳ-ಪಂಜಾಬಿನ ಆನಂದ್‌ಪುರ ಸಾಹಿಬ್. ಗುರುಗೋವಿಂದ್ ಸಿಂಗ್, ಸಿಖ್ಖ್ ಧರ್ಮದ ಹತ್ತನೇ ಗುರು, ಒಂದು ವೇದಿಕೆಯ ಮೇಲೆ ನಿಂತಿದ್ದಾರೆ. ಕೈಯಲ್ಲಿ ಖಡ್ಗ - ಎದುರಲ್ಲಿ 20000 ಸಿಖ್ಖ್ ಧರ್ಮಾನುಯಾಯಿಗಳು. "ನನಗೆ ಐದು ಜನರ ತಲೆ ಬೇಕು"! ಕಲಕ್ಷಣ ಸದ್ದೇ ಇಲ್ಲ. ಸ್ವಲ್ಪ ಹಿಂಜರಿಕೆಯ ನಂತರ ಒಬ್ಬೊಬ್ಬರಾಗಿ ಐದು ಜನ ಎದ್ದು ನಿಂತರು. ಈ ಎಲ್ಲ ಐವರೂ ಶ್ರಮಜೀವಿಗಳು. ಅವರಲ್ಲಿ ಮೂವರು ದಲಿತರು. ಈ ಐವರು ಮೊದಲ ಐದು ಸಿಖ್ ಸೈನಿಕರು- 'ಪಂಜ್‌ಪ್ಯಾರಾ'ಗಳು. ದಮನ-ದಬ್ಬಾಳಿಕೆಯ ವಿರುದ್ಧ ಹೋರಾಟದ ಉದ್ದೇಶದಿಂದ 'ಖಾಲ್ಸಾ' ಪಂಥ ಆರಂಭವಾದ ರೀತಿಯಿದು.

ಇದರ ಉದ್ದೇಶವೇನು? ಅದನ್ನು ತಿಳಿಯುವ ಮೊದಲು ಸಿಖ್ಖ್ ಧರ್ಮದ ಉದಯದ ಬಗ್ಗೆ ನೋಡೋಣ.

ಸುಮಾರು 500-600 ವರ್ಷಗಳ ಹಿಂದಿನ ಮಾತು. ಅದುವರೆಗೆ ರೈತರು ತಮಗೆ ಅಗತ್ಯವಾದಷ್ಟು, ಪರಸ್ಪರ ಕೊಡು-ಕೊಳ್ಳಲು ಬೇಕಾಗುವಷ್ಟು ಮಾತ್ರ ಬೆಳೆಯುತ್ತಿದ್ದರು. ಆದರೆ ಈಗ ಅವರಲ್ಲಿ ಬೇಕಾದಕ್ಕಿಂತಲೂ ಎಷ್ಟೋ ಹೆಚ್ಚು ಧಾನ್ಯ ಇತ್ತು. ಅದನ್ನು ಮಾರಾಟ ಮಾಡ ಬೇಕಾಗಿತ್ತು. ಅದಕ್ಕಾಗಿ ವ್ಯಾಪಾರ ಆರಂಭವಾಯಿತು. ಇದರೊಡನೆ ಕ್ರಮೇಣ ಇಡೀ ಸಮಾಜದ ಅಗತ್ಯಗಳೂ ಬದಲಾಗ ಲಾರಂಭಿಸಿದವು. ಕುಶಲ ಕಲೆಗಳು, ಕೈಕಸಬುಗಳು ಆರಂಭವಾದವು. ಕೈಗಾರಿಕೆಗಳಿಗಾಗಿ ಕಚ್ಚಾ ವಸ್ತುಗಳಾದ ನೀಲಿ, ಕೇಸರಿ, ಹಣದ ಬೆಳೆಗಳಾದ ಹತ್ತಿ, ಕಬ್ಬು, ಎಣ್ಣೆ ಕಾಳುಗಳು, ತಂಬಾಕು ಇತ್ಯಾದಿಗಳನ್ನು ಬೆಳೆಯ ಲಾರಂಭಿಸಿದರು. ಹೊಸ ಕಸುಬುಗಳು ಆರಂಭವಾದವು. ಸಣ್ಣ ವ್ಯಾಪಾರಿಗಳ ಒಂದು ಸಮುದಾಯವೇ ಹುಟ್ಟಿ ಬಂತು. ಹಳ್ಳಿಗಳ ಬದಲು ಪಟ್ಟಣಗಳು ಚಟುವಟಿಕೆಗಳ ಕೇಂದ್ರಗಳಾಗಿ ಬೆಳೆಯಲಾರಂಭಿಸಿದವು.

ಬ್ರಾಹ್ಮಣ ಧರ್ಮಕ್ಕೆ ಎದುರಾಗಿ


ಆದರೆ ಸಮಾಜದ ಮೇಲೆ ಮಾತ್ರ ಬ್ರಾಹ್ಮಣ ಧರ್ಮದ, ಅದು ಹೇರಿದ ಜಾತಿ ವಿಭಜನೆಗಳ, ಅಸ್ಪೃಶ್ಯತೆಯ ಪಾಳೇಯಗಾರಿ ಒಡೆಯರದೇ ಹಿಡಿತವಿತ್ತು.

ಲಂಗುಲಗಾಮಿಲ್ಲದ ಪಾಳೆಯಗಾರಿ ಆರ್ಥಿಕ ಶೋಷಣೆ ಸಮಾಜದ ಬೆಳವಣಿಗೆಗೆ ದೊಡ್ಡ ಅಡ್ಡಿಯಾಗಿತ್ತು. ಈ ಸನ್ನಿವೇಶದಲ್ಲಿ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಯ ಚಳುವಳಿಗಳು ಆರಂಭವಾದವು. ಇವುಗಳಲ್ಲಿ 'ಭಕ್ತಿ ಆಂದೋಲನ' ಮುಖ್ಯವಾದದ್ದು. ಈ ಚಳುವಳಿಗಳು ನಡೆಯುತ್ತಿದ್ದ ವೇಳೆಯಲ್ಲಿ ಸಾಂಸ್ಕೃತಿಕ ರಂಗದಲ್ಲಿ ಹೊಸ ಮಂಥನವೂ ನಡೆಯುತ್ತಿತ್ತು. ಮೊಗಲರ ಆಕ್ರಮಣದೊಂದಿಗೆ ಅವರ ಸಂಸ್ಕೃತಿ ಮತ್ತು ಇಲ್ಲಿ ಆಗ ಬೆಳೆದಿದ್ದ ಸಂಸ್ಕೃತಿಯ ನಡುವೆ ಮೊದಮೊದಲು ಸಂಘರ್ಷ ನಡೆಯಿತು. ಆದರೆ ಕ್ರಮೇಣ ಈ ಸಂಘರ್ಷದ ಜಾಗದಲ್ಲಿ ಪರಸ್ಪರ ವಿನಿಮಯ, ಕೊಡು-ಕೊಳ್ಳುವ ಕ್ರಿಯೆ ಆರಂಭವಾಯಿತು. ಇದರ ಫಲವೇ ನೂರಾರು ಸಂತರು, ಭಕ್ತರು, ಕವಿಗಳು, ಸೂಫಿಗಳು, ಗುರುಗಳು ತಮ್ಮ ಕೊಡುಗೆ ನೀಡಿದ 'ಭಕ್ತಿ ಆಂದೋಲನ'. ಮೂಲಭೂತವಾಗಿ ಮಾನವೀಯತೆಯನ್ನು ಎತ್ತಿ ಹಿಡಿದು ಹೊಸ ಅರಿವು ಮೂಡಿಸಿದ ಚಳುವಳಿಗಳಿವು. ಚೈತನ್ಯ, ಶೇಕ್ ಫರಿದುದ್ದೀನ್, ರಾಮಾನಂದ, ಕಬೀರ, ರವಿದಾಸ, ನಾಮದೇವ, ಗುರುನಾನಕ ಈ ಚಳುವಳಿಗಳ ಪ್ರಮುಖ ಹೆಸರುಗಳು.

ಜಾತಿಭೇದ, ಅಸ್ಪೃಶ್ಯತೆಯಂತಹ ಆಚರಣೆಗಳನ್ನು, ಯಜ್ಞಗಳಂತಹ ಬ್ರಾಹ್ಮಣ ಕರ್ಮಕಾಂಡಗಳನ್ನು ವಿರೋಧಿಸಿ ಜನಸಾಮಾನ್ಯರ ಪರವಾಗಿ ನಿಂತ ಚಳುವಳಿಗಳಿವು. 15ನೇ ಶತಮಾನದ ವೇಳೆಗೆ ಈ ಚಳುವಳಿ ವ್ಯಾಪಕ ಪ್ರಭಾವ ಗಳಿಸಿತು. ಆರಂಭದಲ್ಲಿ ಹೊಸದಾಗಿ ಬೆಳೆಯುತ್ತಿದ್ದ ಪಟ್ಟಣಗಳ ವ್ಯಾಪಾರಿ ವರ್ಗ ಮತ್ತು ಕೈಕಸಬುದಾರರ ನಡುವೆ ಈ ಚಳುವಳಿಗಳು ಪ್ರಭಾವ ಗಳಿಸಿದವು. ಏಕೆಂದರೆ ಅವರ ಅಗತ್ಯಗಳನ್ನು ಇವು ಬೆಂಬಲಿಸಿದವು. ಕ್ರಮೇಣ ರೈತರೂ ಈ ಚಳುವಳಿಗಳತ್ತ ಆಕರ್ಷಿತಗೊಂಡರು. 1469 ರಲ್ಲಿ ಪಂಜಾಬಿನಲ್ಲಿ ಗುರುನಾನಕರು ಆರಂಭಿಸಿದ ಸಿಖ್ ಚಳುವಳಿ ಇವುಗಳಲ್ಲಿ ಒಂದು ಪ್ರಮುಖವಾದ ಚಳುವಳಿ. ಸಿಖ್ ಧರ್ಮ ಉದಯಗೊಂಡ ಬಗೆಯಿದು.

ಭಿನ್ನ ಧಾರ್ಮಿಕ ನಿಲುವು

ಜಾತಿಪದ್ಧತಿಯ ವಿರುದ್ಧ, ಲಿಂಗ-ಭೇದದ ವಿರುದ್ಧ, ಆಳುವವರ ದಮನದ ವಿರುದ್ಧ, ದುಡಿವ ಜನಗಳ ಶೋಷಣೆಯ ವಿರುದ್ಧ, ಮೂರ್ತಿ ಪೂಜೆ ಹಾಗೂ ಮೂಢನಂಬಿಕೆಗಳ ವಿರುದ್ಧ ಅವರು ವ್ಯಾಪಕ ಪ್ರಚಾರ ನಡೆಸಿದರು. ಅವರ ಪ್ರಚಾರದ ರೀತಿ ಅದುವರೆಗಿನ ಧಾರ್ಮಿಕ ನಿಲುವಿಗಿಂತ ಭಿನ್ನವಾಗಿತ್ತು. ಜನಸಾಮಾನ್ಯರ ಜೀವನಕ್ಕೆ ಹತ್ತಿರವಾಗಿತ್ತು. ಸಾಮಾನ್ಯ ಸಂಸಾರಿಯಂತೆಯೇ ಬದುಕಿ ಸಮಾಜವನ್ನು ಜನ-ಪರವಾಗಿ ಬದಲಿಸಲು ಪ್ರಯತ್ನಿಸಿದವರು ನಾನಕರು.



ಸಿಖ್ ಧರ್ಮದ ಪ್ರಮುಖ ಕೇಂದ್ರ ಆನಂದ್‌ಪುರ್ ಸಾಹಿಬ್

ಗುರುನಾನಕರ ನಂತರ ಬಂದ ಸಿಖ್ ಗುರುಗಳು ಗುರುನಾನಕರ ಈ ಜನ-ಪರ ನಿಲುವುಗಳನ್ನು ಇನ್ನಷ್ಟು ಗಟ್ಟಿಗೊಳಿಸಿದರು. ಐದನೇ ಸಿಖ್ ಗುರು ಅರ್ಜುನ್ ದೇವ್ ಅದುವರೆಗಿನ ಎಲ್ಲಾ ಸಿಖ್ ಗುರುಗಳ ಬೋಧನೆಗಳನ್ನು ಸಂಗ್ರಹಿಸಿದರು. ಅದನ್ನು 'ಆದಿಗ್ರಂಥ' ಎನ್ನುತ್ತಾರೆ. ಇದೇ ಮುಂದೆ 'ಗುರು ಗ್ರಂಥ ಸಾಹೇಬ್' ಎನಿಸಿಕೊಂಡಿತು. ಇದು ಕೇವಲ ಸಿಖ್ ಗುರುಗಳ ಬೋಧನೆಗಳನ್ನು ಮಾತ್ರವಲ್ಲ ಆ ಕಾಲದ ಎಲ್ಲಾ ಸಂತರ, ಸೂಫಿಗಳ ಬೋಧನೆಗಳನ್ನು ಒಳಗೊಂಡಿದ್ದರಿಂದ ದೇಶಪ್ರೇಮದ, ರಾಷ್ಟ್ರೀಯ ಭಾವನೆ ಹಾಗೂ ನಮ್ಮೆಲ್ಲರೂ ಒಂದೇ ಸಂಸ್ಕೃತಿಯೆಂಬ ಭಾವನೆಯನ್ನು ಗಟ್ಟಿಗೊಳಿಸಿದವು.

ಸಶಸ್ತ್ರ ಹೋರಾಟದತ್ತ

ಆಳರಸರ ದಮನ ಎದುರಿಸುವಲ್ಲಿ ಸ್ವತಃ ಐದನೇ ಗುರು ಅರ್ಜುನ್‌ದೇವ್ ಹುತಾತ್ಮರಾದರು. ಕೋಪೋದ್ರಿಕ್ತರಾದ ಸಿಖ್ ಅನುಯಾಯಿಗಳಿಗೆ ಶಾಂತಿಯುತ ಚಳುವಳಿಯಿಂದ ಇನ್ನು ಮುಂದೆ ತಮ್ಮ ಉನ್ನತ ಧ್ಯೇಯ-ಸಾಧನೆ ಸಾಧ್ಯವಾಗಲಿಕ್ಕಿಲ್ಲ ಎಂದನಿಸಿತು. 6ನೇ ಗುರು ಹರಗೋವಿಂದ್‌ರವರ ಕಾಲದಲ್ಲಿ ಸಶಸ್ತ್ರ ಹೋರಾಟವೂ ಸಿಖ್ ಧರ್ಮದ ನೀತಿಗಳ ಭಾಗವಾಯಿತು.

9ನೇ ಗುರು ತೇಗ್ ಬಹಾದ್ದೂರ್‌ರವರ ಕಾಲದಲ್ಲಿ ಔರಂಗಜೇಬ್ ಮೊಗಲ ಬಾದಶಹನಾಗಿದ್ದ. ಈತ ಜನಗಳನ್ನು ಇಸ್ಲಾಮಿಗೆ ಧರ್ಮಾಂತರ ಮಾಡಲು ತನ್ನ ಅಧಿಕಾರವನ್ನು ಬಳಸಲಾರಂಭಿಸಿದ, ಮುಸ್ಲಿಮೇತರರ ಮೇಲೆ 'ಜಝಿಯಾ' ಹೇರಿದ. ಇದು ಮಾನವ ಹಕ್ಕುಗಳಿಗೆ, ವೈಯಕ್ತಿಕ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಕ್ರಮ ಎಂದು ತೇಗ್‌ಬಹಾದ್ದೂರ್ ಪ್ರತಿಭಟಿಸಿದರು. ಈ ಪ್ರತಿಭಟನೆಯಲ್ಲಿ ಶಾಂತಿಯುತವಾಗಿ ಹುತಾತ್ಮರಾದರು.

ಈ ವೇಳೆಗೆ ಸಿಖ್ ಧರ್ಮ ವ್ಯಾಪಕವಾಗಿ ಹರಡಿತ್ತು. ಹೊರಗೆ ನೋಡಲು ವಿಸ್ತಾರವಾಗಿ ಬೆಳೆದಿದ್ದ ಮೊಗಲ್ ಸಾಮ್ರಾಜ್ಯ ಒಳಗಿನಿಂದ ದುರ್ಬಲವಾಗಿತ್ತು. ಅದು ತನ್ನ ಭಾರಕ್ಕೇ ಕುಸಿಯಲಾರಂಭಿಸಿತು. ಅತ್ತ ಸಿಖ್ ಗುರುಗಳ ಜನ-ಪರ ತತ್ವಶಾಸ್ತ್ರ ಜನಗಳಲ್ಲಿ ಕ್ರಾಂತಿಕಾರಿ ಪ್ರಜ್ಞೆಯನ್ನು

ಪುಟ 10 ನೋಡಿ

ಇತಿಹಾಸ ನೆನಪಿಸುವ ಹೆಸರಲ್ಲಿ ಇತಿಹಾಸದ ಕಾವೀಕರಣ

ಇದೇ ತರಂಗಾಂತರಂಗ?

"ಒಂದು ವೇಳೆ ಸಿಖ್ಖರ ಉದಯವಾಗದಿದ್ದರೆ ಖಾಲಸಾ ಪಂಥ ಹುಟ್ಟಿರದಿದ್ದರೆ, ಇಂದು ಇಡೀ ಪಂಜಾಬ, ಕಾಶ್ಮೀರ, ಜಮ್ಮು ಮತ್ತು ಹತ್ತಿರದ ಉತ್ತರ ಭಾರತದ ಭಾಗಗಳು ಸ್ವತಂತ್ರ ಭಾರತದಲ್ಲಿ ಇರುತ್ತಿರಲಿಲ್ಲ. ಈ ಇತಿಹಾಸ ನಮ್ಮ ವಿದ್ಯಾರ್ಥಿಗಳಿಗೆ ತಿಳಿದಿದೆಯೇ?"

- ಇದು ಕನ್ನಡ ವಾರಪತ್ರಿಕೆ 'ತರಂಗ' ದ ಸಂಪಾದಕರ ಭಾವುಕ ಪ್ರಶ್ನೆ. ಸ್ವತಂತ್ರ ಭಾರತದಲ್ಲಿ ಇರುತ್ತಿರದಿದ್ದರೆ ಇನ್ನೆಲ್ಲಿ ಇರುತ್ತಿದ್ದವು ಎಂದು ನೀವು ಕೇಳಬಹುದು. ಪಾಕಿಸ್ತಾನದಲ್ಲಿ ಎಂಬುದು ಅವರ ಇಂಗಿತವಿರಬಹುದೇ?

★★★

ರಾಜೇ ಸಿಂಹ ಮುಕದ್ದಮ್ ಕುತ್ತೆ ।
ಚಾಯೇ ನಗಾಯನ ಬೈಠೇ ಸುತ್ತೇ ॥

ಇದು ಒಂದು 'ಗುರುವಾಣಿ'. ಇದರ ಅರ್ಥ - ಆಳರಸರು ಸಿಂಹಗಳು, ಅವರ ಮುಕಾದಮರು ಅಥವಾ ಅಧಿಕಾರಿಗಳು ನಾಯಿಗಳು. ಇವರಿಬ್ಬರೂ ಜನ ಸಾಮಾನ್ಯರ ಮೇಲೆರಗಿ ಗಾಯಗೊಳಿಸುತ್ತಾರೆ, ಅವರು ಶಾಂತಿಯಿಂದಿರಲು ಬಿಡುವುದಿಲ್ಲ. 'ತರಂಗ'ದ ಲೇಖನದಲ್ಲಿ ಅದು ಹೀಗಾಗಿದೆ - "ನಿರಪರಾಧಿ ಜನರ ಮೇಲೆ ಮುಘಲ ರಾಜರು ಹಸಿದ ಸಿಂಹದಂತೆ ಹಾರಿ ರಕ್ತದ ಓಕುಳಿ ಹರಿಸಿದರು. ಅರಸರ ಹಸ್ತಕರು ನಾಯಿಗಳಂತೆ ಕಚ್ಚಾಡಿ ಜನರ ಜೀವ ಹಿಂಡಿದರು". ಗುರುನಾನಕ ಇಲ್ಲಿ ಟೀಕಿಸುತ್ತಿರುವುದು ಒಟ್ಟಾರೆಯಾಗಿ ರಾಜಪ್ರಭುತ್ವವನ್ನು, ಮೊಗಲ ರಾಜರನ್ನಷ್ಟೇ ಅಲ್ಲ, ಇಲ್ಲವಾದರೆ ಮೊಗಲ ರಾಜರು ಎಂಬ ಪದವನ್ನೇ ಏಕೆ ಬಳಸಲಿಲ್ಲ? 'ತರಂಗ'ದ ಈ ಲೇಖಕರಿಗೂ ಕೂಡಾ ಎಲ್ಲೂ ಗುರುನಾನಕರ ಸೈದ್ಧಾಂತಿಕ ಹೋರಾಟ ಮೊಗಲ ಸಾಮ್ರಾಜ್ಯದ ವಿರುದ್ಧ ಅಥವಾ ಇಸ್ಲಾಮ್ ಧರ್ಮದ ವಿರುದ್ಧ ಎಂದು ನೇರವಾಗಿ ಹೇಳುವ ಧೈರ್ಯ ಬಂದಿಲ್ಲ. ಅವರ ಹೋರಾಟ ಉಚ್ಚ-ನೀಚ ಬೇಧಭಾವದ ವಿರುದ್ಧ, ಜಾತೀಯತೆಯ ವಿರುದ್ಧ ಎಂದು ಒಪ್ಪಲೇಬೇಕಾಗಿ ಬಂದಿದೆ. 'ಹಿಂದು ಮತ್ತು ಇಸ್ಲಾಮ್‌ನ ಉತ್ತಮ ಮೌಲ್ಯಗಳನ್ನು ಒಂದು ಮಾಡಿ ಒಂದು ಹೊಸ ಜನಾಂಗವನ್ನೇ ಸೃಷ್ಟಿಸಿದರು' ಎಂದೂ ಅವರು ಹೇಳುತ್ತಾರೆ. ಆದರೂ ಮೇಲೆ ಹೇಳಿದ

ಪುಟ 10 ನೋಡಿ

ಬಸವಣ್ಣನವರು ಹಾಗೂ ವಚನಕಾರರ ಚಳುವಳಿ

ಜಿ.ಎನ್.ನಾಗರಾಜ್

ಈಗ ಸದ್ಯ ಲಭ್ಯವಿರುವ ನೂರಾರು ವಚನಕಾರರ ವಚನಕಾರ್ತಿಯರ ವಚನಗಳು 12,000 ದಷ್ಟು ಬಾಹುಳ್ಯವೇ ಭಾರತದ ಯಾವುದೇ ಭಾಗದಲ್ಲಿ ರೂಪುಗೊಂಡ ಯಾವುದೇ ಚಳುವಳಿ - ಧಾರ್ಮಿಕ ಚಳುವಳಿಗಳೂ ಸೇರಿದಂತೆ - ಯನ್ನು ತನ್ನ ವ್ಯಾಪಕತೆಯಲ್ಲಿ ಮೀರುತ್ತದೆ.



ಏಪ್ರಿಲ್ 18 ಬಸವಜಯಂತಿ, ರಾಜ್ಯದ ಅನೇಕ ಕಡೆ ನಾನಾರೂಪದಲ್ಲಿ ಬಸವ ಜಯಂತಿ ಆಚರಣೆ. ಇಂತಹ ಆಚರಣೆಗಳ ಸಂದರ್ಭದಲ್ಲಿ ಸಾಮಾನ್ಯವಾಗಿ ವರ್ಷವರ್ಷವೂ ಬಸವಣ್ಣನವರೇ ಹೇಳಿದಂತೆ 'ಎನ್ನವರೊಲಿದು ಹೊನ್ನ ಶೂಲದಲ್ಲಿಕ್ಕಿದರೆನ್ನ ಹೊಗಳಿ ಹೊಗಳಿ', 'ಇವರ ಮನ್ನಣೆಯೇ ಮಸೆದಲಗಾಗಿ ತಾಗಿ ಅಯ್ಯೋ ನೊಂದೆನು, ಸೈರಿಸಲಾರೆನು' ಎಂದು ಅಂಗಲಾಚಿದರೂ ಬಿಡದೆ ವಾಚಾಮಗೋಚರ ಹೊಗಳಿಕೆ. ಬಸವಣ್ಣನವರ ತತ್ವಗಳು, ಆದರ್ಶಗಳು, ಕ್ರಿಯೆಗಳಿಂದ ದೂರಸರಿದಷ್ಟು ಹೆಚ್ಚು ಹೆಚ್ಚು ಹೊಗಳಿಕೆ. ಅವರ ಚಿಂತನೆಗಳ ಮಂಥನದಿಂದ ಅವುಗಳನ್ನು 800 ವರ್ಷಗಳ ನಂತರವಾದರೂ ವಾಸ್ತವಕ್ಕಿಳಿಸುವ ಹೊಣೆಯಿಂದ ನುಣುಚಿಕೊಳ್ಳುವ, ಪಲಾಯನ ವಾದವನ್ನು ಮುಚ್ಚಿಕೊಳ್ಳುವುದಕ್ಕಾಗಿ ಹೊಗಳಿಕೆ, ಶಿವಶರಣರ ಮಹಾನ್ ಚಳುವಳಿಯೊಂದು ಪಂಥವಾಗಿ, ಚಲನೆ ಸ್ಥಂಬಿಸಿ, ನೀರು ಮಡುಗಟ್ಟಿ, ಮಲೆತು ನಿಂತ ಸ್ಥಿತಿಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹೊಗಳಿಕೆ. ಮಲೆತು ನಿಂತ ನೀರೇ ಅಮೃತವಾಗಿ - ರಾಜಕಾರಣಿ, ಅಧಿಕಾರಿ, ವ್ಯಾಪಾರಿ, ವ್ಯವಹಾರಿಗಳಿಗೆ, ಬುದ್ಧಿಜೀವಿಗಳಿಗೆ ಅಧಿಕಾರ ಪದವಿ, ಪುರಸ್ಕಾರಗಳಿಗೆ ಕಾರಣವಾಗಿರುವಾಗ ಅದನ್ನು ಹಾಗೆಯೇ ಕೊಳೆತದ್ದು ಕೊಳೆತಂತೆಯೇ ಕಾಪಾಡಿಕೊಳ್ಳಬೇಕಾದ ಅನಿವಾರ್ಯ ಅಗತ್ಯವಾಗುತ್ತದೆ.

ಕಾಯಕ, ದಾಸೋಹ ಎಂಬೆಲ್ಲಾ ತತ್ವಗಳು ಪುರೋಹಿತರ ಮಂತ್ರಗಳಂತೆ ಉಗುಳಾಗಿ ಹೊರಬರುತ್ತವೆ ವೇದಿಕೆಗಳ ಮೇಲಿಂದ.

ಕರ್ನಾಟಕದ ಅತ್ಯಂತ ಮಹತ್ವದ ಚಳುವಳಿಗೆ ಈ ಕರಿನೀರಿನ ಶಿಕ್ಷೆ ಇದೇ ಮೊದಲನೆಯದಲ್ಲ. 12ನೇ ಶತಮಾನದ ಆ ಜೀವಜಲ ಬತ್ತಿ ಜಂಗಮವಾದದ್ದು, ಜಂಗಮರಾಗಿ ಮಠಗಳಾಗಿ, ಮಠದ ಪೀಠಗಳಾಗಿ, ಗದ್ದುಗೆಗಳಾಗಿ, ಸ್ಥಾವರವಾಗಿದೆ. ಮಠವೆಂಬುದು ಆಸ್ತಿಯಾಗಿ, ಶಿಕ್ಷಣ ವ್ಯಾಪಾರದ ಕಾಳಸಂತೆಗಳಾಗಿ, ಬೃಹತ್ ಸಾಮ್ರಾಜ್ಯವಾಗಿ, ಸಾಮ್ರಾಜ್ಯದ ಅರಸುತನಕ್ಕೆ ಕೊಳಕು ಸ್ಪರ್ಧೆಯಾಗಿ ಕಾದಾಟದ ರಂಗಗಳಾಗಿವೆ.

ಪುರಾಣ ಹೇಳುವುದಕ್ಕೆ, ಬದನೆಕಾಯಿ ತಿನ್ನುವುದಕ್ಕೆ

ಇನ್ನು ಕರ್ನಾಟಕದ ಜನಸಾಮಾನ್ಯರಿಗೆ ಬಸವಣ್ಣ ಎಂಬ ಹೆಸರು ಮಠ, ಮಂದಿರಗಳಲ್ಲಿ ನಡೆಯುವ ಬಸವ ಪುರಾಣಗಳ ಮೂಲಕ, ಪುರಾಣವಾಗಿ, ಕಂದಾಚಾರ, ಪವಾಡಗಳ ಕಟ್ಟು ಕಥೆಯಾಗಿಯೇ ಹೆಚ್ಚು ಪರಿಚಯ. ಅವುಗಳ ಜೊತೆಗೆ 20ನೆಯ ಶತಮಾನದ ಆಧುನಿಕ ಶಿಕ್ಷಣ, ವಿಚಾರಸಂಕಿರಣಗಳ ಫಲವಾಗಿ ವಚನಗಳು, ವಿಚಾರಗಳು ಕೆಲವಂಶವಾದರೂ ಮುಟ್ಟಿವೆ. ಆದರೆ ಬಸವಣ್ಣನವರ ಶರಣ ಚಳುವಳಿಯ ತತ್ವಗಳಿಗೊಲಿದ ಅಂದಿನ ಜನಸಾಮಾನ್ಯರ ಮುಂದಿನ ತಲೆಮಾರು - ಅವರ ಮನೆಗಳಲ್ಲಿ ಹುಟ್ಟಿದವರೆಂಬ ಕಾರಣಕ್ಕಾಗಿ ಬಸವಣ್ಣ ಮತ್ತು ಜೊತೆಯ ಶಿವಶರಣರನ್ನು ತಮ್ಮ ಸ್ವತ್ತಾಗಿಸಿಕೊಂಡವರ, ಅವರೊಳಗಿನ ಶ್ರೀಮಂತರ ವರ್ತನೆ, ದರ್ಪ, ದಬ್ಬಾಳಿಕೆಗೆ ತುತ್ತಾದ ಜನಸಾಮಾನ್ಯರಿಗೆ ಹಿಂದುಳಿದ ಹಾಗೂ ಅಸ್ಪೃಶ್ಯ ಜನರಿಗೆ ಅತ್ಯಂತ ಮಾನವೀಯ ಭಾವನೆಯನ್ನು ವ್ಯಕ್ತಪಡಿಸುವ ವಚನಗಳೂ ಕೂಡ ಪುರಾಣ ಹೇಳುವುದಕ್ಕೆ ಬದನೆಕಾಯಿ ತಿನ್ನುವುದಕ್ಕೆ ಎನ್ನುವಂತೆ ಕಾಣುತ್ತಿದ್ದರೆ ಆಶ್ಚರ್ಯವೇನಿಲ್ಲ.

ಲಿಂಗಾಯತ ಪ್ರಾಧಾನ್ಯದ ಕರ್ನಾಟಕದ ಹಳ್ಳಿಗಾಡುಗಳಲ್ಲಿ ದಲಿತರ ಮೇಲಿನ ದೌರ್ಜನ್ಯ ಪರಂಪರೆ ಹೆಚ್ಚಿದ ಇತ್ತೀಚಿನ ದಿನಗಳಲ್ಲಂತೂ ಮಾನವೀಯ ಅಂತಃಕರಣದಿಂದ ಸೂಜಿಗಲ್ಲಾಗಿ ತುಳಿತಕ್ಕೊಳಗಾದ ಕಾಯಕ ಜೀವಿಗಳನ್ನು ಸೆಳೆಯಬೇಕಾದ 'ಬಸವ', 'ಬಸವೇಶ್ವರ' ನೆಂಬ ಶಬ್ದ ಭಯಾವಹವಾಗಿದೆ. ಬಸವೇಶ್ವರ ತರುಣರ ಸಂಘ/ಯುವಕ ಸಂಘಗಳು ಎಚ್ಚರಾಗುತ್ತಿರುವ, ತಮ್ಮ ಅಮಾನವೀಯ ಇರುವಿಕೆಯ ಅರಿವು ಮೂಡುತ್ತಿರುವ, ಅದನ್ನು ಮೀರಲು ಅಂಜುತ್ತಾ ಅಳುಕುತ್ತಾ ಯತ್ನಿಸುತ್ತಿರುವ ದಲಿತರಿಗೆ ಭಯ ಹುಟ್ಟಿಸುವ ಹೆಸರಾಗಿದೆ. ಅಂಬೇಡ್ಕರ ಅಥವಾ ದಲಿತ ಸಂಘಗಳ ಪ್ರತಿವಾದಿಗಳಾಗಿವೆ. ದಲಿತರ ಮೇಲೆ ದೌರ್ಜನ್ಯ ನಡೆದಲ್ಲೆಲ್ಲಾ ಲಿಂಗಾಯತ ಪ್ರಾಧಾನ್ಯದ ಪ್ರದೇಶಗಳಲ್ಲಿ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಪ್ರಮುಖ ಪಾತ್ರವಹಿಸುತ್ತವೆ. ಹೆಸರು ಕೇಳಿದರೆ ಹೆದರುವ ಸ್ಥಿತಿಯುಂಟಾಗಿದೆ. ಬದನವಾಳು, ಮೆಂಡಿಗೇರಿ, ತುಕ್ಕೂರು, ಶಹಾಪೂರ, ಕುಷ್ಟಗಿಯಂತಹ ಅನೇಕ ಪ್ರಕರಣಗಳನ್ನು ಉದಾಹರಿಸಬಹುದು. ಇನ್ನು ಬಸವದಳ 'ರಾಷ್ಟ್ರೀಯ ಬಸವದಳ' ವಚನಕಾರ ಚಳುವಳಿಯ ಬಗ್ಗೆ ಆಸಕ್ತಿ ತೋರುವ, ಅದನ್ನು ಸಂಶೋಧಿಸುವ, ಅದರ ಸತ್ವವನ್ನು ಎತ್ತಿ ತೋರುವ ಸಾಹಿತಿ, ಸಂಶೋಧಕರಿಗೆ "ನಮ್ಮ ವಸ್ತುವನ್ನು ಮುಟ್ಟೀರಿ ಹುಷಾರ್" ಎನ್ನುತ್ತಿವೆ. 'ಮಾರ್ಗ' ಎಂಬ ಕೃತಿಯಲ್ಲಿ ಪ್ರಕಟವಾದ ಸಂಶೋಧನಾ ಪ್ರಬಂಧಗಳ ಬಗ್ಗೆ, 'ಮಹಾಚೈತ್ರ' ನಾಟಕವನ್ನು ಪಠ್ಯ ಪುಸ್ತಕವಾಗಿ ಹಿಂತೆಗೆಸುವ ಬಗ್ಗೆ ಹಾಗೂ 'ಧರ್ಮಕಾರಣ' ಕಾದಂಬರಿಯನ್ನು ಪ್ರತಿಬಂಧಿಸುವ ಬಗ್ಗೆ ಆದ ಕೋಲಾಹಲ ಅದಕ್ಕೆ ಸರ್ಕಾರ ಮಣಿದದ್ದು ಇನ್ನೂ ಜನಮನಸ್ಸಿನಲ್ಲಿ ಹಸಿರಾಗಿವೆ. ಯಾವ ಮತಾಂಧ ಶಕ್ತಿಗಳ ಹಾಗೂ ಅದರಿಂದ ರೂಪಿತವಾದ ಸಮಾಜದ ಜಾತಿಬದ್ಧ ರಚನೆಯ ವಿರುದ್ಧ ಬಸವಣ್ಣ ಹಾಗೂ ಅವನ ಜೊತೆಯ ವಚನಕಾರರು ಬಂಡೆದ್ದರೋ ಆ ಮತಾಂಧ ಕೋಮುವಾದಿ ಶಕ್ತಿಗಳೇ ಇಂದು ಬಸವಣ್ಣನವರ ಹೆಸರುಗಳನ್ನು ತಮ್ಮ ದುರುದ್ದೇಶಗಳಿಗೆ ದುರ್ಬಳಕೆ ಮಾಡಿಕೊಳ್ಳುತ್ತಿರುವುದನ್ನು ಬಸವಣ್ಣನವರ ತತ್ವಗಳ ನಿಷ್ಠ ಅನುಯಾಯಿಗಳೂ ನಿರ್ಲಿಪ್ತರಾಗಿ ಸುಮ್ಮನೇ ನೋಡುತ್ತಿದ್ದಾರೆ. ಕೆಲವರು ಈ ಶಕ್ತಿಗಳ ಜೊತೆ ಸೇರಿದ್ದಾರೆ. ಇಲ್ಲಿಯವರೆಗೆ ವರ್ಣಿಸಿದ ಪರಿಸ್ಥಿತಿಗೆ ಪ್ರತಿಕ್ರಿಯೆಯಾಗಿ ವಚನಕಾರರ ಚಳುವಳಿಯ ಮೂಲಸತ್ವವನ್ನೇ ಅಲ್ಲಗಳೆಯುವ ಮನೋಭಾವ ಹೆಚ್ಚಾಗಿ ಅವ್ಯಕ್ತವಾಗಿ, ಕೆಲವೊಮ್ಮೆ ವ್ಯಕ್ತವಾಗಿ ಮೂಡುತ್ತಿದೆ. ಅದು ಕೂಡ ಒಂದು ನನಸಾಗದ ಘೋಷಣೆಗಳ ಬರುಗನಸುಗಳ ಮಾಲೆ ಎಂಬಂತೆ ಕೆಲವರಿಗೆ ಅನ್ನಿಸಿದೆ.

ಮೌಲ್ಯಮಾಪನವಾಗಬೇಕು

ಪ್ರಗತಿಪರ, ಬಂಡಾಯ ಸಾಹಿತಿಗಳು, ವಿಚಾರವಂತರು ಪೂರ್ಣವಾಗಿ ಚಳುವಳಿಯ ಸತ್ವವನ್ನು ಅಲ್ಲಗಳೆಯದಿದ್ದರೂ ಬಸವಣ್ಣ ಮೊದಲಾದ ಅನೇಕ ಚಳುವಳಿಯ ನೇತಾರರಲ್ಲಿ ಅಥವಾ ಚಳುವಳಿಯ ಸ್ವರೂಪದಲ್ಲಿ ಕೊರತೆಯನ್ನೇ ಕಾಣುತ್ತಾ ಈ ಮಹತ್ವದ ಚಳುವಳಿಯ ಮೌಲ್ಯಮಾಪನಕ್ಕೆ ನ್ಯಾಯ ಸಲ್ಲಿಸಿಲ್ಲ.

ಸಾಹಿತ್ಯದಲ್ಲಿ, ಸಾಂಸ್ಕೃತಿಕ ರಂಗದ ವಿವಿಧ ಆಯಾಮಗಳಲ್ಲಿ ಈ ಎಲ್ಲಾ ಮನೋಭಾವಗಳು ಪಡಿಯಚ್ಚಾಗಿವೆ. ವಿಮರ್ಶೆಯಲ್ಲಿ ಲೇಖನಗಳಲ್ಲಿ, ಕಾವ್ಯ, ನಾಟಕಗಳಲ್ಲಿ ಪ್ರತಿಬಿಂಬಿತವಾಗಿರುವ ಚಿಂತನೆಯ ಈ ವಿವಿಧ ನೆಲೆಗಳು ಮುಖ್ಯವಾಗಿ ರಂಗಭೂಮಿಯಲ್ಲಿ ಪರಸ್ಪರ ವಾದ-ವಿವಾದ, ಸಂವಾದಗಳನ್ನು ನಡೆಸಿವೆ.

ಇಂತಹ ಸಂಕೀರ್ಣ, ಕ್ಲಿಷ್ಟ ಸಂದರ್ಭದಲ್ಲಿ ಬಸವ ಜಯಂತಿಯನ್ನು ಆಚರಿಸುವುದು ಹೇಗೆ ? ಇದು ಇಂದು ಈ ಚಳುವಳಿಯ ಮೂಲಸತ್ವವನ್ನು ಉಳಿಸಿಕೊಳ್ಳುವ ಎತ್ತಿ ಹಿಡಿಯಬೇಕೆನ್ನುವವರೆಲ್ಲರ ಪ್ರಶ್ನೆಯಾಗಿದೆ.

ಬಸವಣ್ಣನವರ, ಒಟ್ಟಾರೆ ಶಿವಶರಣರ ಚಳುವಳಿಯಲ್ಲಿ ಅವರ ವಚನಗಳ ಅಂದಿನ ಸಮಾಜವನ್ನು ಪುನರ್ರಚಿಸಬೇಕೆಂಬ ಆದಮ್ಯ ಬಯಕೆ ಸರ್ವಾಂತರ್ಯಾಮಿಯಾಗಿ ವ್ಯಾಪಿಸಿದೆ. ಅಂದಿನ ಶೋಷಕ ವ್ಯವಸ್ಥೆಯ ಆಧಾರವಾಗಿದ್ದ ಜಾತಿವ್ಯವಸ್ಥೆ, ಅದನ್ನು ಪ್ರತಿಪಾದಿಸುತ್ತಿದ್ದ ವೇದ ಪುರಾಣ, ಆಗಮಗಳ ಮೂಲಕ ಜನರ ಮನಸ್ಸನ್ನು ಬಂಧಿಸಿದ್ದ ಸಿದ್ಧಾಂತಗಳು. ಈ ಸಿದ್ಧಾಂತಗಳ ಪ್ರತಿಪಾದನೆಗೆ ಹಾಗೂ ಶೋಷಕ ವ್ಯವಸ್ಥೆಗೆ ಪ್ರಮುಖ ನೆಲೆಯಾಗಿದ್ದ ದೇವಾಲಯಗಳು ಇವುಗಳ ವಿರುದ್ಧದ ತೀವ್ರ ಸೆಣಸಾಟದ ಮನೋಭಾವದ ಜೊತೆಗೆ ಮಹಿಳಾ ಸಮಾನತೆಯ ಸ್ಪಷ್ಟ ಪ್ರತಿಪಾದನೆ ಅವರ ಚಿಂತನೆಗಳ ಸಮುಚ್ಚಯದಲ್ಲಿ (ಒಟ್ಟು ಸ್ವರೂಪದಲ್ಲಿ) ಕಾಣುವ ಅಂದಿನ ಜಡ್ಡುಗಟ್ಟಿದ ಸಮಾಜದ ಚಲನೆಗೆ ಇಂಬುಕೊಟ್ಟ ತತ್ವಗಳು. ಇಂದು ಕಾಯಕ, ದಾಸೋಹ, ಷಟ್ಸ್ಥಲ ಇಂತಹ ತತ್ವಗಳಿಗೆ ಹಾಗೂ ಆಧ್ಯಾತ್ಮ ಅನುಭವ ತುಂಬಿ ತುಳುಕಾಡುವ ವಚನಗಳ ಗಾಯನಕ್ಕೆ ಒತ್ತು ನೀಡುತ್ತಾ ಸಮಾಜದ ಆಧಾರವನ್ನೇ ಅಲುಗಾಡಿಸುವ ಈ ಮೂಲ ತತ್ವಗಳನ್ನು ಕಡೆಗಣಿಸುವುದರಲ್ಲಿಯೂ ಈ ಚಳುವಳಿಯ ತಿರುಳನ್ನು ತೆಗೆದು ತೊಗಟೆಯನ್ನು ತೋರಿಸುವ ಹುನ್ನಾರ ಪ್ರಜ್ಞಾಪೂರ್ವಕವಾಗಿ, ಅಪ್ರಜ್ಞಾಪೂರ್ವಕವಾಗಿ ಹುದುಗಿದೆ. ಜೊತೆಗೆ ಕಾಯಕ ತತ್ವವನ್ನು ಮಾರ್ಕ್ಸ್‌ವಾದವೆಂದು, ಮಾರ್ಕ್ಸ್‌ನಿಗಿಂತ 800 ವರ್ಷಗಳ ಮೊದಲೇ ಬಸವಣ್ಣ ಈ ತತ್ವವನ್ನು ಕಂಡರಿಸಿದುದರಿಂದ ಮಾರ್ಕ್ಸ್‌ವಾದಿಗಳಿಗಿಂತ ಶ್ರೇಷ್ಠನೆಂದು ಹೇಳುವುದು ಒಂದು ದೊಡ್ಡ ತಮಾಷೆಯೇ ಸರಿ. ಆದರೆ ಪ್ರತಿ ಬಸವಜಯಂತಿಯಲ್ಲಿಯೂ ಹಲವು ಬಾರಿ ಈ ಘೋಷಣೆ ಉಗ್ಗಡಿಸಲ್ಪಡುತ್ತದೆ.

ಬಸವಣ್ಣನ ಪಾತ್ರ

ಈ ಎಲ್ಲಾ ತತ್ವಗಳು ತಮ್ಮ ಒಟ್ಟು ಸ್ವರೂಪದಲ್ಲಿ ಬಸವಣ್ಣನಿಗಿಂತ ಬಹು ಮೊದಲೇ ರೂಪಿತವಾಗಿವೆ. ಜೇಡರ ದಾಸಿಮಯ್ಯನೆಂಬ ಪ್ರಥಮ ವಚನಕಾರನ ವಚನಗಳಲ್ಲಿಯೇ ಸ್ಪಷ್ಟವಾಗಿ, ಆರಂಭದ ತೀವ್ರತೆಯಿಂದ ಹಾಗೂ ದೃಢತೆಯಿಂದ ತತ್ವಗಳು ವ್ಯಕ್ತವಾಗಿವೆ.

"ಮಡದಿಯ ಪ್ರಾಣಕ್ಕೆ ಮೊಲೆಮುಡಿ ಇದ್ದಿತೆ?
ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತಾ?"
"ಹೊಲೆಯ ಬಾವಿಯಲೊಂದು ಎಲುವಿಟ್ಟಿದ್ದರೆ
ಹೊಲೆ ಹೊಲೆ ಎಂಬುದೀ ಲೋಕವೆಲ್ಲ"
"ಮಂಡೆಯ ಬೋಳಿಸಿಕೊಂಡು ನುಡಿದು
ಗೋಷ್ಠಿಯ ಕಟ್ಟಿದಡೇನು?
ಕಂಡಕಂಡವರಿಗೆ ಕೈಯೊಡ್ಡಿ
ಬೇಡುವ ಭಂಡರನ್ನೊಲ್ಲ ನಮ್ಮ ರಾಮನಾಥ"

ಎನ್ನುವ ವಚನಗಳು ಸುಪ್ರಸಿದ್ಧವಾಗಿವೆ, ತಂತಾನೆ ಸ್ಪಷ್ಟವಾಗಿವೆ. ಇವುಗಳ ಜೊತೆಗೆ ಲೋಕವೆಲ್ಲ ಮಾಯೆ ಎನ್ನುವ ಈ ವಚನವನ್ನು ಸವಿಯಿರಿ -

"ಒಡಲುಗೊಂಡವ ಹಸಿವ ಒಡಲುಗೊಂಡವ ಹುಸಿವ
ಒಡಲುಗೊಂಡನೆಂದು ನೀನೆತ್ತ ಜಡಿದೊಮ್ಮೆ ನುಡಿಯದಿರಾ
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ"

ಎನ್ನುವ ಸವಾಲು ಅತ್ಯಂತ ಜೀವನಪರವಾದ ಪ್ರಾಪಂಚಿಕವಾದ ನಿಲುಮೆಯನ್ನು ಅಭಿವ್ಯಕ್ತಿಗೊಳಿಸುತ್ತದೆ.

ಹೀಗೆ ಜೇಡರ ದಾಸಿಮಯ್ಯನವರಲ್ಲೇ ವ್ಯಕ್ತವಾಗಿರುವ ಈ ಚಿಂತನೆಯ ಸ್ಪಷ್ಟತೆ ಈ ಚಳುವಳಿಯ ಮೂಲತತ್ವಗಳು ಇನ್ನೂ ಮೊದಲೇ ರೂಪುಗೊಂಡಿವೆಯೆಂಬುದನ್ನು ಸಾರುತ್ತದೆ.

"ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯನೊಂದರಗಳಿಗೆಯಿತ್ತಡೆ
ಸಾಕು" ಎನ್ನುವ ಜೇಡರ ದಾಸಿಮಯ್ಯನ ಮಾತಿನಿಂದ ಅವರಂತಹ ಹಲವು ವ್ಯಕ್ತಿಗಳು, ವ್ಯಕ್ತಿಗಳು ಮಾತ್ರವಲ್ಲ ಕೂಟಗಳು ನೆರೆಯುತ್ತಾ ವಚನ ಗೋಷ್ಠಿಯಲ್ಲಿ - ಸಂವಾದದಲ್ಲಿ ತೊಡಗಿರುವ ಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ. ಈ ಗೋಷ್ಠಿಗಳಲ್ಲೇ ವಚನಗಳು ಸೃಷ್ಟಿಯಾಗಿವೆಯೆಂಬಂತೆ ಕಾಣುತ್ತದೆ.

ಹೀಗೆ ಬಸವಣ್ಣನವರಿಗೆ ಬಹುಮೊದಲೇ ಕಟ್ಟಿಕೊಂಡ ಈ ಚಳುವಳಿಯ ನೈಜ ಚಿಂತನೆಗಳು ಹಲವು ಜನರನ್ನು ಆಕರ್ಷಿಸಿ ತಮ್ಮತ್ತ ಸೆಳೆಯುತ್ತಾ ಬಸವಣ್ಣನವರ ಕಾಲಕ್ಕೆ ಒಂದು ಪ್ರವಾಹವೇ ಆಗಿದೆ. ಸಮಾಜದ ಒಟ್ಟು ವಿಚಾರಗಳ ನಡುವೆ ಸಂಘರ್ಷ ಸಾಗಿಸಿದೆ. ಒಂದುಕಡೆ ಅನುಭವ ಮಂಟಪದಂತಹ ಸಂಸ್ಥೆಯಲ್ಲಿ ಮತ್ತೊಂದು ಕಡೆ ಬಸವಣ್ಣನವರ ಆಂತರಿಕ ಸಂಘರ್ಷದಲ್ಲಿ ವ್ಯಕ್ತವಾಗುತ್ತದೆ. ಈಗ ಸದ್ಯ ಲಭ್ಯವಿರುವ ನೂರಾರು ವಚನಕಾರರ ವಚನಕಾರ್ತಿಯರ ವಚನಗಳು 12,000 ದಷ್ಟು ಬಾಹುಳ್ಯವೇ ಭಾರತದ ಯಾವುದೇ ಭಾಗದಲ್ಲಿ ರೂಪುಗೊಂಡ ಯಾವುದೇ ಚಳುವಳಿ - ಧಾರ್ಮಿಕ ಚಳುವಳಿಗಳೂ ಸೇರಿದಂತೆ - ಯನ್ನು ತನ್ನ ವ್ಯಾಪಕತೆಯಲ್ಲಿ ಮೀರುತ್ತದೆ. ಸುಮಾರು 39 ವಚನಕಾರ್ತಿಯರ ಈ ಪ್ರಮಾಣ, ಅವರ ವಚನಗಳ ಸತ್ವ, ಅವರ ಧೀರ ಮನೋಭಾವವೂ ಕೂಡ ಭಾರತದ ಇತರ ಧಾರ್ಮಿಕ ಚಳುವಳಿಗಳಿಗೆ ಹೋಲಿಸಿದರೆ ಅಪೂರ್ವವಾದದ್ದು.

ಇಂಥದೊಂದು ಚಳುವಳಿಯನ್ನು ಉತ್ತುಂಗಕ್ಕೇರಿಸುವ ಘಟ್ಟದಲ್ಲಿ ಬಸವಣ್ಣ ಕೇಂದ್ರ ಬಿಂದುವಾಗಿ ನಾಯಕತ್ವ ನೀಡಿದ್ದಾನೆ ಮತ್ತು ಚಳುವಳಿಯ ಹತ್ತು ದಿಕ್ಕುಗಳಲ್ಲಿಯೂ ಪಸರಿಸಲು ಕಾರಣರಾದವರಲ್ಲಿ ಪ್ರಮುಖನಾಗಿದ್ದಾನೆ.


ಇನ್ನೂ ಹಲವು ಪ್ರಶ್ನೆಗಳು

ಇಂತಹ ಚಳುವಳಿಯ ನಿಜ ಸ್ವರೂಪವನ್ನು - ಅದರ ಕ್ರಾಂತಿಕಾರಕ ಸಮಾಜ ಪರಿವರ್ತಕ ಸ್ವರೂಪವನ್ನು ಅದರ ಆಳ ವಿಸ್ತಾರಗಳಲ್ಲಿ ಅರಿವಿಗೆ ತಂದುಕೊಳ್ಳಬೇಕಾದರೆ ನಮ್ಮ ಸಂಶೋಧನೆಗಳು ಹಲವು ಆಯಾಮಗಳನ್ನು ಪಡೆಯಬೇಕಾಗುತ್ತದೆ.

20ನೆಯ ಶತಮಾನದ ಜೀವನ ದೃಷ್ಟಿಯಿಂದ ವಚನ ಚಳುವಳಿಯನ್ನಳೆಯುವ ಮೂರ್ಖತನವನ್ನು ಬಿಟ್ಟು 12ನೆಯ ಶತಮಾನದ ಜನಜೀವನದ ದೃಷ್ಟಿಯಿಂದ ಅಳೆಯಬೇಕಾಗುತ್ತದೆ. ವಚನಕಾರರ ಚಳುವಳಿಯ ಪೂರ್ವದ ಸಮಾಜ ರಚನೆಯ ಸ್ವರೂಪ, ಅಂದಿನ ರಾಜಕೀಯ ಆಡಳಿತ, ಧಾರ್ಮಿಕ ಸಿದ್ಧಾಂತಗಳ ಒಟ್ಟು ತಾಕಲಾಟ, ಅಂದಿನ ಸಮಾಜದ ಬದುಕಿನ ಆಧಾರ, ಕೃಷಿ ಪಶು ಸಂಗೋಪನೆಯ ವಿಧಾನಗಳು, ಒಟ್ಟಾರೆ ಉತ್ಪಾದನಾ ಸಂಬಂಧಗಳು, ಅವುಗಳ ಬದಲಾವಣೆ ವರ್ಣಾಶ್ರಮ, ವೇದಾಂತ ನಿಷ್ಠ ಸಮಾಜದಲ್ಲಿ ಅದನ್ನು ಧಿಕ್ಕರಿಸುವ ವಿಚಾರಗಳ ಉಗಮಕ್ಕೆ ಕಾರಣವೇನು? ಈ ವಿಚಾರಗಳ ಮೂಲಸೆಲೆ ಎಲ್ಲಿ, ಪ್ರಭಾವ ಬೀರಿದ ಇತರ ವಿಚಾರಗಳು ಯಾವುವು? ಅಂದು ಕರ್ನಾಟಕದಲ್ಲಿ ಕಾಣಿಸುತ್ತಿದ್ದ ನಿಘಂಟು, ಗಣಿತ, ಮಾನಸೋಲ್ಲಾಸದ ರೀತಿಯ ಕೋಶಗಳ ಬೆಳವಣಿಗೆಗೂ ಈ ಚಳುವಳಿಗೂ ಸಂಬಂಧವಿದೆಯೇ? ಕರ್ನಾಟಕದಲ್ಲಿ ಅಂದು ಪ್ರಭಾವಶಾಲಿಯಾಗಿದ್ದ ಜೈನ, ಸಿದ್ಧಾಂತಗಳಿಗೂ ವಚನಕಾರ ಚಳುವಳಿಯ ಸಿದ್ಧಾಂತಗಳಿಗೂ ಸಂಬಂಧ ವಚನ ಚಳುವಳಿಯ ನಂತರದ ದಿನಗಳಲ್ಲಿ ಕರ್ನಾಟಕದ ಸಮಾಜ ರಚನೆ, ರಾಜ್ಯಾಡಳಿತ, ಕೃಷಿ, ಪಶುಸಂಗೋಪನೆ ಇತ್ಯಾದಿ ಬದುಕಿನ ವಿಚಾರಗಳು ಪಡೆದುಕೊಂಡ ಸ್ವರೂಪವೇನು ಎನ್ನುವ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕು.

ಚಳುವಳಿ ವ್ಯಾಪಿಸಿದ ಪ್ರದೇಶಗಳು, ಪ್ರಭಾವಿಸದಿದ್ದ ಪ್ರದೇಶ, ಜನವಿಭಾಗಗಳು ಚಳುವಳಿಯ ಸೋಲು, ಗೆಲುವುಗಳೆಲ್ಲವುಗಳ ಪರಾಮರ್ಶೆ ಮಾತ್ರ ಇಂದಿನ ವಾಸ್ತವದಲ್ಲಿ ಅಂದಿನ ಈ ಕ್ರಾಂತಿಕಾರಿ ವಿಚಾರಗಳನ್ನು ಬಡಿದೆಬ್ಬಿಸಲು ಕರ್ನಾಟಕದ ಸಾಮಾಜಿಕ ಚಲನೆಯನ್ನು ಮತ್ತಷ್ಟು ಮುಂದೆ ಒಯ್ಯಲು ಸಹಾಯವಾಗುತ್ತದೆ.

ಮಹಾ ಹೋರಾಟಗಾರ ಅಂಬೇಡ್ಕರ್



ದಲಿತರು ಶತಶತಮಾನಗಳ ತಮ್ಮ ಜಡತನದಿಂದ ಜಾಗೃತರಾಗುವ ತನಕ ಈ ನಾಡಿಗೆ ಮುಕ್ತಿಯಿಲ್ಲ ಎಂದು ಸಾರಿದ ಬಾಬಾ ಸಾಹೇಬ ಅಂಬೇಡ್ಕರ್ ದಲಿತರ ನಾಯಕರು ಮಾತ್ರವಲ್ಲ. ಎಲ್ಲ ದಲಿತರ ಜಾಗೃತಿಯ ಸಂಕೇತ ಸ್ವಾಭಿಮಾನದ ಪ್ರತೀಕ, ಹೋರಾಟದ ಸ್ಫೂರ್ತಿ. ಅಂಬೇಡ್ಕರ್ ಅವರ ಪ್ರತಿಪಾದನೆಯಿಂದ ಈ ಶತಮಾನದ ಆರಂಭದಲ್ಲಿ ಭಾರತದಲ್ಲಿ ಆರಂಭವಾದ ದಲಿತ ಚಳುವಳಿ ಇಂದು ಸಾಗುತ್ತಿರುವ ಹಾದಿ ಮತ್ತು ದಲಿತ ಸಂಘಟನೆಗಳು ತಳೆದಿರುವ ಸೈದ್ಧಾಂತಿಕ ನಿಲುವುಗಳ ಹಿನ್ನಲೆಯಲ್ಲಿ ಮತ್ತೊಮ್ಮೆ ಅಂಬೇಡ್ಕರ್ ಅವರ ಚಿಂತನೆ ಹಾಗೂ ಸಿದ್ಧಾಂತಗಳನ್ನು ಅಧ್ಯಯನ ಮಾಡುವ ಅಗತ್ಯವಿದೆ. ಅಂಬೇಡ್ಕರ್ ಚಿಂತನೆಗಳನ್ನು ಆಳವಾಗಿ ಅಧ್ಯಯನ ಮಾಡದೆ ಕೇವಲ ಅವರನ್ನು ಉತ್ಸವ ಮೂರ್ತಿಯನ್ನಾಗಿಸಿ, ದಲಿತ ಸಂಘಟನೆಗಳು ತಮ್ಮ ಅಂತರಿಕ ವೈರುದ್ಧ್ಯಗಳ ಸೆಳವಿಗೆ ಸಿಕ್ಕು ಅಂಬೇಡ್ಕರ್ ಅವರ ಮೂಲ ಸಿದ್ದಾಂತದಿಂದ ದೂರವಾಗುತ್ತಿದ್ದರೆ, ಇನ್ನೊಂದೆಡೆ ಬಂಡವಾಳ ಶಾಹಿ ಪಕ್ಷಗಳು ಅಂಬೇಡ್ಕರ್ ಅವರನ್ನು ದಲಿತರ ಓಟುಗಳಿಸುವ ಚುನಾವಣಾ ಸರಕನ್ನಾಗಿ ಮಾಡಿಕೊಳ್ಳುತ್ತಿವೆ. ಮತ್ತೊಂದೆಡೆ ದಲಿತರ ಬಗೆಗಿನ ಅಸಹನೆಯಿಂದ ಅಂಬೇಡ್ಕರ್ ಪ್ರತಿಮೆಗಳನ್ನು ಧ್ವಂಸಮಾಡುವ ಕುರೂಪಗೊಳಿಸುವ ವಿಕೃತ ಮನಸ್ಸುಗಳು, ದಲಿತರ ಮೇಲೆ ಅಮಾನವೀಯ ದಬ್ಬಾಳಿಕೆ ನಡೆಸುತ್ತಿರುವ ಪಾಶವೀ ಶಕ್ತಿಗಳು ಈ ಸಂದರ್ಭದಲ್ಲಿ ಇಂದು ನಾವು ಹೋರಾಟಗಾರ ಅಂಬೇಡ್ಕರ್ ಅವರನ್ನು ಅವರ ಹೋರಾಟಗಳನ್ನು ನೆನಪಿಸಿಕೊಳ್ಳಬೇಕಾಗಿದೆ.

ಅಂಬೇಡ್ಕರ್ ಅವರ ಬದುಕೇ ಒಂದು ಹೋರಾಟ. ಅಂತ್ಯಂತ ಕೀಳುಜಾತಿಯಾದ 'ಮಹರ್' ಜನಾಂಗದಲ್ಲಿ ಜನಿಸಿ ಶಿಕ್ಷಣ ಪಡೆಯಲು ದೊಡ್ಡ ಹೋರಾಟವನ್ನೇ ಮಾಡಿದ ಅಂಬೇಡ್ಕರ್ ಹಿಂದೂ ಧರ್ಮದಲ್ಲಿನ ಅಸಮಾನತೆ, ಜಾತಿಪದ್ಧತಿ, ಅಸ್ಪೃಶ್ಯತಾ ಆಚರಣೆಗೆ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ. "ಹಿಂದೂಧರ್ಮವನ್ನು ಅಸಮಾನತೆಯ ತವರು, ಅದು ಏಣಿಯಿಲ್ಲದ, ಪ್ರವೇಶ ದ್ವಾರವಿಲ್ಲದ ಅನೇಕ ಮಹಡಿಗಳುಳ್ಳ ಗೋಪುರ, ಒಂದು ಮಹಡಿಯಲ್ಲಿ ಹುಟ್ಟಿದ ಜನ ಅಲ್ಲಿಯೇ ಸತ್ತು ಕೊಳೆಯಬೇಕು." ಎಂದ ಅಂಬೇಡ್ಕರ್ ಈ ಅಸಮಾನತೆಯ ವಿರುದ್ಧ ಹಲವಾರು ಹೋರಾಟಗಳನ್ನು ನಡೆಸಿದರು. ಅದರಲ್ಲಿ ಪ್ರಮುಖವಾದವುಗಳು ಮಹಾಡ್ ಸತ್ಯಾಗ್ರಹ ಹಾಗೂ ನಾಸಿಕ್‌ನ ಗುಡಿ ಪ್ರವೇಶ ಚಳುವಳಿ.

ಮಹಾಡ್ ಸತ್ಯಾಗ್ರಹ

ಆಗಸ್ಟ್ 4, 1923ರಲ್ಲಿ ಮುಂಬಯಿ ವಿಧಾನ ಪರಿಷತ್‌ನಲ್ಲಿ ದಲಿತರಿಗೆ ಸಾರ್ವಜನಿಕ ಬಾವಿ, ಕೆರೆ, ಧರ್ಮಶಾಲೆ, ಮತ್ತು ಸಾರ್ವಜನಿಕ ಶಾಲೆಗಳಲ್ಲಿ ಪ್ರವೇಶ ದೊರೆಯಬೇಕೆಂದು ಒಂದು ವಿಧೇಯಕ ಮಂಡನೆಯಾಯಿತು. ಇದರ ಭಾಗವಾಗಿ ಮಹಾಡ್ ನಗರಸಭೆ ಚೌಡಾದ ಎನ್ನುವ ಕೆರೆಯನ್ನು ಅಸ್ಪೃಶ್ಯರು ಉಪಯೋಗಿಸಬಹುದು ಎಂದು ತಿರ್ಮಾನ ತೆಗೆದು ಕೊಂಡಿತು. ಆದರೆ ಸವರ್ಣೀಯರ ವಿರೋಧದಿಂದಾಗಿ ಅಸ್ಪೃಶ್ಯರು ಈ ಕೆರೆಯ ನೀರನ್ನು ಮುಟ್ಟುವ ಧೈರ್ಯಮಾಡಲಿಲ್ಲ. 1927 ಮಾರ್ಚ್ ತಿಂಗಳಲ್ಲಿ ಸುಮಾರು 10,000 ದಲಿತರು ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಚೌಡಾದ ಕೆರೆಯ ನೀರನ್ನು ಮುಟ್ಟುವ ಪ್ರತಿಭಟನಾ ಚಳುವಳಿ ಪ್ರಾರಂಭಿಸಿದರು ಅಸ್ಪೃಶ್ಯರೆಲ್ಲರೂ ಅಂಬೇಡ್ಕರ್ ನೇತೃತ್ವದಲ್ಲಿ ಮಹಾಡ್‌ನ ಕೆರೆಯ ನೀರನ್ನು ಮುಟ್ಟುವುದರ ಜೊತೆಗೆ ಅಲ್ಲಿಯ ವಿರಶೈವ ದೇವಸ್ಥಾನವನ್ನು ಪ್ರವೇಶಿಸುವರು ಎಂಬ ಸುಳ್ಳು ವದಂತಿಯನ್ನು ಸವರ್ಣೀಯರು ಹಬ್ಬಿಸಿದ ಪರಿಣಾಮವಾಗಿ ಸವರ್ಣೀಯರು ದಲಿತರ ಮೇಲೆ ಹಲ್ಲೆ ಮಾಡಿದರು, ದಲಿತರೂ ಕೂಡ ಪ್ರತಿ ಹಲ್ಲೆ ಮಾಡಲು ನಿರ್ಧರಿಸಿದಾಗ ಅಂಬೇಡ್ಕರ್ ತಾತ್ಕಾಲಿಕವಾಗಿ ಮಹಾನ್ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದರು.

1927 ಆಗಸ್ಟ 4 ರಂದು ಮಹಾನ್ ನಗರ ಸಭೆ 1924ರ ತನ್ನ ಹೆಸರಿನ ಗೊತ್ತುವಳಿಯನ್ನು ವಿರೋಧಿಸಿ ಅಸ್ಪೃಶ್ಯರು ಕೆರೆಯ ನೀರನ್ನು ಉಪಯೋಗಿಸ ಕೂಡದೆಂದು ಪ್ರತಿಬಂಧಿಸಿತು. ಮಹಾಡ್ ನಗರ ಸಭೆಯ ದಲಿತ ವಿರೋಧಿ ಧೋರಣೆಯನ್ನು ಪ್ರತಿಭಟಿಸಿ ಅಂಬೇಡ್ಕರ್ ಈ ಕಾಯಿದೆಯ ವಿರುದ್ಧ ಆಂದೋಲನ ಆರಂಭಿಸುವ ನಿರ್ಧಾರ ತೆಗೆದುಕೊಂಡರು. ಮಹಾಡ್ ಚಳುವಳಿ ಸನಾತನಿಗಳಲ್ಲಿ ಕೋಲಾಹಲ ಉಂಟು ಮಾಡಿತು. ಅಸ್ಪೃಶ್ಯರು ಕೆರೆಯ ಬಳಿ ಸುಳಿಯದಂತೆ ಪ್ರತಿಬಂಧವನ್ನು ಚಲಾಯಿಸುವಂತೆ ಜಿಲ್ಲಾ ಮಾಜಿಸ್ಟ್ರೇಟರಿಗೆ ಅರ್ಜಿಸಲ್ಲಿಸಿದರು ಅವರ ಅರ್ಜಿ ತಿರಸ್ಕೃತವಾಯಿತು. 1927ರ ಡಿಸೆಂಬರ್ 25-26 ರಂದು ಮಹಾಡ್‌ನಲ್ಲಿ ಸಮ್ಮೇಳನ ನಡೆಸಲು ನಿರ್ಧರಿಸ ಲಾಯಿತು. ಈ ಕೆರೆಯ ನೀರು ಕುಡಿಯದಿದ್ದರೆ ನಾವು ಸಾಯುವುದಿಲ್ಲ. ನಾವು ಮಾನವರು ಈ ಕೆರೆಯ ನೀರಿಗೆ ನಮಗೂ ಹಕ್ಕಿದೆ ಎಂದು ಸಾಧಿಸುವುದೇ ಈ ಚಳುವಳಿಯ ಉದ್ದೇಶ ಎಂದು ಹೇಳಿದರು. ದಲಿತರ ಪ್ರಗತಿಯನ್ನು ಸ್ಥಗಿತಗೊಳಿಸಿ ಅವರನ್ನು ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ದಾಸ್ಯಕ್ಕೀಡುಮಾಡಿದ ಮನುಸ್ಮೃತಿಯನ್ನು ಸುಡಬೇಕೆಂದು ಸಮ್ಮೇಳನ ನಿರ್ಧರಿಸಿತು. 1927 ಡಿಸೆಂಬರ್ 25 ರಂದು ಅಂಬೇಡ್ಕರ್ ನೇತೃತ್ವದಲ್ಲಿ ಮನುಸ್ಮೃತಿಯನ್ನು ಸಾರ್ವಜನಿಕವಾಗಿ ದಹನ ಮಾಡಲಾಯಿತು. ಅಂಬೇಡ್ಕರರು ಮುಂದೊಮ್ಮೆ ಈ ಘಟನೆಯನ್ನು ಕುರಿತು "ಅದೊಂದು ಉಗ್ರ ಕಾರ್ಯಕ್ರಮ ನಿಜ. ಸಾವಿರಾರು ವರ್ಷಗಳಿಂದ ಸಂಗ್ರಹವಾಗಿರುವ ಘೋರ ಸಂಕಟವನ್ನು ಪ್ರದರ್ಶಿಸಲು ಮತ್ತು ಜಗತ್ತಿನ ಗಮನವನ್ನು ಸೆಳೆಯಲು ಅದೊಂದು ಸಾಧನವಾಯಿತು ಕದ ಬಡಿಯದಿದ್ದರೆ ಯಾರೂ ಕದ ತೆಗೆಯುವುದಿಲ್ಲ ಮನುಸ್ಮೃತಿಯಲ್ಲಿನ ಶೂದ್ರಾತಿ ಶೂದ್ರರನ್ನು ಕುರಿತ ಸಂಗತಿಗಳು ತಿರಸ್ಕಾರಾರ್ಹ" ಎಂದಿದ್ದಾರೆ.

ನಾಸಿಕ ಕಾಳಿಕಾಂಬ ದೇವಸ್ಥಾನ ಪ್ರವೇಶ ಹೋರಾಟ

ಅಂಬೇಡ್ಕರರು ಸಾಮಾಜಿಕ ಅಸಮಾನತೆಯ ನಿವಾರಣೆಗೆ ಮತ್ತೊಂದು ಪ್ರಮುಖ ಹೋರಾಟ ನಾಸಿಕದಲ್ಲಿನ ಕಾಳಿಕಾಂಬ ದೇವಸ್ಥಾನ ಪ್ರವೇಶ ಚಳುವಳಿ. ನಾಸಿಕಕ್ಕೆ ಬಂದು ರಾಮನನ್ನು ಪೂಜಿಸುವ ಹಕ್ಕನ್ನು ಬದಲಾಯಿಸಬೇಕೆಂದು ದಲಿತರಿಗೆ ಕರೆ ನೀಡಲಾಯಿತು. ಈ ಕರೆಗೆ ಓಗೊಟ್ಟು ಸುಮಾರು ಎಂಟು ಸಾವಿರ ಕಾರ್ಯಕರ್ತರು ಮಾರ್ಚ್ 3, 1930 ರಂದು ದೇವಸ್ಥಾನದ ಮುಂದೆ ಜಮಾಯಿಸಿದರು. 1930 ಏಪ್ರಿಲ್ 9 ರಂದು 'ರಾಮರಥ' ಎಳೆಯುವ ಕಾರ್ಯಕ್ರಮವಿತ್ತು. ಈ ಕಾರ್ಯಕ್ರಮದಲ್ಲಿ ಇತರೆ ಹಿಂದೂಗಳಂತೆ ದಲಿತರಿಗೆ ಸಮಾನ ಅವಕಾಶ ನೀಡದೆ ಹೋದರೆ ರಥವನ್ನು ಮುಂದೆ ಬಿಡಲಾಗುವುದಿಲ್ಲ ಎಂದು ಅಂಬೇಡ್ಕರ್ ಎಚ್ಚರಿಕೆ ನೀಡಿದರು. ಇದಕ್ಕೆ ಒಪ್ಪಿಗೆ ನೀಡಿದ ಸವರ್ಣೀಯರು, ಅಸ್ಪೃಶ್ಯರು ರಥವನ್ನು ಮುಟ್ಟಿದಾಗ ಅವರ ಮೇಲೆ ಹಲ್ಲೆ ಮಾಡಿದರು. ಈ ಹೋರಾಟ ಸುಮಾರು 5 ವರ್ಷಗಳ ಕಾಲ ನಿರಂತರವಾಗಿ ನಡೆದು ಕೊನೆಗೆ 1935 ರ ಅಕ್ಟೋಬರ್ ತಿಂಗಳಲ್ಲಿ ಕಾಳಿಕಾಂಬ ದೇವಸ್ಥಾನದ ಪ್ರವೇಶಕ್ಕೆ ದಲಿತರಿಗೂ ಅವಕಾಶ ನೀಡಲಾಯಿತು.

ಈ ಹೋರಾಟಗಳು ಅಂಬೇಡ್ಕರ್ ಅವರನ್ನು ಒಬ್ಬ ಸಾಮಾಜಿಕ ಕ್ರಾಂತಿಕಾರಿಯನ್ನಾಗಿ ಮಾರ್ಪಾಡು ಮಾಡಿದವು.

ಅಂಬೇಡ್ಕರ್ ಹಾಗೂ ರೈತ-ಕಾರ್ಮಿಕ ಚಳುವಳಿ: ಜಾತಿ ವಿನಾಶಕ್ಕಾಗಿ, ಅಸ್ಪೃಶ್ಯತೆಯನ್ನು ವಿರೋಧಿಸಿ ಉಗ್ರ ಹೋರಾಟ ನಡೆಸಿದ ಅಂಬೇಡ್ಕರ್ ಹಲವಾರು ರೈತ-ಕಾರ್ಮಿಕ ಚಳುವಳಿಗೂ ನೇತೃತ್ವ ವಹಿಸಿದ್ದರು. ದುಡಿಯುವ ವರ್ಗವನ್ನು ಸಂಘಟಿಸಿ ಹೋರಾಟಕ್ಕೆ ಅಣಿ ಮಾಡುವ ದಿಸೆಯಲ್ಲಿ ಕಾರ್ಯಶೀಲರಾದರೂ ಜಾತಿ ಆಧಾರಿತ ರಾಜಕೀಯ ಬಂದು ಹೆಚ್ಚೇನನ್ನು ಸಾಧಿಸಲು ಸಾಧ್ಯವಿಲ್ಲವೆಂದು ಅವರಿಗೆ ತಿಳಿದಿತ್ತು, ಹಾಗಾಗಿ ಸಣ್ಣ ರೈತರು, ಕೃಷಿಕೂಲಿ ಕಾರ್ಮಿಕರು, ಗಿರಣಿ ಕಾರ್ಮಿಕರನ್ನು ಸಂಘಟಿಸಿದರು. ಈ ಸಮಯದಲ್ಲಿ ಬಿ.ಟಿ.ರಣದಿವೆ, ಎಸ್.ಎಂ.ಚೌಗೆ ಮೊದಲಾದವರ ಜೊತೆಯಲ್ಲಿ ಹಲವಾರು ಹೋರಾಟಗಳನ್ನು ನಡೆಸಿದರು. 1937 ರಿಂದ 1942 ರ ವರೆಗಿನ ಈ ಅವಧಿ ಹೋರಾಟಗಾರ ಅಂಬೇಡ್ಕರ್ ಕಟುವಾಗಿ ಬದುಕಿದ ಕಾಲ. ಈ ಅವಧಿಯಲ್ಲಿ ದಲಿತರಿಗೆ ಭೂಮಿಯನ್ನು ದಕ್ಕಿಸಿ ಕೊಡಲು ಖೋಟ್ ಪದ್ಧತಿಯ ನಿರ್ಮೂಲನಕ್ಕಾಗಿ ಚಾರಿತ್ರಿಕ ಹೋರಾಟ ನಡೆಸಿದರು. ಈ ಹೋರಾಟಗಳು 'ಜೀತ ವಿಮುಕ್ತಿ'ಗೆ ನಾಂದಿ ಹಾಡಿದವು. 'ಮಹರ್ ವತನ್' ಕಾಯಿದೆ ರದ್ದತಿ ಒತ್ತಾಯಿಸಿ ಒಂದು ಕರಡು ತಯಾರಿಸಿದ ಅಂಬೇಡ್ಕರ್ ಎಲ್ಲೆಡೆ ಸಂಚರಿಸಿ ರೈತ ಕಾರ್ಮಿಕರನ್ನು ಸಭೆಗಳನ್ನು ಸಂಘಟಿಸಿದರು, ಸರ್ಕಾರದ ಮೇಲೆ ಸಾಮೂಹಿಕ ಒತ್ತಡ ತರಲು ರೈತ-ಕಾರ್ಮಿಕ ಜಾಥಾ ಹೊರಡಿಸಿದರು. ಅವರ ಬೇಡಿಕೆಗಳೆಂದರೆ ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿಯ ನಿಗದಿ, ಗೇಣಿ ವಾಪಸಾತಿ, ಸಣ್ಣ ಕೃಷಿಕರಿಗೆ ನೀರಿನ ತೆರಿಗೆಯನ್ನು ಶೇ 50 ರಿಯಾಯಿತಿ, ಈ ಬೇಡಿಕೆಗಳು ಅಂದಿನ ಸಂದರ್ಭದಲ್ಲಿ ಅತ್ಯಂತ ಪ್ರಗತಿಪರವಾಗಿದ್ದವು. ಹೀಗೆ ಅಂಬೇಡ್ಕರ್ ಜೀವನದ ಉದ್ದಕ್ಕೂ ಹೋರಾಟಗಾರನಾಗಿ ದಲಿತ ಜನಸಮುದಾಯದ ದಾರಿ ಬೆಳಕಾದರು.

- ಎಂ.ಅನಂತ್

ಅಂಬೇಡ್ಕರ್ ತಾಕಲಾಟಗಳು ಹಾಗೂ ದಲಿತ ಚಳುವಳಿ

ಜಿ.ಎನ್.ನಾಗರಾಜ್

ಅಂಬೇಡ್ಕರ್‌ರವರಿಗೆ ದಲಿತ ಜನಾಂಗದ ಬಗೆಗಿದ್ದ ಅಪಾರ ಕಳಕಳಿ ಹಾಗೂ ಅವರ ಮೇಲಿದ್ದ ದಾಸ್ಯದ ನೊಗವನ್ನು ಕಿತ್ತೆಸೆಯುವುದಕ್ಕಾಗಿ ಅವರು ಮಾಡುತ್ತಿದ್ದ ಪ್ರಯತ್ನಗಳು ದಲಿತ ಜನಸಮುದಾಯವನ್ನು ಆಕರ್ಷಿಸಿದ್ದವು. ಜೊತೆಗೆ ಭಾರತದ ಸಾಮಾಜಿಕ, ಧಾರ್ಮಿಕ ರಚನೆಯ ಜಾತಿ ಪದ್ಧತಿಯ ಪುರಾಣಗಳ ಕಟ್ಟುಕಥೆಗಳನ್ನು ಬಯಲಿಗೆಳೆದು ಅವರು ಅಂದಿನ ಸಂದರ್ಭದಲ್ಲಿ ಮೂಡಿಸಿದ್ದ ಸ್ಪಂದನ ಅವರನ್ನು ರಾಷ್ಟ್ರಮಟ್ಟದ ನಾಯಕರಾಗಿ ಹಲವಾರು ಪ್ರಶ್ನೆಗಳಲ್ಲಿ ವಾದ-ವಿವಾದಗಳಲ್ಲಿ ಪ್ರಮುಖ ಪಾತ್ರವಹಿಸುವಂತೆ ಮಾಡಿತ್ತು. ಅವರು ಕೇಂದ್ರ ಸರ್ಕಾರದ ಮಂತ್ರಿಗಳಾಗಿ, ಸಂವಿಧಾನ ಕರಡು ರಚನಾ ಸಮಿತಿಯ ಸಂಚಾಲಕರಾಗಿ ಹಲವು ಪ್ರಶ್ನೆಗಳ ವಿಷಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದರು ಎಂಬುದು ಇಂದು ಸುಪ್ರಸಿದ್ಧವಾದ ಸಂಗತಿ.

ಆದರೆ ಅದೇ ಸಂದರ್ಭದಲ್ಲಿ ಅವರ ಮನಸ್ಸು ಹಲವು ತಾಕಲಾಟಗಳಿಗೆ ಗುರಿಯಾಗಿತ್ತು, ದಲಿತರ ವಿಮೋಚನೆಯ ದಾರಿ ಏನು? ಪ್ರಜಾಪ್ರಭುತ್ವದಿಂದ, ಸಂವಿಧಾನಬದ್ಧ ಹಕ್ಕುಗಳಿಂದ ಸಾಧ್ಯವೇ? ಅಥವಾ ನಿರಂತರವಾದ ಹೋರಾಟವೇ? ಹಿಂದು ಧರ್ಮದಲ್ಲಿಯೇ ಇದ್ದು ಅದನ್ನು ಪರಿವರ್ತಿಸುವುದು ಹೇಗೆ? ಮತಾಂತರವೇ? ಹೀಗೆ ಅವರ ಮುಂದೆ ಹಲವು ಪ್ರಶ್ನೆಗಳು.

ಪ್ರಜಾಪ್ರಭುತ್ವದ ಬಗ್ಗೆ ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ರಕ್ತಪಾತವಿಲ್ಲದೆ ತರಬಹುದಾದ ವಿಧಾನ ಎಂಬ ನಂಬಿಕೆ. ಈ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಸಾಧನವಾಗಿ ಭಾರತದ ಸಂವಿಧಾನ ದೇಶದ ಅಸ್ಪೃಶ್ಯ ಜನಾಂಗಗಳಿಗೆ ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ನೀಡಿದ ಭರವಸೆ ಹಾಗೂ ಅಂಬೇಡ್ಕರ್‌ರವರ ಹೋರಾಟದ ಫಲವಾಗಿ ಬಂದಿದೆ. ಮೀಸಲಾತಿ ಸೇರಿದಂತೆ ಇತರ ಕೆಲವು ಹಕ್ಕುಗಳಿಂದ ದಲಿತರ ಜೀವನ ಮಾರ್ಪಾಟಾಗಬಹುದು ಎನ್ನುವ ಆಶಾಭಾವನೆ. ಅದೇ ಸಮಯದಲ್ಲಿ ಈ ಸಂವಿಧಾನದಲ್ಲಿ ನನ್ನಿಚ್ಛೆಗೆ ವಿರುದ್ಧವಾಗಿ ಹಲವು ಅಂಶಗಳನ್ನು ಬರೆದ ಬಾಡಿಗೆ ಭಂಟನಾಗಿದ್ದೇನೆ ಎನ್ನುವ ಸಂದೇಹ. ಇದರಲ್ಲಿ ಭರವಸೆಗಳು ವಾಸ್ತವ ರೂಪಕ್ಕೆ ಬರುತ್ತದೆಯೇ? ಭಾರತವನ್ನು ಆಳುತ್ತಿರುವ ಜನ ಅದನ್ನು ಜಾರಿಗೊಳಿಸುತ್ತಾರೆಯೇ ಎಂಬ ಆತಂಕ.

ಪ್ರಜಾಪ್ರಭುತ್ವದಿಂದ,ಸಂವಿಧಾನದತ್ತವಾದ ಹಕ್ಕುಗಳು ನಮಗೆ ಸಿಗುವುದಿಲ್ಲ ಹೋರಾಟವಿಲ್ಲದೆ ಮಾರ್ಗವಿಲ್ಲ ಎಂಬ ಈ ಹೋರಾಟ ಕೊನೆಗೆ ಕಮ್ಯುನಿಸ್ಟರ ಕಡೆಗೆ ಚಲಿಸುತ್ತದೆ, ಇಡೀ ದೇಶ ವರ್ಗ ಸಂಘರ್ಷದ ಕಣವಾಗುತ್ತದೆ ಎಂಬ ಅನಿವಾರ್ಯತೆಯ ಅರಿವು. ಬ್ರಿಟನ್, ಅಮೇರಿಕಾಗಳ ಶಿಕ್ಷಣದಿಂದ ಪ್ರಜಾಪ್ರಭುತ್ವದ ಬಗ್ಗೆ ಮೂಡಿದ ಅಪಾರ ವಿಶ್ವಾಸದ ಜೊತೆಗೆ ಕಮ್ಯುನಿಸಂನ ಬಗ್ಗೆ ಹುಟ್ಟಿದ ಅಪನಂಬಿಕೆಗಳು ಇವೆಲ್ಲವುಗಳ ತಾಕಲಾಟ ಸ್ವಾತಂತ್ರ್ಯಾನಂತರ ಜೀವನವನ್ನು ವ್ಯಾಪಿಸಿದೆ.

1952 ರಲ್ಲಿ ದೇಶದ ಮೊದಲ ಮಹಾ ಚುನಾವಣೆಯಲ್ಲಿ ಅವರ ಪಕ್ಷ ಹಾಗೂ ಅವರು ಸೋಲನ್ನಪ್ಪಿದಾಗ ಅಂಬೇಡ್ಕರರ ಮುಂದೆ ಮುಂದಾಗಬಹುದಾದ ಪಥ ಯಾವುದು? ಎಂಬ ಪ್ರಶ್ನೆ ಎದ್ದಿತು. ಹೋರಾಟವೇ? ಹೊಸ ಸ್ವಾತಂತ್ರ್ಯ ರಾಜಕೀಯ ಪಕ್ಷವೇ? ಮತಾಂತರವೇ? ಯಾವುದು ದಾರಿ?

1953 ರಲ್ಲಿ ಅಂದು ಅವರ ಪಕ್ಷವಾಗಿದ್ದ ಷೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ ನೇತೃತ್ವದಲ್ಲಿ ಬಂಜರು ಭೂಮಿ ಆಕ್ರಮಣಕ್ಕಾಗಿ ಚಳುವಳಿ ಆರಂಭಿಸಿದರು. ಹತ್ತಾರು ಸಾವಿರ ಜನಗಳು ಭಾಗವಹಿಸಿದ ಈ ಹೋರಾಟದಲ್ಲಿ 1700 ಜನ ಬಂಧನಕ್ಕೊಳಗಾದರು. ಈ ಹೋರಾಟದ ಮೂಲಕ ಭೂಹೀನ ಹರಿಜನರನ್ನು ಬಂಜರು ಭೂಮಿಯ ಮೇಲೆ ಪುನರ್ವಸತಿಗೊಳಿಸಬೇಕೆಂದು ಹಾಗೆ ಭೂಮಿತಿ ಶಾಸನಗಳ ಮೂಲಕ ಹೆಚ್ಚುವರಿ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಹರಿಜನರಿಗೆ ನೀಡಬೇಕೆಂದು ಮೂಲಭೂತ ಪ್ರಶ್ನೆಯನ್ನೆತ್ತಿದರು.

"ಹಳ್ಳಿಗಳಲ್ಲಿ ಮೇಲುಜಾತಿಗಳು ತಮ್ಮ ಆರ್ಥಿಕ ಶಕ್ತಿಯಿಂದ ಪರಿಶಿಷ್ಟ ಜಾತಿಯವರಿಗೆ ಸಂವಿಧಾನ ನೀಡಿದ ಹಕ್ಕುಗಳ ಉಪಯೋಗದಿಂದ ವಂಚಿಸುತ್ತಿದ್ದಾರೆ" ಎಂದು ಭೂಸುಧಾರಣೆ ಭೂ ಹಂಚಿಕೆಯಿಲ್ಲದೆ ಅಸ್ಪೃಶ್ಯತೆಯನ್ನು ತೊಡೆಯಲಾಗುವುದಿಲ್ಲ ಎಂದು ನಿಧಾನವಾಗಿಯಾದರೂ ಅಂಬೇಡ್ಕರವರಿಗೆ ಅರಿವಾಗಿತ್ತು.

ಆದರೆ ಅದೇ ಸಮಯದಲ್ಲಿ "ನಾನು ಹಿಂದುವಾಗಿ ಹುಟ್ಟಿದ್ದೇ ತಪ್ಪು ಆದರೆ ಹಿಂದುವಾಗಿ ಸಾಯುವುದಿಲ್ಲ" ಎಂಬ ಶಪಥವನ್ನು ಸಾಯುವುದರೊಳಗೆ ಸಾಧಿಸಲು ಹಾಗೂ ಭಾರತದ ದಲಿತ ಜನರು ಹೋರಾಟದ ಮೂಲಕ ಮಾರ್ಕ್ಸ್‌ನ ಚಿಂತನೆಯ ಕಡೆ ಅನಿವಾರ್ಯವಾಗಿ ಸಾಗುವುದನ್ನು ತಪ್ಪಿಸಬೇಕೆಂಬ ಇರಾದೆಯಿಂದ ಬೌದ್ಧಧರ್ಮಕ್ಕೆ ಮತಾಂತರವಾಗುವುದಕ್ಕೆ ಗಮನ ನೀಡಿದರು. ಮತಾಂತರದ ಸಂದರ್ಭದಲ್ಲಿ ಅವರೇ ಘೋಷಿಸಿದಂತೆ "ಮಾರ್ಕ್ಸ್ ಮಹಾಶಯ ತತ್ವದರ್ಶನ ಮನುಷ್ಯನ ಸರ್ವಾವಶ್ಯಕತೆಗಳನ್ನು ಪೂರೈಸುವುದಿಲ್ಲ. ಅವರ ಬದುಕಿಗೆ ಹಿಟ್ಟೊಂದೇ ಸಾಲದು, ಅವನಿಗೆ ಮನಸ್ಸು ಇದೆ. ಮನಸಿಗೆ ಆಹಾರ ಬೇಕು. ಧರ್ಮ ಈ ಆಹಾರವನ್ನೊದಗಿಸುತ್ತದೆ. ಹಿಂದೂ ಧರ್ಮದಿಂದ ಕಿಂಚಿತ್ತೂ ಸ್ಫೂರ್ತಿ ದೊರೆಯಲಿಲ್ಲವಾಗಿ ನಾನು ಬುದ್ಧ ಧರ್ಮವನ್ನಪ್ಪಿಕೊಳ್ಳಬೇಕಾಯಿತು" ಎಂದರು.

ಹೀಗೆ ಅವರು ಸಂವಿಧಾನಸಭೆ, ಲೋಕಸಭೆಗಳಲ್ಲಿ ಭಾರತದ ಪ್ರಜಾಪ್ರಭುತ್ವ ಹಾಗೂ ಸಂವಿಧಾನಗಳು ದಲಿತರಿಗೆ ನ್ಯಾಯ ನೀಡಲು ವಿಫಲವಾದರೆ ದೇಶ ರಕ್ತಕ್ರಾಂತಿಯ ಕಡೆಗೆ ಮಾರ್ಕ್ಸ್‌ವಾದದ ಕಡೆಗೆ ಹೊರಳುತ್ತದೆ ಎಂದು ಎಚ್ಚರಿಸಿದರೆ, ಹೊರಗೆ ದಲಿತ ಜನಸಮುದಾಯಕ್ಕೆ ಮಾರ್ಕ್ಸ್‌ವಾದಕ್ಕೆ ಬದಲಾಗಿ ಬೌದ್ಧ ಧರ್ಮವನ್ನು ಆಶ್ರಯಿಸುವಂತೆ ಸಂದೇಶ ನೀಡಿದರು. ಹೀಗೆ ಅಂಬೇಡ್ಕರ್‌ರವರ ತಾಕಲಾಟ ಅವರನ್ನು ದಲಿತರ ಜ್ವಲಂತ ಪ್ರಶ್ನೆಗಳನ್ನೆತ್ತಿ ಮಾಡುವ ಹೋರಾಟದಿಂದ ಮತಾಂತರದ ಕಡೆಗೆ ಸೆಳೆದೊಯ್ದಿತು.

ದೇಶದ ಅಸಂಖ್ಯಾತ ದಲಿತರ ಆಶಾಕಿರಣವಾಗಿ ಅವರ ಸ್ವಾಭಿಮಾನದ ಸಂಕೇತವಾಗಿ ದೇಶಾದ್ಯಂತ ಅಂಬೇಡ್ಕರ್‌ರವರು ಪೂಜಿತರಾಗಿದ್ದಾರೆ. ಆದರೆ ದಲಿತರ ವಿಮೋಚನೆಯ ದಾರಿಯಲ್ಲಿ ಮುಂದೆ ಸಾಗಿ ಅವರೇ ಕಂಡುಕೊಂಡ ದಲಿತರ ಸಂವಿಧಾನಬದ್ಧ ಹಕ್ಕುಗಳು ನನಸಾಗುವುದಕ್ಕೆ ಅಡ್ಡಿಯಾಗಿದ್ದ ಸಾಮಾಜಿಕ, ಆರ್ಥಿಕ ಪಟ್ಟಭದ್ರಹಿತಗಳ ವಿರುದ್ಧ ನಿರಂತರ ಹೋರಾಟದ

ಪುಟ 10 ಕ್ಕೆ

ಅಸ್ಥಿರತೆಯ ಗುಮ್ಮ ಗುರಕಾಯಿಸುತ್ತಿದೆ

ಕೇಂದ್ರ ಬಿಜೆಪಿಯ ನೇತೃತ್ವದ ಸರ್ಕಾರ ಬಿದ್ದು ಹೋಗಿ ಬೇರಾವ ಪಕ್ಷವೂ ಸರ್ಕಾರ ಮಾಡಲಾಗದೆ ಲೋಕಸಭೆಯನ್ನು ವಿಸರ್ಜಿಸಲಾಗಿದೆ. ಈ ಬದಲಾವಣೆಗಳ ಸಂದರ್ಭದಲ್ಲಿ ದೇಶದಲ್ಲಿ ರಾಜಕೀಯ ಅಸ್ಥಿರತೆ ಆರ್ಥಿಕವನ್ನು ಹಾಳುಗೆಡವಿದೆ, ದೇಶದ ಆರ್ಥಿಕದ ಮೇಲೆ ಅತ್ಯಂತ ಕೆಟ್ಟ ಪರಿಣಾಮವನ್ನು ಅದು ಬೀರುತ್ತದೆ ಎಂದು ಹುಯಿಲು ಎಬ್ಬಿಸಲಾಯಿತು.

ದೇಶದ ಶೇರು ಬೆಲೆ ಸೂಚ್ಯಂಕ ಗಿರಗಿರನೆ ಕೆಳಕ್ಕಿಳಿದದ್ದಾಗಿದೆ. ರಾಜಕೀಯ ಪರಿಸ್ಥಿತಿಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಆದಾಗಲೂ ಈ ಸೂಚ್ಯಂಕದಲ್ಲಿ ಅದರ ಪ್ರತಿಫಲನ ಆಗಿದೆ ಬಿಜೆಪಿಯ ಸರ್ಕಾರವೇ ಬೀಳಬಾರದಾಗಿತ್ತು ಎಂಬ ದೊಡ್ಡ ಪ್ರಚಾರವನ್ನು ಮಾಡಲಾಯಿತು.

ನಿಜಕ್ಕೂ ರಾಜಕೀಯ ಅಸ್ಥಿರತೆ ದೇಶಕ್ಕೆ ಅಷ್ಟೊಂದು ಹಾನಿ ಮಾಡಿದ್ದೇನು ಎಂಬುದು ಪ್ರಶ್ನೆ. ರಾಜಕೀಯ ಅಸ್ಥಿರತೆ ಬೇಡವಾಗಿತ್ತು ಎಂಬುದರ ಅರ್ಥ ಬಿಜೆಪಿ ಅಧಿಕಾರದಲ್ಲಿ ಮುಂದುವರೆಯಬೇಕಿತ್ತು ಎಂದು ಆಗುತ್ತದೆ. ಬಿಜೆಪಿಯಂತಹ ಪ್ರಜಾಪ್ರಭುತ್ವ ವಿರೋಧಿ ಕೋಮುವಾದಿ ಪಕ್ಷವೇ ಅಧಿಕಾರದಲ್ಲಿ ಮುಂದುವರೆದರೆ ಅದು ಸ್ಥಿರತೆಯೆ ? ಹಾಗಿದ್ದರೆ ಈ ಸ್ಥಿರತೆ ಯಾರಿಗೆ? ಯಾಕಾಗಿ?

[illegible]ಬೂರ್ಜ್ವಾ ಅರ್ಥಶಾಸ್ತ್ರಜ್ಞರು ರಾಜಕೀಯವನ್ನು ಆರ್ಥಿಕದಿಂದ ಬೇರ್ಪಡಿಸಬೇಕು ಎಂಬ ಪ್ರಸ್ತಾಪವನ್ನು ಇಟ್ಟರು. ಈ ಪ್ರಸ್ತಾಪದ ಅರ್ಥವೇನು? ಆರ್ಥಿಕ ನೀತಿಗಳನ್ನು ರಕ್ಷಿಸಿ ಕಾರ್ಯಗತಗೊಳಿಸುವುದರ ಅರ್ಥ ಜನ ಪ್ರತಿನಿಧಿಗಳು ಇದನ್ನು ಮಾಡುವ ಬದಲು ಅರ್ಥಶಾಸ್ತ್ರಜ್ಞರು, ಅಧಿಕಾರಿಗಳು ಇದನ್ನು ಮಾಡಬೇಕು ಎಂದು ಹೇಳಿದರೆ ದೇಶದಲ್ಲಿನ ಪ್ರಜಾಪ್ರಭುತ್ವ ಪದ್ಧತಿಯನ್ನೇ ಸಾಯಿಸಿದಂತೆ. ಅಧಿಕಾರಶಾಹಿ ಅಧಿಕಾರಕ್ಕೆ ಬಂದಂತೆ. ರಾಜಕೀಯವನ್ನು ಆರ್ಥಿಕದಿಂದ ಬೇರ್ಪಡಿಸ ಬೇಕೆನ್ನುವವರು ನಿಜದಲ್ಲಿ ಎಂತಹ ಪ್ರಸ್ತಾಪ ಮಾಡುತ್ತಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಇನ್ನು ಸ್ಥಿರತೆಯ ಪ್ರಶ್ನೆ, ಸ್ಥಿರತೆ ಯಾರಿಗೆ ಬೇಕು. ಯಾಕೆ ಬೇಕು? ದೇಶದಲಿ ಅಭಿವೃದ್ಧಿಗೆ [illegible]ವಾದ ಸರ್ಕಾರ ಬೇಕಾಗಿದೆ ಎಂಬುದು ನಿಜ. ಆದರೆ ಅಂತಹ ಸರ್ಕಾರ ಬಂಡವಾಳ ಶಾಹಿಗಳಿಗಾಗಿ ಭೂಮಾಲಿಕರಿಗಾಗಿ ಮಾತ್ರ ಕೆಲಸ ಮಾಡುವ ಸರ್ಕಾರವೆಂದಾದರೆ ಈ ಸರ್ಕಾರದ ಸ್ಥಿರತೆಯಿಂದ ಯಾರಿಗೆ ಲಾಭ? ಇಂಥ 'ಸ್ಥಿರತೆ'ಯ ಪಕ್ಷಗಳ ಆರ್ಥಿಕ ನೀತಿಗಳಿಂದಾಗಿಯೇ ಅಲ್ಲವೇ ಈಗಿನ ಅಸ್ಥಿರತೆಯ ಪರಿಸ್ಥಿತಿಯುಂಟಾಗಿರುವುದು?

ಸ್ಥಿರತೆ ಬೇಕು ಎಂದು ಹೇಳುವಾಗ ಬಿಜೆಪಿ ಸರ್ಕಾರ ಮುಂದುವರೆಯ ಬೇಕು ಎಂದು ಹೇಳಿದಂತಾಗುತ್ತದೆ. ಹಾಗಿದ್ದರೆ ಬಿಜೆಪಿ ಸರ್ಕಾರ ಯಾವ ವರ್ಗದ ಹಿತಾಸಕ್ತಿಯನ್ನು ಕಾಯುತ್ತದೆ? ಬಂಡವಾಳಿಗ ಭೂಮಾಲಿಕ ಹಿತಾಸಕ್ತಿಗಳನ್ನು ಅದು ಕಾಯುತ್ತಿತ್ತು, ಪ್ರತಿನಿಧಿಸುತ್ತಿತ್ತು. ದೇಶದ ದುಡಿವ ಜನತೆಗೆ, ರೈತರಿಗೆ ಈ ಸರ್ಕಾರ ಎಷ್ಟು ಅನುಕೂಲಕರವಾಗಿತ್ತು ಎಂಬ ಪ್ರಶ್ನೆ ಹಾಕಿಕೊಂಡರೆ ಈ ಸ್ಥಿರತೆಯ ಕೂಗಿನ ಹಿಂದೆ ಅಡಗಿರುವ ಹುನ್ನಾರ ಅರ್ಥವಾಗುತ್ತದೆ.

ಜಾತಿ ಧರ್ಮದ ವಿಷಯಗಳನ್ನು ದೊಡ್ಡದು ಮಾಡಿ ದುಡಿವ ಜನರನ್ನು ರೈತರನ್ನು ಒಡೆದು ಆಳುವ ನೀತಿಯನ್ನು ಅಳವಡಿಸಿಕೊಂಡ ಒಂದು ಸರ್ಕಾರ ಸ್ಥಿರವಾಗಿರಬೇಕು ಎಂದು ಯಾರಾದರೂ ಹೇಳಿದರೆ ಜಾತಿ ಧರ್ಮಗಳ ಹೆಸರಲ್ಲಿ ದುಡಿವ ಜನತೆಯ ಹೊಟ್ಟೆಯ ಮೇಲೆ ಹೊಡೆತ ಬೀಳುತ್ತಿರಬೇಕು ಎಂದು ಹೇಳಿದಂತಾಗುತ್ತದೆ.

ಬಂಡವಾಳ ಶಾಹಿಗಳು ದುಡಿವ ಜನವರ್ಗವನ್ನು ಹತ್ತಿಕ್ಕಿ ಅವರನ್ನು ನಿರಂತರವಾಗಿ ಶೋಷಿಸಿ ತಮ್ಮ ಲಾಭದ ಜೋಳಿಗೆ ತುಂಬಿಕೊಳ್ಳುತ್ತಿರುವ ಬಂಡವಾಳ ಶಾಹಿ ಪದ್ಧತಿಯಲ್ಲಿ ಸ್ಥಿರತೆ ಎಂಬುದು ಅವರ ಲಾಭಕ್ಕಾಗಿ ಮಾತ್ರ ಹೊರತು ಬೇರೇನಿಲ್ಲ. ಇಂತಹ ಸ್ಥಿರತೆ ಸಾಧ್ಯವೂ ಇಲ್ಲ. ಶೋಷಣೆ ಇದೆಯೆನ್ನುತ್ತಿರುವಾಗ ಅದಕ್ಕೆ ಪ್ರತಿಭಟನೆ ಹೋರಾಟಗಳು ಬಂದೇ ಬರುತ್ತವೆ ಮತ್ತು ಅಸ್ಥಿರತೆ ಉಂಟಾಗುತ್ತದೆ. ಆದ್ದರಿಂದ ಸ್ಥಿರತೆ ದುಡಿವ ಜನರದ್ದೇ ಆಡಳಿತ ಬಂದಾಗ ಶೋಷಣೆಯ ಲವಲೇಶವೂ ಇಲ್ಲದ ಸಮಾನತೆಯ ಸಮಾಜ ಸೃಷ್ಟಿಯಾದಾಗ ಮಾತ್ರ ಸಾಧ್ಯ.

ಬಿಜೆಪಿ ನೇತೃತ್ವದ ಸರ್ಕಾರ ಬಿದ್ದು ಬದಲೀ ಸರ್ಕಾರ ಬಾರದೆ ಹೋಗಿರುವುದರಿಂದ ಬಂಡವಾಳಶಾಹಿಗಳು ಹಲವು ಕೂಗುಗಳನ್ನು ಎಬ್ಬಿಸಿದ್ದಾರೆ. ಬಂಡವಾಳಿಗರ ಲಾಭಕ್ಕೆ ತೊಂದರೆ ಅಲ್ಪಸ್ವಲ್ಪ ಉಂಟಾಗುತ್ತದೆ ಎಂಬುದು ನಿಜ. ಆದರೆ ದೇಶದ ಆರ್ಥಿಕವೇ ಹಾಳಾಗಿ ಹೋಗುತ್ತದೆ ಎಂಬುದಲ್ಲ.

ಈಗ ಬಿಜೆಪಿ ನೇತೃತ್ವದ ಸರ್ಕಾರ ಮಂಡಿಸಿದ ಬಜೆಟ್ ಪಾಸಾಗಿದೆ. ಬಿಜೆಪಿಯ ಸರ್ಕಾರವೇ ಮಂದುವರೆದಿದ್ದರೆ ಏನಾಗುತ್ತದೆ ಎಂಬುದು ನೋಡೋಣ.

ಬಜೆಟ್‌ನಲ್ಲಿ ಮಂಡಿಸಿದ ಅಂಶಗಳನ್ನು ಅದು ಕಾರ್ಯಗತಗೊಳಿಸುತ್ತಿತ್ತು ಎಂದು ಒಪ್ಪಿಕೊಂಡರೆ ಅದು ಉದಾರೀಕರಣದ ಪ್ರಕ್ರಿಯೆಯನ್ನು ಇನ್ನೂ ಮುಂದುವರೆಸುತ್ತಿತ್ತು ಎಂಬುದು ಗೊತ್ತಾಗುತ್ತದೆ.

ಬಿಜೆಪಿಯ ಅಜೆಂಡಾದಲ್ಲಿ ಇದ್ದ ಮುಖ್ಯ ಕ್ರಮಗಳು

- 'ಎರಡನೇ ಸುತ್ತಿನ' ಆರ್ಥಿಕ ಸುಧಾರಣೆಯನ್ನು ವೇಗದಿಂದ ಜಾರಿಗೆ ತರುವುದು.
- ವಿಮಾ ನಿಯಂತ್ರಣ ಮಸೂದೆಯನ್ನು ಜಾರಿಗೆ ತರುವುದು
- ಪೇಟೆಂಟ್ಸ್ ಮಸೂದೆಯನ್ನು ಜಾರಿಗೆ ತರುವುದು
- ಕಂಪನಿ ಕಾಯಿದೆಯ ತಿದ್ದುಪಡಿ ಮಸೂದೆ ಜಾರಿಗೆ ತರುವುದು
- ವಿದೇಶಿ ವಿನಿಮಯ ನಿರ್ವಹಣೆ(ಫೆಮಾ) ಮಸೂದೆಯನ್ನು ಜಾರಿಗೆ ತರುವುದು
- ಮನಿ ಲಾಂಡರಿಂಗ್(ಅಂದರೆ ಕಪ್ಪು ಹಣ ಬಿಳಿ ಮಾಡುವುದು) ಮಸೂದೆ ಜಾರಿಗೆ ತರುವುದು
- ಕಾರ್ಮಿಕ ಕಾಯಿದೆಗಳಲ್ಲಿ ಬಂಡವಾಳಿಗರಿಗೆ ಬೇಕಾದ ಬದಲಾವಣೆಗಳನ್ನು ತರುವುದು.
- ಸಾರ್ವಜನಿಕ ವಲಯದ ಘಟಕಗಳ ಮಾರಾಟ ವೇಗಗೊಳಿಸುವುದು ಇತ್ಯಾದಿ.

ಈ ಮೇಲಿನವುಗಳಲ್ಲಿ ಯಾವುದು ದೇಶದ ದುಡಿವ ಜನರಿಗೆ ಅನುಕೂಲಕರವಾದ ನೀತಿ? ಯಾವುದು ಅಲ್ಲ. ಹೀಗಿರುವಾಗ ಬಿಜೆಪಿಯ ಸ್ಥಿರತೆ ಯಾರಿಗೆ ಬೇಕು?

ನಿಜವಾದ ವಿಷಯವೇನೆಂದರೆ ಬಿಜೆಪಿ ಸರ್ಕಾರ ಬಿದ್ದಿರುವುದು ತಡೆರಹಿತವಾಗಿ ಮುಂದುವರೆದಿದ್ದ ಉದಾರೀಕರಣದ ಕ್ರಮಗಳಿಗೆ ತಡೆಯನ್ನು ಒಡ್ಡಿದೆ ಎಂಬುದು. ಇಂತಹ ತಡೆ ಬಿದ್ದಿರುವುದರಿಂದಲೇ ಬಂಡವಾಳಿಗರು ಬೊಬ್ಬೆ ಹೊಡೆಯುತ್ತಿರುವುದು.

ಬದಲಿ ಸರ್ಕಾರ ರಚನೆಯಾಗಿದ್ದರೆ

ಬಿಜೆಪಿ ನೇತೃತ್ವದ ಸರ್ಕಾರ ಬಿದ್ದನಂತರ ಬದಲೀ ಸರ್ಕಾರ ರಚನೆಯಾಗಿದ್ದರೆ ಏನಾಗುತ್ತಿತ್ತು ಎಂಬುದು ಇನ್ನೊಂದು ಪ್ರಶ್ನೆ. ಅಂತಹ ಸರ್ಕಾರ ಎಡಪಕ್ಷಗಳ ಬೆಂಬಲದಿಂದಲೇ ರಚನೆಯಾಗುತ್ತಿತ್ತಾದ್ದರಿಂದ ಆಗ ತಡೆರಹಿತ ಉದಾರೀಕರಣ ಸಾಧ್ಯವಾಗುತ್ತಿರಲಿಲ್ಲ. ಬದಲಿಗೆ ಜನಪರವಾದ ಕೆಲವು ಕ್ರಮಗಳನ್ನಾದರೂ ಸರ್ಕಾರ ಕೈಗೊಳ್ಳಲೇಬೇಕಾಗುತ್ತಿತ್ತು. ಈ ಬದಲೀ ಸರ್ಕಾರ ಹಾಗೆ ಮಾಡದೇ ಅದೇ ಉದಾರೀಕರಣದ ನೀತಿಯನ್ನು ತಡೆರಹಿತವಾಗಿ ಮುಂದುವರೆಸ ಹೊರಟಿದ್ದರೆ ಆ ಸರ್ಕಾರವೂ ಖಂಡಿತವಾಗಿ ಬೀಳುತ್ತಿತ್ತು.

ಆದ್ದರಿಂದ ಸರ್ಕಾರಗಳ ಸ್ಥಿರತೆ ಎಂಬುದು ಬಂಡವಾಳಶಾಹಿಗಳು ತೋರುತ್ತಿರುವ ಗುಮ್ಮವಷ್ಟೆ. ಸ್ಥಿರತೆ ಬೇಕಾಗಿದ್ದಲ್ಲಿ ನಿಜವಾದ ಅರ್ಥದಲ್ಲಿ ಬಹುಪಾಲು ಜನರಿಗೆ (ಅಂದರೆ ದೇಶದ ದುಡಿವ ಜನರಿಗೆ) ಅನುಕೂಲಕರವಾದ ಆರ್ಥಿಕ ನೀತಿಗಳನ್ನು ರೂಪಿಸಿ ಜಾರಿಗೆ ತರುವಂತಹ ಸರ್ಕಾರ ಬರಬೇಕು ಆಗ ಮಾತ್ರ ಸ್ಥಿರತೆ ಸಾಧ್ಯ.



ರಾಜಕೀಯ ಬಿಕ್ಕಟ್ಟಿನ ಅರ್ಥಶಾಸ್ತ್ರ (?)

ಇದನ್ನು ರಾಜಕೀಯ ಬಿಕ್ಕಟ್ಟಿನ ಅರ್ಥಶಾಸ್ತ್ರ ಎಂದು ಬಂಡವಾಳಿಗರು ಕರೆದಿದ್ದರೆ ಕೇಂದ್ರ ಸರ್ಕಾರ ಬಹುಮತ ಕಳೆದುಕೊಂಡು ವಿಶ್ವಾಸಮತದಲ್ಲಿ ಸೋತು ಬದಲೀ ಸರ್ಕಾರವೂ ಮೂಡಿ ಬರದೇ ಹೋದ ಸ್ಥಿತಿ ಅನಿಶ್ಚಿತತೆಯನ್ನು ಹುಟ್ಟು ಹಾಕಿದೆ. ಈ ಅನಿಶ್ಚಿತತೆಯಿಂದಾಗಿ ಮಾರುಕಟ್ಟೆ ಬಂಡವಾಳೀಕರಣ 70000 ಕೋಟಿ ರೂಪಾಯಿಗಳಷ್ಟು ಕುಸಿದಿದೆಯಂತೆ. ಮಾರುಕಟ್ಟೆ ಬಂಡವಾಳೀಕರಣ ಎಂದರೆ ಶೇರುದಾರರ ಕೈಯಲ್ಲಿರುವ ಕಂಪನಿ ಶೇರುಗಳ ಬೆಲೆಯ ಮೊತ್ತ. ಉದಾಹರಣೆಗೆ ಒಂದು ಕಂಪನಿಯ ಒಂದು ಲಕ್ಷ ಶೇರುಗಳು ಶೇರುದಾರರ ಕೈಯಲ್ಲಿದ್ದರೆ ಪ್ರತಿ ಶೇರಿನ ಮಾರುಕಟ್ಟೆ ಬೆಲೆ 100 ರೂಪಾಯಿಯಾದರೆ ಮಾರುಕಟ್ಟೆ ಬಂಡವಾಳೀಕರಣ ಒಂದು ಕೋಟಿ ರೂಪಾಯಿ.

ಶೇರುಗಳ ಬೆಲೆಗಳಲ್ಲದೆ ಅಂತರ್ರಾಷ್ಟ್ರೀಯವಾಗಿ ಮಾರುಕಟ್ಟೆಯಲ್ಲಿ ರೂಪಾಯಿಯ ಬೆಲೆಯೂ ಕುಸಿದಿದೆ. ಇನ್ನೂ ಕುಸಿಯುತ್ತಿದೆ. ಬಂಡವಾಳಿಗರು ಈ ಹಾನಿಯನ್ನು ಅನುಭವಿಸುತ್ತಾರೆ. ಆದರೆ ಹಾನಿಯ ಹೊರೆ ಯನ್ನು ಅವರು ದುಡಿವ ಜನರ ಹೆಗಲಿಗೇ ದಾಟಿಸುತ್ತಾರೆ ಎಂಬುದೂ ನಿಜ. ಈ ದೃಷ್ಟಿ ಯಿಂದ ಇಂತಹ ಬೆಳವಣಿಗೆಗಳು ದುಡಿವ ಜನಕ್ಕೆ ಹೆಚ್ಚಿನ ನೋವನ್ನು ಉಂಟುಮಾಡುತ್ತವೆ.

ದುಡಿವ ಜನ ಹೋರಾಟಗಳ ಮೂಲಕವೇ ಇಂತಹ ವ್ಯವಸ್ಥೆಯನ್ನೇ ಬದಲಾಯಿಸುವ ಪ್ರಯತ್ನ ಮಾಡುತ್ತಾರೆ. ಬಿಜೆಪಿಯ ಕೋಮುವಾದೀ ರಾಜಕೀಯಕ್ಕಂತೂ ಈಗ ಖಂಡಿತ ಹೊಡೆತ ಬಿದ್ದಿದೆ.

ಆದಕ್ಕಾಗಿಯೇ ಅಸ್ಥಿರತೆ, ಆರ್ಥಿಕ ತೆರುವ ಬೆಲೆ ಅಭಿವೃದ್ಧಿ ಕಾರ್ಯ ಕುಂಠಿತ ಎಂದೆಲ್ಲ ಕೂಗುಗಳು ಎದ್ದಿರುವುದು. ಈ ಕೂಗುಗಳ ಹಿಂದಿನ ರಾಜಕೀಯ, ಆರ್ಥಿಕವನ್ನು ರಾಜಕೀಯದಿಂದ ಬೇರ್ಪಡಿಸಬೇಕು ಎಂಬ ಕೂಗಿನ ಹಿಂದಿನ ರಾಜಕೀಯ ಇವೆಲ್ಲವನ್ನು ಅರ್ಥಮಾಡಿಕೊಂಡು ಮುಂದುವರಿಯ ಬೇಕಾದ ಅವಶ್ಯಕತೆ ದುಡಿವ ಜನಕ್ಕೆ ಇದೆ. ಅಲ್ಲವೇ?

ಯಾರು ಯಾರ ದನಿ?

"ದೇಶದ ಆರ್ಥಿಕ ಆರೋಗ್ಯದ ದೃಷ್ಟಿಯಿಂದ ಕೂಡಲೇ ಚುನಾವಣೆಗಳು ಆಗಬೇಕು ಆಗ ಹೊಸ ಸರ್ಕಾರಕ್ಕೆ ಬಜೆಟ್ಟಿನಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಆರ್ಥಿಕ ಕ್ರಮಗಳ ಜಾರಿಗೆ ಸಮಯ ದೊರೆಯುತ್ತೆ"

- ಕೇಂದ್ರ ಹಣಕಾಸು ಮಂತ್ರಿ ಯಶವಂತ ಸಿನ್ಹಾ

"ಚುನಾವಣೆಗಳನ್ನು ಪೂರೈಸುವಲ್ಲಿನ ವಿಳಂಬ ಆರ್ಥಿಕ ಚೇತರಿಕೆಯ ಪ್ರಕ್ರಿಯೆಗೆ ಪೆಟ್ಟು ನೀಡುತ್ತದೆ. ಚುನಾವಣೆಗಳನ್ನು ಸುವ್ಯವಸ್ಥಿತವಾಗಿ ನಡೆಸಿ ಒಂದು ಸಶಕ್ತ ಕೇಂದ್ರ ಸರ್ಕಾರ ಅಧಿಕಾರ ಹಿಡಿದು ಆರ್ಥಿಕವನ್ನು ಮುಂದಕ್ಕೆ ಕೊಂಡೊಯ್ಯುತ್ತದೆಂದು ನಾವು ನಿರೀಕ್ಷಿಸುತ್ತೇವೆ.

- ಸಿಐಐನ ಅಧ್ಯಕ್ಷ ರಾಜೇಶ್ ಶಾ

ಮಧ್ಯ ಬಿಹಾರಿನಲ್ಲಿ ಮತ್ತೆ-ಮತ್ತೆ ಹಿಂಸಾಚಾರ ಏಕೆ ನಡೆಯುತ್ತಿದೆ?

ಏಪ್ರಿಲ್ 21 ರಂದು ಮತ್ತೆ ಮಧ್ಯ ಬಿಹಾರದ ಗಯಾ ಜಿಲ್ಲೆಯಲ್ಲಿ ಖಾಗ್ರಿ ಭೀಘಾ ಮತ್ತು ನರಘಾರಿ ಭೀಘಾ ಗ್ರಾಮಗಳಲ್ಲಿ 12 ಜನರ ಘೋರ ಹತ್ಯೆಯಾಗಿದೆ. ಏಕೆ ಈ ಪ್ರದೇಶದಲ್ಲಿ ಮತ್ತೆ-ಮತ್ತೆ ಇಂತಹ ಹಿಂಸಾಚಾರಗಳು ನಡೆಯುತ್ತಿವೆ?

ಮಧ್ಯ ಬಿಹಾರ ಒಳ್ಳೆ ನೀರಾವರಿ ಇರುವ, ರಾಜ್ಯದಲ್ಲೇ ಅತಿ ಹೆಚ್ಚು ಸಾಕ್ಷರತೆಯಿರುವ ಪ್ರದೇಶ. ಇಲ್ಲಿ ರಸಗೊಬ್ಬರದ ಬಳಕೆ ಇಡೀ ರಾಜ್ಯದಲ್ಲೇ ಅತಿ ಹೆಚ್ಚು. ವಾಸ್ತವವಾಗಿ ಇದು ಬಿಹಾರದ ಅತ್ಯುತ್ತಮ ಪ್ರದೇಶವಾಗ ಬೇಕಿತ್ತು, ಆದರೆ ಅತ್ಯಂತ ಕುಪ್ರಸಿದ್ಧ ಪ್ರದೇಶವಾಗಿದೆ ಯೇಕೆ? ಇದಕ್ಕೆ ಕಾರಣ ಭೂಮಾಲಕರ ಹಿಡಿತವನ್ನು ಸಡಿಲಿಸದೇ ಹಾಗೆಯೇ ಮುಂದುವರೆಸುವ ಧೋರಣೆಗಳು. ಈ ಭೂಮಾಲಕರಿಗೆ ಇಲ್ಲಿ ಉದ್ದಿಮೆಗಳನ್ನು ಬೆಳೆಸುವ ಆಸಕ್ತಿಯೂ ಇಲ್ಲ, ಉದ್ಯೋಗವಕಾಶ ಹೆಚ್ಚಿಸುವ ಆಸಕ್ತಿಯೂ ಇಲ್ಲ, ಏಕೆಂದರೆ ಇದರಿಂದ ಸಣ್ಣ ರೈತರು, ಕೃಷಿ ಕೂಲಿಕಾರರು ಅವರನ್ನು ಅವಲಂಬಿಸುವ ಪರಿಸ್ಥಿತಿಯೇ ಇಲ್ಲವಾಗುತ್ತದೆ. ಪಾಟ್ನಾದಲ್ಲಿ ಏಪ್ರಿಲ್ 17 ರಂದು ಒಂದು ವಿಚಾರ ಸಂಕಿರಣದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮುಖಂಡ ಸುನೀತ್ ಛೋಪ್ರಾ ಹೀಗೆಂದರು.

ಭೂಮಾಲಕರು ಈಗಲ್ಲ, ಬಹಳ ಹಿಂದಿನಿಂದಲೇ ಮೂವತ್ತರ ದಶಕದಲ್ಲೇ ರೈತ ಸಂಘಟನೆಯ ವಿರುದ್ಧ ಜಾತಿವಾದಿ, ವಿಚ್ಛಿದ್ರಕಾರಿ ಶಕ್ತಿಗಳನ್ನು ಹರಿಯಬಿಟ್ಟಿದ್ದರು. 1929 ರಲ್ಲಿ ಕಿಸಾನ್ ಸಭಾ ಆರಂಭವಾದಾಗ ಬ್ರಿಟಿಷರು ಕರ್ಮಿಗಳು, ಯಾದವರು ಹೀಗೆ ಜಾತಿವಾರು ಸಂಘಗಳನ್ನು ಪ್ರೋತ್ಸಾಹಿಸಿ ಅವರು ಕಿಸಾನ್ ಸಭಾದಿಂದ ದೂರವಿರುವಂತೆ ಮಾಡಿದರು. ಇನ್ನೊಂದೆಡೆ ಕಾಂಗ್ರೆಸ್ ಒಂದು ಪ್ರತ್ಯೇಕ ಖೇತ್ ಮಜ್ದೂರ್ ಯೂನಿಯನ್ ಕಟ್ಟಿ ಹರಿಜನರನ್ನು ದೂರ ವಿಡಲು ಪ್ರಯತ್ನಿಸಿದರು. ಸ್ವಾಮಿ ಸಹಜಾ ನಂದರ ನೇತೃತ್ವದಲ್ಲಿ ಕಿಸಾನ್ ಸಭಾದ ಜಮೀನ್ದಾರಿ-ವಿರೋಧಿ ಹೋರಾಟವನ್ನು ದುರ್ಬಲಗೊಳಿಸುವುದೇ ಇವೆಲ್ಲದರ ಉದ್ದೇಶ ವಾಗಿತ್ತು ಎಂದು ಸುನೀತ್ ಚೋಪ್ರಾ ಹೇಳಿದರು.

ಸ್ವಾತಂತ್ರ್ಯದ ನಂತರವೂ ಈ ಪ್ರವೃತ್ತಿ ಮುಂದುವರೆಯಿತು. ಆಗ ಇದು ಸೋಶಲಿಸ್ಟರ ಮೂಲಕ ನಡೆಯಿತು. ಈಗ ಬಲಪಂಥೀಯ ಸೇನೆಗಳ ಹಾವಳಿಯಾಗಿ ಪರಿಣಮಿಸಿದೆ. ಇನ್ನೊಂದೆಡೆ ನಕ್ಸಲೀಯರೆಂಬ ಹೆಸರಲ್ಲಿ ಇನ್ನು ಕೆಲವರು ವಾಸ್ತವವಾಗಿ ವಿಭಜನೆಯನ್ನು ಬಲಪಡಿಸುತ್ತಿದ್ದಾರೆ. ಈ ಮೂಲಕ ಪ್ರಗತಿಪರ ಆಂದೋಲನ ಈ ಪ್ರದೇಶದಲ್ಲಿ ವಿಕಾಸಗೊಳ್ಳದಂತೆ ಮಾಡುತ್ತಿದ್ದಾರೆ ಎಂದ ಸುನೀತ್ ಚೋಪ್ರಾ ಸಾಮೂಹಿಕ ಹತ್ಯೆಗಳನ್ನು ಜಾತಿ ಸಮರ ಎಂದು ಜಾತಿವಾದಿ ರಾಜಕಾರಣ ಚಿತ್ರಿಸುತ್ತಿದೆ ಎಂದು ದೂಷಿಸಿದರು. ಸುನೀತ್ ಚೋಪ್ರಾ, ಅಧ್ಯಯನ ಮಾಡಿದ 35 ಹತ್ಯಾಕಾಂಡಗಳಲ್ಲಿ 35 ವಿವಿಧ ಜಾತಿಗಳಿಗೆ ಸೇರಿದ ಭೂಮಾಲಕರಿಂದ ನಡೆದವು. 7 ಸಂದರ್ಭಗಳಲ್ಲಿ ರೈತರು ಕೃಷಿಕೂಲಿಕಾರರು ಅಥವಾ ಭೂಮಾಲಕರ ಮೇಲೆ ನಡೆದ ಧಾಳಿಗಳು. ಕೇವಲ 8 ಮಾತ್ರವೇ ಬಡಜನ ಪ್ರತೀಕಾರವಾಗಿ ಮಾಡಿದ ಧಾಳಿಗಳು. ಇಂತಹ ಕೊಲೆ ರಾಜಕೀಯಕ್ಕೆ ತೀವ್ರಗಾಮಿ ಭೂ ಸುಧಾರಣೆಯ ಆಧಾರದಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ಒತ್ತು ನೀಡದಿರುವುದೇ ಕಾರಣ ಎಂದರು ಸುನೀತ್ ಚೋಪ್ರಾ.

ಇದಕ್ಕೆ ಪರಿಹಾರವೇನು? ಈ ಪ್ರದೇಶದಲ್ಲಿ ಜಾತೀವಾದಿ ಹಿಂಸಾಚಾರಗಳಿಗೆ ಕಾರಣರಾದವರನ್ನೆಲ್ಲಾ ಮೂಲೆಗೊತ್ತುವ ಒಂದು ಸಕಾರಾತ್ಮಕ ಆಂದೋಲನ ಬೆಳೆಯಬೇಕು. ಇದು ಭೂ ಸುಧಾರಣೆಯ ತಳಹದಿಯ ಮೇಲೆ ನಡೆಯಬೇಕು. ಕೈಗಾರಿಕೆಗಳ ಬೆಳವಣಿಗೆಯಿಂದ ಉದ್ಯೋಗಾವಕಾಶ, ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿ ಹಾಗೂ ಭೂಮಾಲಕರ ಕಾಸಿಗೆ ಕೈಚಾಚುವ, ಸರ್ಕಾರಿ ಹಣವನ್ನು ಹೀರಿ ಕುಡಿಯುವ ಕ್ರಿಮಿನಲ್‌ಗಳನ್ನು ಸೋಲಿಸುವುದು - ಇದೇ ಪರಿಹಾರ ಎಂದ ಸುನೀತ್ ಚೋಪ್ರಾ ಇದಕ್ಕೆ ಈಗ ಸಕಾಲವೊದಗಿ ಬಂದಿದೆ, ಏಕೆಂದರೆ ಕೋಮುವಾದಿ ರಾಜ್ಯಪಾಲರನ್ನು ಹೊರಗೆಸೆಯಲಾಗಿದೆ, ಕೋಮುವಾದಿ ಶಕ್ತಿಗಳ ನೇತೃತ್ವದ ಕೇಂದ್ರಸರ್ಕಾರ ಸೋತಿದೆ, ಎಲ್ಲಾ ಪ್ರಗತಿಪರ ಶಕ್ತಿಗಳು ಒಟ್ಟು ಸೇರಿ ಮಧ್ಯ ಬಿಹಾರದ ಜನತೆ ಹಾತೊರೆಯುತ್ತಿರುವ ಶಾಂತಿ, ಸಮೃದ್ಧಿ ಒದಗಿಸಲು ಜಾತೀವಾದಿ ಸಂಘಟನೆಗಳು ಹೇರಿದ ಭಯೋತ್ಪಾದಕತೆಯನ್ನು ಕೊನೆಗೊಳಿಸಲು ಒಂದು ಸಕಾರಾತ್ಮಕ ಕಾರ್ಯಕ್ರಮ ಮುಂದಿಡಬೇಕು ಎಂದು ಸುನೀತ್ ಚೋಪ್ರಾ ಈ ವಿಚಾರಸಂಕಿರಣದಲ್ಲಿ ಮಂಡಿಸಿದರು. ಜಾತೀವಾದಿ ಸೇನೆಗಳಾಗಲಿ, ನಕ್ಸಲೀಯರಾಗಲಿ ತಾವು ಪ್ರತಿನಿಧಿಸುತ್ತಿರುವ ಜನಗಳನ್ನು ರಕ್ಷಿಸಲಾಗಿಲ್ಲ. ಕೇವಲ ಕಾರ್ಮಿಕ-ರೈತರ ಐಕ್ಯತೆಯ ಆಧಾರದ ಭೂ ಹೋರಾಟ ಮತ್ತು ಅಭಿವೃದ್ಧಿಯ ಕಾರ್ಯಕ್ರಮದಿಂದಷ್ಟೇ ಇದು ಸಾಧ್ಯ ಎಂದು ಅವರು ಹೇಳಿದರು.

ಖಾಲ್ಸಾ ತ್ರಿಶತಮಾನೋತ್ಸವ...



ಪುಟ 6 ರಿಂದ

ಬೆಳೆಸಿತ್ತು. ಸಾಮಾನ್ಯವಾಗಿ ಯಾವುದೇ ಚಳುವಳಿ ಮೂರು ಹಂತಗಳ ಮೂಲಕ ಹಾದುಹೋಗುತ್ತದೆ. 1. ಆರಂಭದಲ್ಲಿ ಆ ಚಳುವಳಿಯ ತತ್ವಗಳ ಶಾಂತಿಯುತ ಪ್ರಚಾರ 2. ಅದರ ಅನುಯಾಯಿಗಳ ಸಂಘಟನೆ 3. ಹೋರಾಟದ ಘಟ್ಟ. ಸಿಖ್ ಆಂದೋಲನ ಈ ಸಶಸ್ತ್ರ ಹೋರಾಟದ ಹಂತ ತಲುಪಿತ್ತು. ಈ ಹಿನ್ನೆಲೆಯಲ್ಲಿಯೇ ಹತ್ತನೇ ಹಾಗೂ ಕೊನೆಯ ಸಿಖ್ ಗುರು ಗುರುಗೋವಿಂದ್ ಸಿಂಗ್ 'ಖಾಲ್ಸಾ' ಪಂಥವನ್ನು ಆರಂಭಿಸಿದ್ದು.

ಆದರೆ ಗುರು ಗೋವಿಂದ್ ಸಿಂಗ್‌ರ ಕೊಡುಗೆ ಇಷ್ಟು ಮಾತ್ರವೇ ಅಲ್ಲ, ಅಲ್ಲದೆ ಅವರ ಸಶಸ್ತ್ರ ಹೋರಾಟ ಯಾವುದೇ ಒಂದು ಧರ್ಮ, ಪಂಥದ ವಿರುದ್ಧವಾಗಿರಲಿಲ್ಲ. ತನ್ನ ಹಿಂದಿನ ಗುರುಗಳ ಬೋಧನೆಗಳಂತೆ ಅವರ ಬೋಧನೆಗಳೂ ಇಡೀ ಮಾನವ ಕುಲಕ್ಕಾಗಿ ಇದ್ದವು. ಆದ್ದರಿಂದಲೇ ಅವರು ಮೊಗಲ್ ಸಾಮ್ರಾಜ್ಯದ ವಿರುದ್ಧ ಸಮರ ನಡೆಸಿದರೂ, ಅವರು ಸ್ಥಾಪಿಸಿದ ಸೇನೆಯಲ್ಲಿ ಮುಸ್ಲಿಮರೂ, ಹಿಂದುಗಳೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಘನೀ ಸಾಬ್, ನಬೀಖಾನ್, ರಾಯ್ ಕಲ್ಲಾ, ಪೀರ್ ಬುಧು ಶಾಹ, ದೀವಾನ್ ತೋಡರ ಮಲ್, ಮೋತಿ ಮೆಹ್ರಾ ಅವರ ಪ್ರಮುಖ ಶಿಷ್ಯರು.

ಪ್ರಜಾಸತ್ತಾತ್ಮಕ ಆಶಯ

ಮೇಲೆ ಹೇಳಿದಂತೆ ಸಿಖ್ ಧರ್ಮಕ್ಕೆ ಗುರು ಗೋವಿಂದ್ ಸಿಂಗರ ಕೊಡುಗೆಯಾದ 'ಖಾಲ್ಸಾ' ಕೇವಲ ಸಶಸ್ತ್ರ ವಿಭಾಗ ಮಾತ್ರವೇ ಅಲ್ಲ. ಇದನ್ನು ಅವರು ಸಿಖ್ ಧರ್ಮದ ಜನ-ಪರ ಹಾಗೂ ಪ್ರಜಾಪ್ರಭುತ್ವ ನೀತಿಗಳಿಗೆ ಒಂದು ಸ್ಪಷ್ಟ ರೂಪ ನೀಡಲು ಬಳಸಿದರು. 'ಗುರು' ಸ್ಥಾನ ಮಾನವನ್ನು ಸುಲಭವಾಗಿ ದುರುಪಯೋಗಪಡಿಸಿಕೊಳ್ಳ ಬಹುದೆಂದು ಕಂಡರಿಸಿದ ಅವರು ಈ ಪದ್ಧತಿಯನ್ನು ನಿಲ್ಲಿಸಿ ಸಿಖ್ ಅನುಯಾಯಿಗಳು ಆರಿಸಿದ 'ಪಂಚ್ ಪ್ಯಾರಾ' ರವರಿದ್ದ ಈ 'ಖಾಲ್ಸಾ' ಕ್ಕೆ ಸರ್ವೋಚ್ಚ ಸ್ಥಾನಮಾನವನ್ನು ನೀಡಿದರು.

ಸಿಖ್ ಧರ್ಮ ಇತರ ಎಲ್ಲಾ ಧರ್ಮಗಳಿಗೆ ಹೋಲಿಸಿದರೆ ಪ್ರಗತಿ ಪರ ಹಾಗೂ ಪ್ರಜಾಸತ್ತಾತ್ಮಕ ಆಶಯಗಳನ್ನು ಹೊಂದಿರುವ ಧರ್ಮ. ಆರಂಭದಲ್ಲಿ ಅದು ಹೊಸದಾಗಿ ಮೂಡಿ ಬರುತ್ತಿದ್ದ ವ್ಯಾಪಾರೀ ಸಮುದಾಯದ ಆಶಯಗಳನ್ನು ಬಿಂಬಿಸುತ್ತಾ ಜಾತಿ ಪದ್ಧತಿಯ ವಿರುದ್ಧ ಹೋರಾಟವನ್ನು ಎತ್ತಿಕೊಂಡಿತು. ಆಧುನಿಕ ಕಾಲದಲ್ಲಿ ಕೂಡಾ ಸಿಖ್ಖರ ಯಾವುದೇ ಸಂಘಟನೆ - ಬ್ರಿಟಿಶರ ವಿರುದ್ಧ ಬಂಡಾಯ ನಡೆಸಿದ ಗದ್ರೀ ಬಾಬಾಗಳಾಗಲಿ, ಬಬ್ಬರ್ ಅಕಾಲಿಗಳಾಗಲೀ ಅಥವಾ ಗುರುದ್ವಾರ (ಸಿಖ್‌ರ ಪೂಜಾ ಸ್ಥಳ)ಗಳನ್ನು ಸುಧಾರಿಸುವ ಆಂದೋಲನದಿಂದ ಮೂಡಿಬಂದ ಅಕಾಲಿ ಆಂದೋಲನವಾಗಲಿ - ದೇಶದ ಸ್ವಾತಂತ್ರ್ಯ ಚಳುವಳಿಗೆ ನೀಡಿದ ಕೊಡುಗೆ ಅಪಾರ - ಸಿಖ್ ಧರ್ಮದ ಪ್ರಜಾಸತ್ತಾತ್ಮಕವಾದ ಜನ-ಪರ ಕಾಳಜಿಯ ಅಂಶಗಳಿಂದಾಗಿ ಇವರಲ್ಲಿ ಹಲವಾರು ಮಂದಿ ಕಮ್ಯುನಿಸ್ಟ್ ಆಂದೋಲನದತ್ತವೂ ಆಕರ್ಷಿತ ರಾದರು. ಸಿಖ್ ಧರ್ಮದ ಇಡೀ ವಿಚಾರ ಧಾರೆಯೇ ದಮನ- ದಬ್ಬಾಳಿಕೆಯ ವಿರುದ್ಧ ಹೋರಾಟದ ಇತಿಹಾಸ ಹೊಂದಿರುವ ವಿಚಾರಧಾರೆ! ಜನಗಳನ್ನು ಧರ್ಮದ ಹೆಸರಿನಲ್ಲಿ ವಿಭಜಿಸುವುದನ್ನು ಅದು ಸದಾ ವಿರೋಧಿಸಿಕೊಂಡು ಬಂದಿತು. ಆದರೆ ಈಗ ಅದಕ್ಕೆ ಮೂಲಭೂತ ವಾದದ, ಒಂದು ಗೊಡ್ಡು ಧರ್ಮದ ಬಣ್ಣ ಕೊಡುವ ಪ್ರಯತ್ನ ನಡೆದಿದೆ. ಇದು ಸಿಖ್ ಗುರುಗಳ ಬೋಧನೆಗೆ ತದ್ವಿರುದ್ಧವಾದದ್ದು.

'ಖಾಲ್ಸಾ' ದ ಜನ್ಮದ ತ್ರಿಶತಮಾನೋತ್ಸವ ನಿಜವಾಗಿಯೂ ಪ್ರಯೋಜನಕಾರಿಯಾಗ ಬೇಕಾದರೆ ಅದು ತನ್ನ ಇತಿಹಾಸದಿಂದ ದಾರಿ ತಪ್ಪದೆ ದಮನ, ಶೋಷಣೆ, ಅನ್ಯಾಯ ಹಾಗೂ ಅಸಮಾನತೆಯ ವಿರುದ್ಧ ಹೋರಾಟವನ್ನು ಮುಂದುವರಿಸಬೇಕು.

ಅಂಬೇಡ್ಕರ್...............

ಪುಟ 8 ರಿಂದ

ಮೂಲಕ ಪಡೆಯಬಹುದಾದ ಅಂತಿಮ ವಿಜಯದಿಂದ, ಅತ್ಯುತ್ಕೃಷ್ಟ ಯಶಸ್ಸಿನಿಂದ ವಂಚಿತರನ್ನಾಗಿಸಿತು. ಅವರ ಕೊನೆಯದಿನಗಳಲ್ಲಿ ತಮ್ಮ ಹೋರಾಟ ಫಲ ನೀಡುತ್ತಿಲ್ಲವೆಂಬ ಯಾತನೆ ಅವರನ್ನು ಬಳಲಿಸಿತು.

ಅಂಬೇಡ್ಕರ್ ರವರ ಹುಟ್ಟು ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ, ಅಂಬೇಡ್ಕರ್‌ರವರ ಚಿಂತನೆ ಬರಹಗಳನ್ನು ಮನನ ಮಾಡುವ, ಅವರ ಹೋರಾಟದ ಹಾದಿಯನ್ನು ಅದರ ಸಂದಿಗ್ಧಗಳನ್ನು ವಿವೇಚಿಸುವ ಕೆಲಸ ಆಗಬೇಕಾಗಿದೆ. ಅವರನ್ನು ಕಾಡಿದ ಪ್ರಶ್ನೆಗಳು, ಅವರ ತಾಕಲಾಟಗಳನ್ನು ಕೈಗೆತ್ತಿಕೊಂಡು, ಅವರ ನಂತರದ ಭಾರತದ ಅನುಭವವನ್ನು ಗಮನದಲ್ಲಿಟ್ಟುಕೊಂಡು ಇಂದಿನ ವಾಸ್ತವಕ್ಕೆ ಅನುಗುಣವಾದ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಕರ್ನಾಟಕದ ಪ್ರಸಿದ್ಧ ವಾರಪತ್ರಿಕೆಯೊಂದರಲ್ಲಿ ಕೆಲವು ಪ್ರಸಿದ್ಧ ನಾಯಕರು 'ಬೌದ್ಧ ಧರ್ಮವೇ ದಿಕ್ಕು' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಂದಿನ ದಲಿತ ಜನಸಮುದಾಯಕ್ಕೆ ಅದೇ ದಾರಿಯೇ? ಕೊನೆಗೆ ನಮ್ಮ ನಡುವಿನ ಪ್ರಸಿದ್ಧ ಇತಿಹಾಸಜ್ಞ ಡಾ. ಎಸ್.ಚಂದ್ರಶೇಖರ್‌ರವರ ಮಾತುಗಳನ್ನು ಉಲ್ಲೇಖಿಸುವುದು ಸೂಕ್ತ:

"ಕೃಷಿ ಕೂಲಿಗಳನ್ನು, ಸಣ್ಣ ರೈತರನ್ನು, ಕಾರ್ಮಿಕರನ್ನು, ಅಸ್ಪೃಶ್ಯರನ್ನು ಮಹಿಳೆಯರನ್ನು ಸಂಘಟಿಸಿ, ಕೋಟ್, ಮಹರ್, ವತನ್ ಪದ್ಧತಿಗಳ ರದ್ಧತಿಗಾಗಿ ಹೋರಾಟ ಮಾಡಿದ,'ಮಹಾಡ್, ನಾಸಿಕ್ ಸತ್ಯಾಗ್ರಹಗಳನ್ನು ನಡೆಸಿದ, ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲಿರಬೇಕೆಂದು ಪ್ರತಿಪಾದಿಸಿದ ಅಂಬೇಡ್ಕರ್ ನಮಗೆ ಹೆಚ್ಚು ಪ್ರಸ್ತುತರಾಗುತ್ತಾರೆ. ಆದರೆ ಬೌದ್ಧಧರ್ಮವನ್ನು ಆದರ್ಶೀಕರಿಸಿ, ಅದು ಮಾರ್ಕ್ಸ್‌ವಾದಕ್ಕೆ ಪರ್ಯಾಯವಾಗುತ್ತದೆ ಎನ್ನುವ ಅವರ ವಾದ ಅಚಾರಿತ್ರಿಕವಾಗುತ್ತದೆ. ಮತಾಂತರದಿಂದ ಜಾತಿ ಕ್ರೌರ್ಯದ ಸಮಸ್ಯೆಗೆ ಪರಿಹಾರ ಸಿಗುತ್ತದೆನ್ನುವ ಅವರ ವಾದ ಗಾಂಧೀಜಿಯವರ ಹೃದಯ ಪರಿವರ್ತನೆ, ಟ್ರಸ್ಟೀಶಿಪ್ ಪರಿಕಲ್ಪನೆಗಳಷ್ಟೇ ಅಸಂಗತವಾದದ್ದು. ಈ ಎರಡೂ ಬಗೆಯ ಪರಿಕಲ್ಪನೆ, ಕ್ರಿಯೆಗಳೂ ಹಲವಾರು ದಶಕಗಳಿಂದಲೂ ನಮ್ಮ ಮುಂದಿವೆ. ಮತಾಂತರದಿಂದಾಗಲೀ ಟ್ರಸ್ಟೀಶಿಪ್‌ನಿಂದಾಗಲಿ ಯಾವ ಸಮಸ್ಯೆಗಳೂ ಪರಿಹಾರವಾಗಿಲ್ಲ"

ಇತಿಹಾಸದ ಕಾವೀಕರಣ...............

ಪುಟ 6 ರಿಂದ

ಉದ್ಗಾರಗಳೇಕೆ? ನಮ್ಮ ವಿದ್ಯಾರ್ಥಿಗಳಿಗೆ ಬಿಡಿ, ಈ ಲೇಖಕರಿಗೇ ನಿಜವಾಗಿ ಇತಿಹಾಸ ತಿಳಿದಿದೆಯೇ? ತಿಳಿದಿದ್ದರೆ ಅದನ್ನು ಹೀಗೆ ತಿರುಚುವ ಪ್ರಯತ್ನ ಏಕೆ? ಇದು ಇತಿಹಾಸದ ವಿದ್ಯಾರ್ಥಿಗಳಲ್ಲಿ ಏಳುವ ಸಹಜ ಪ್ರಶ್ನೆ.

★★★

ಗುರುನಾನಕರ ಬೋಧನೆಗಳು 13ನೇ ಶತಮಾನದಿಂದ ಆರಂಭವಾಗಿ ಉತ್ತರ ಭಾರತದಲ್ಲಿ ವ್ಯಾಪಿಸಿದ 'ಭಕ್ತಿ ಆಂದೋಲನ'ದ ವಿಚಾರಗಳ ಸಾರ ಸಂಗ್ರಹ ಎಂದು ನಿಜವಾದ ಇತಿಹಾಸ ತಿಳಿದವರಿಗೆಲ್ಲಾ ಗೊತ್ತಿರುವ ವಿಚಾರ. ಈ ಭಕ್ತಿ ಆಂದೋಲನ ವಾಯುವ್ಯ ಗಡಿಯಲ್ಲಿರುವ ಪಂಜಾಬಿನಲ್ಲಿ ಮಾತ್ರವಲ್ಲ ಇಡೀ ಉತ್ತರ ಭಾರತದಲ್ಲಿ ಹರಡಿತ್ತು. ಪೂರ್ವ ಭಾರತದವರೆಗೂ ವಿಸ್ತರಿಸಿತ್ತು. ದಕ್ಷಿಣದಲ್ಲಿ ಕರ್ನಾಟಕದಲ್ಲಿ ಇದಕ್ಕೂ ಮೊದಲೇ ವ್ಯಾಪಕವಾಗಿ ನಡೆದಿತ್ತು. ಇದು ಮುಖ್ಯವಾಗಿ ಮೂಡಿ ಬಂದದ್ದು ಸನಾತನ ಹಿಂದೂ ಧರ್ಮ ಅಂದರೆ ಬ್ರಾಹ್ಮಣ ಧರ್ಮದ ದಮನ - ದಬ್ಬಾಳಿಕೆಯ ವಿರುದ್ಧ, ಜಾತೀಯತೆ, ಅಸ್ಪೃಶ್ಯತೆಯ ಮೌಲ್ಯಗಳ ವಿರುದ್ಧ ಹಾಗೂ ಕರ್ಮಕಾಂಡದ ವಿರುದ್ಧ, ಇವಕ್ಕೆಲ್ಲಾ ಆಶ್ರಯ ನೀಡಿದ್ದ ಪಾಳೆಯಗಾರೀ ಪ್ರಭುತ್ವಗಳ ವಿರುದ್ಧ. ಆದ್ದರಿಂದಲೇ ಗುರುಗೋವಿಂದ ಸಿಂಗ್ ಆರಂಭಿಸಿದ ಸಶಸ್ತ್ರ ಹೋರಾಟದಲ್ಲಿ ಸಿಖ್ಖರೊಂದಿಗೆ, ಮುಸ್ಲಿಮರೂ ಭಾಗವಹಿಸಿದರು, ಹಿಂದೂಗಳೂ ಭಾಗವಹಿಸಿದರು. ಇದು ಐತಿಹಾಸಿಕ ಸತ್ಯ. ಆದರೂ 'ತರಂಗ' ದ ಲೇಖಕರು ಆರ್ಯಸಮಾಜ, ಪ್ರಾರ್ಥನಾ ಸಮಾಜಗಳಂತೆ ಸಿಖ್ ಧರ್ಮವೂ ಸನಾತನ ಹಿಂದೂ ಧರ್ಮದ 'ಅಶ್ವತ್ಥ ವೃಕ್ಷ'ದ ಒಂದು ಟಿಸಿಲು ಎಂದು ಬಿಂಬಿಸಲು ಪ್ರಯತ್ನಿಸಿದ್ದಾರೆ. ಇದನ್ನೇ ಇತಿಹಾಸದ ತಿರುಚುವಿಕೆ ಎನ್ನುವದು, ಕಾವೀಕರಣ ಎನ್ನುವುದು. ಇದನ್ನು ನಿಜವಾದ ಇತಿಹಾಸಕಾರರು ಒಪ್ಪುವುದಿಲ್ಲ ಎಂಬುದೇ ಈ ಕಾವಿಮಂದಿಯ ಅಳಲು. ಇವರ ಗುರುಗಳಾದ ಅಡ್ವಾಣಿಯವರು ಒಂದು ಅಂತರ್‍ರಾಷ್ಟ್ರೀಯ ಬೌದ್ಧ ಸಮ್ಮೇಳನದಲ್ಲಿ 'ಬೌದ್ಧ ಧರ್ಮ ಸನಾತನ ಹಿಂದೂ ಧರ್ಮದ ಒಂದು ಪಂಥ' ಎಂದು ಹೇಳಿ ಇತಿಹಾಸಕಾರರಿಂದ ಛೀಮಾರಿ ಹಾಕಿಸಿಕೊಂಡಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

★★★

ತಮ್ಮ ನಿಲುವುಗಳನ್ನು, ವಿಚಾರಗಳನ್ನು ಸಮರ್ಥಿಸಿಕೊಳ್ಳಲಾಗದಿದ್ದಾಗ, ಅದನ್ನು ಪ್ರಬಲವಾಗಿ ವಿರೋಧಿಸುವವರ ವಾದಗಳು ಕೂಡಾ ತಮ್ಮದೇ ವಾದಗಳು ಎಂದು ಹೇಳುತ್ತಾ ಒಂದೆರಡು ಕಡೆ ರಾಜಿ ಮಾಡಿಕೊಂಡು ವಿರೋಧಿಗಳನ್ನು ತಮ್ಮೊಳಗೇ ಸೇರಿಸಿಕೊಳ್ಳಲು ಪ್ರಯತ್ನಿಸಿ ತಮ್ಮ ಸೈದ್ಧಾಂತಿಕ ಪ್ರಾಬಲ್ಯವನ್ನು ಮುಂದುವರೆಸುವುದು - ಇದು ಸನಾತನವಾದಿಗಳು ನಡೆಸಿಕೊಂಡು ಬಂದಿರುವ ಕುತಂತ್ರ. ಇಪ್ಪತ್ತನೇ ಶತಮಾನದ ಅಂತ್ಯದಲ್ಲೂ ಅದೇ ಕುತಂತ್ರ ಮುಂದುವರೆದಂತಿದೆ.

★★★

ಖಾಲ್ಸಾ ಪಂಥದ ತ್ರಿಶತಮಾನೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಸಿಖ್ಖರಲ್ಲಿ ಈಗ ಇರುವ ಮತ-ಬೇಧ ಸ್ಪಷ್ಟವಾಗಿ ಎದ್ದು ಕಂಡಿತು. ಅದು ಸಹಜವೇ. ಸರಕಾರೀ ಬೆಂಬಲದೊಂದಿಗೆ 400 ಕೋಟಿ ರೂ. ಖರ್ಚು ಮಾಡಿ (ಇದರಲ್ಲಿ ಗಮನಾರ್ಹ ಭಾಗ ಆಳುವ ಮಂದಿಯ ಜೇಬಿಗಿಳಿಯಿತು ಎಂಬ ಗುರುತರ ಆಪಾದನೆಯೂ ಇದೆ - ಯಥಾಪ್ರಕಾರ)ನಡೆಸಿದ ಅಧಿಕೃತ ಸಮಾರಂಭದಲ್ಲಿ ಜಾತಿ-ಬೇಧ, ಕರ್ಮಕಾಂಡಗಳ ವಿರುದ್ಧ ಹೋರಾಡಿದ ಜನಗಳನ್ನು ಧರ್ಮದ ಹೆಸರಲ್ಲಿ ವಿಭಜಿಸುವುದರ ವಿರುದ್ಧ ಹೋರಾಡಿದ ಸಿಖ್ ಧರ್ಮಾನುಯಾಯಿಗಳೊಂದಿಗೆ, ಈ ಹಳಸಲು ಮೌಲ್ಯಗಳನ್ನು 'ಹಿಂದುತ್ವ'ದ ಹೆಸರಲ್ಲಿ ಎತ್ತಿ ಹಿಡಿಯುವ ಆರ್.ಎಸ್.ಎಸ್.ನ ಸ್ವಯಂಸೇವಕರೂ ಭಾರೀ ಸಂಖ್ಯೆಯಲ್ಲಿ 'ಶಿಸ್ತಿ'ನಿಂದ ಭಾಗವಹಿಸಿದ್ದರು. ಇದನ್ನು ನೋಡಿದಾಗ ಹಲವರಿಗೆ 'ನಾವು ಇತಿಹಾಸದಿಂದ ಪಾಠ ಕಲಿಯಲೇ ಇಲ್ಲ' ಎಂದನಿಸಿತು.

★★★

'ತರಂಗ'ಕ್ಕೂ ಹೀಗನಿಸಿದಯಂತೆ! ಆದರೆ ಮೇಲೆ ಹೇಳಿದ ಕಾರಣಕ್ಕಾಗಿಯಲ್ಲ ಅದಕ್ಕೆ ಸಂಪೂರ್ಣವಾಗಿ ವಿರುದ್ಧವಾದ ಕಾರಣಕ್ಕಾಗಿ! ಆದ್ದೂರಿಯ, ಆದರೆ 'ಖಾಲ್ಸಾ'ದ ಒಳ ಸತ್ವವನ್ನು ಮೂಲೆಗೊತ್ತಿದ ಅಧಿಕೃತ ಸಮಾರಂಭಕ್ಕೆ ಪ್ರತಿಯಾಗಿ ಇನ್ನೂ ಹಲವು ಸಮಾರಂಭಗಳು ಪಂಜಾಬಿನಲ್ಲಿ ನಡೆದವು. ಅವುಗಳಲ್ಲೊಂದು ಅಕಾಲಿ ದಳದ ಇನ್ನೊಂದು ಬಣ ಏರ್ಪಡಿಸಿದ್ದ ಸಮಾರಂಭ. ಇದರಲ್ಲಿ ಕಾಂಶಿರಾಮ್, ಲಾಲೂ ಪ್ರಸಾದ್ ಯಾದವ್, ಮಾಜಿ ಪ್ರಧಾನಿ ಚಂದ್ರಶೇಖರ್ ಮಾತ್ರವಲ್ಲ ವಾಜಪೇಯಿ ಸಂಪುಟದ ಮಂತ್ರಿ ಸುರ್ಜಿತ್ ಸಿಂಗ್ ಬರ್ನಾಲರೂ ಭಾಗವಹಿಸಿದ್ದರು. ವಾಜಪೇಯಿ ಸರಕಾರವನ್ನು ಬೆಂಬಲಿಸುತ್ತಿದ್ದ ಅಕಾಲಿದಳದ ಸಂಸತ್ ಸದಸ್ಯರೇ ಇದನ್ನು ನಿರ್ವಹಿಸಿಕೊಟ್ಟರು. ಜನಗಳೂ ಈ ಸಮಾರಂಭಧಲ್ಲಿ ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಇದನ್ನು ಕಂಡು 'ತರಂಗ'ಕ್ಕೆ ಭಾರೀ ಖೇದವಾಗಿದೆ.

★★★

ಈ ಖೇದ ಏಕೆ? ಸನಾತನ ಧರ್ಮದ ಕೆಟ್ಟ ಆಚರಣೆಗಳ ವಿರುದ್ಧ ಆರಂಭವಾದ ಸಿಖ್ ಧರ್ಮದಲ್ಲಿಯೂ ಒಡಕು ಬಂದಿದೆಯೆಂಬುದಕ್ಕೆ ಖಂಡಿತಾ ಅಲ್ಲ - ಇದು ಅವರು 'ಇತಿಹಾಸದಿಂದ ಪಾಠ ಕಲಿಯದ' ಬಗ್ಗೆ ಕೊಡುವ ಇನ್ನೊಂದು ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. "ಭಾರತವು ಸಂಕೀರ್ಣ ಸಮಸ್ಯೆಯಲ್ಲಿರುವಾಗಲೇ ಕೇಂದ್ರದ[illegible]ವ ಅಟಲ್ ಬಿಹಾರಿ ವಾಜಪೇಯಿ ಅವರ ಸರಕಾರಕ್ಕೆ ಕಿರುಕುಳದ ಮಾನಸಿಕ ಚಿತ್ರಹಿಂಸೆ ಕೊಡುತ್ತ ಪಿತೂರಿ ಮಾಡುತ್ತಿರುವ ಜಯಲಲಿತಾ ಮತ್ತು ಸೋನಿಯಗಾಂಧಿಯವರ ನಡೆ ನುಡಿ ಈ ದೇಶದ ಆತ್ಮಘಾತುಕ ಪ್ರವೃತ್ತಿಯನ್ನೇ ತೋರಿಸುತ್ತದೆ" ಎನ್ನುತ್ತಾ "ಹೀಗಿರುವಾಗ ಇತಿಹಾಸದಿಂದ ನಾವು ಪಾಠ ಕಲಿಯುವುದೆಂತು" ಎಂದು ಪ್ರಶ್ನಿಸುತ್ತಾರೆ ಈ ಲೇಖಕರು. ಇತಿಹಾಸವನ್ನು ಕಾಮಾಲೆ ಕಣ್ಣಿಂದ, ಅಲ್ಲ, ಅದಕ್ಕೂ ಭೀಕರವಾದ ಕಾವೀ ಕಣ್ಣಿಂದ ನೋಡುವ ಇಂತವರಿಗಂತೂ ಇದು ಸಾಧ್ಯವೇ ಇಲ್ಲ ಎಂದುತ್ತರಿಸಲೇಬೇಕಾಗುತ್ತದೆ.

.........ಇಂದು ಕೃಷಿ ಕಾರ್ಮಿಕ ಮುಖಂಡ

ಪುಟ 5 ರಿಂದ

ಗುಡಿಸಲುಗಳಿಗೆ ಬೆಂಕಿಯನ್ನೂ ಹಚ್ಚಿಸಿದ. ಬಾಳಪ್ಪ ಮತ್ತು ಇತರ ಸಂಗಾತಿಗಳು ಈ ಹೋರಾಟದಲ್ಲಿ ಒಂದು ತಿಂಗಳ ಜೈಲುವಾಸವನ್ನೂ ಅನುಭವಿಸಬೇಕಾಯಿತು. ಆದರೆ ಕೊನೆಗೂ ಜಮಿಂದಾರ ನಿರ್ವಾಹವಿಲ್ಲದೆ ರಾಜಿಗೆ ಬರಬೇಕಾಯಿತು. ಆತ ಒಬ್ಬ 'ಅಸ್ಪೃಶ್ಯ ಕೃಷಿಕೂಲಿಕಾರ' ನೊಂದಿಗೆ ಕೈಕುಲಕಬೇಕಾದ ಪ್ರಸಂಗ ಬಂತು.

ನಂತರದ ಪ್ರಮುಖ ಹೋರಾಟ ಬಾಬುರೆಡ್ಡಿ ಕ್ಯಾಂಪಿನದ್ದು. ಇಲ್ಲಿಯ ಚಂದ್ರಶೇಖರ್‌ರೆಡ್ಡಿ ಎಂಬ ರೈತನಿಗಾದ ಅನ್ಯಾಯವನ್ನು ಸರಿಪಡಿಸಲು ಕೃಷಿಕೂಲಿಕಾರ ಸಂಘ ಕೈಗೆತ್ತಿಕೊಂಡ ಹೋರಾಟ ತೀವ್ರ ಸ್ವರೂಪ ಪಡೆಯಿತು. ಆತನ ಹೊಲದಲ್ಲಿ ಎದುರಾಳಿಗಳು ಬಲವಂತದಿಂದ ವ್ಯವಸಾಯ ನಡೆಸಿದಾಗ ಅದನ್ನು ಎದುರಿಸಲು ಪೈರು ಕಟಾವು ಮಾಡಲು ಸಂಘ ನಿರ್ಧರಿಸಿತು. ಕಟಾವು ಆರಂಭವಾಯಿತು. ಆಗ ಟ್ರಾಕ್ಟರ್ ತುಂಬಾ ಬಂದ ಮಂದಿ ಭಾರೀ ದಾಳಿ ನಡೆಸಿದರು. ಬಾಳಪ್ಪ, ಅವರ ಅಣ್ಣ ಯಮುನಪ್ಪಾ, ಲಿಂಗಪ್ಪ, ಹುಲಿಗಪ್ಪಾ ಮುಂತಾದವರಿಗೆ ತೀವ್ರ ಗಾಯಗಳಾದವು. ಸುತ್ತಮುತ್ತಲು ಕೃಷಿಕೂಲಿಕಾರರ ಆಂದೋಲನದ ಪ್ರಮುಖ ಮುಖಂಡರಾಗಿ ಬೆಳೆಯುತ್ತಿದ್ದ ಬಾಳಪ್ಪನವರನ್ನು ಮುಗಿಸಲೆಂದೇ ಅವರು ಬಂದಂತಿತ್ತು. 'ಬಾಳಪ್ಪ ಸತ್ತೇ ಹೋದ' ಎಂದು ಅನಿಸಿದ ನಂತರವೇ ಈ ಹಲ್ಲೆಕೋರರು ಹಿಂದಿರುಗಿದ್ದು. ಆದರೆ ಅವರ ನಿರೀಕ್ಷೆ ಸುಳ್ಳಾಯಿತು. ತೀವ್ರ ಗಾಯಗೊಂಡಿದ್ದ ಬಾಳಪ್ಪ ಒಂದು ವಾರ ಆಸ್ಪತ್ರೆಯಲ್ಲಿ, ಆಮೇಲೆ ನಾಲ್ಕು ತಿಂಗಳು ಮನೆಯಲ್ಲಿ ಚಿಕಿತ್ಸೆಯ ನಂತರ ಮತ್ತೆ ಮೊದಲಿನಂತಾದರು. ಇಲ್ಲ, ದ್ವಿಗುಣ ಉತ್ಸಾಹದಿಂದ ಕೃಷಿಕೂಲಿಕಾರರ ಆಂದೋಲನದಲ್ಲಿ ತನ್ನನ್ನು ತೊಡಗಿಸಿಕೊಂಡರು.

ಒಬ್ಬ ಕೃಷಿಕೂಲಿಕಾರರ ಮುಖಂಡರಾಗಿ ಬೆಳೆದಿರುವ ಕಾಂ. ಬಾಳಪ್ಪನವರಿಗೆ ಅಸ್ಪೃಶ್ಯತೆಯ ಬಗ್ಗೆ ಈಗೇನನಿಸುತ್ತದೆ?

ಮೂವತ್ತು ವರ್ಷಗಳ ಹಿಂದೆ 'ಲೇ ಮಾದಿಗ ಸೂಳೆಮಗನೇ' ಎನ್ನುವಾಗ ಅನುಭವಿಸಿದ್ದ ನೋವಿಗಿಂತ ಎಷ್ಟೋ ಹೆಚ್ಚಿನ ನೋವು ಅವರನ್ನೀಗ ಕಾಡುತ್ತಿರುವಂತಿದೆ. ಕೃಷಿಕೂಲಿಕಾರರ ವಿವಿಧ ಹೋರಾಟಗಳಲ್ಲಿ ಕೇವಲ ದಲಿತರು ಮಾತ್ರವಲ್ಲ, ಇತರ ಜಾತಿಗಳ, ಮತಗಳ ಕೂಲಿಕಾರರನ್ನೂ ಒಳಗೊಂಡಿದ್ದು ಬಾಳಪ್ಪನವರನ್ನು ಯಾರೂ ಈಗ ಅಸ್ಪೃಶ್ಯನೆಂದು ಕಾಣುವ ಧೈರ್ಯ ಪಡುತ್ತಿಲ್ಲ. ಸವರ್ಣೀಯರೆನಿಸಿಕೊಂಡವರ ಮನೆಗಳಿಗೆ ಪ್ರವೇಶವಿದೆ, ಅವರ ಲೋಟ, ತಟ್ಟೆಗಳಲ್ಲಿ ಕಾಫಿ ತಿಂಡಿಯೂ ದೊರೆಯುತ್ತದೆ. ಆದರೂ ಏಕೆ ನೋವು? ಈ ನೋವು ಇಷ್ಟಕ್ಕೇ - ತನಗೆ ಮರ್ಯಾದೆ ಸಿಕ್ಕರೂ ತನ್ನ ಜತೆಗಿರುವ ದಲಿತರೊಂದಿಗೆ ಹಿಂದಿನದೇ 'ಅಸ್ಪೃಶ್ಯ' ವರ್ತನೆ. ತನಗೆ ಪ್ರವೇಶವಿದೆ - ತನ್ನ ಜತೆಗಾರರಿಗೆ ಪ್ರವೇಶವಿಲ್ಲ' ಈಗಲೂ ಹೀಗೇಕೆ? ಇದು ಅವರನ್ನು ಸಾಮು[illegible] ಆಂದೋಲನದ ಸಾಮಾಜಿಕ ಕರ್ತವ್ಯಗಳ ಬಗ್ಗೆ ಯೋಚಿಸುವಂತೆ ಮಾಡಿದೆ.

ತನ್ನಂತೆ ಎಲ್ಲಾ ದಲಿತರಿಗೂ, ಕೂಲಿಕಾರರಿಗೂ ನಿಜಸ್ಥಿತಿಯ ಅರಿವು ಮೂಡಿಸಿ ಹೋರಾಟದ ಮೂಲಕ ಅಸ್ಪೃಶ್ಯತೆ, ಶೋಷಣೆಯ ಸಂಕೋಲೆಯಿಂದ ಅವರು ಬಿಡುಗಡೆ ಹೊಂದುವಂತೆ ಮಾಡಬೇಕು ಎಂಬುದು ಬಾಳಪ್ಪನವರ ಜೀವನದ ಗುರಿ.

ನಿರಕ್ಷರಿಯಾದ ಬಾಳಪ್ಪ 'ಐಕ್ಯರಂಗ'ದ ನಿಯಮಿತ ಓದುಗ. ಬೇರೆಯವರಿಂದ ಓದಿಸಿ ತಿಳಿಯುತ್ತಾರೆ. ಈಗ ಅವರ ಮಕ್ಕಳೂ ಇದರಲ್ಲಿ ಸಹಾಯ ಮಾಡುತ್ತಾರೆ (ಅವರಿಗೆ ಇಬ್ಬರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಮೂವರು ಶಾಲೆಗೆ ಹೋಗುತ್ತಿದ್ದಾರೆ. ಇಬ್ಬರು ಸರ್ಕಾರಿ ಹಾಸ್ಟೆಲುಗಳಲ್ಲಿದ್ದು ಓದುತ್ತಿದ್ದಾರೆ). ಈಗ ಸಹಿ ಮಾಡಲು ಬರುತ್ತದೆ. ಓದು ಬೇಕೆ ಬೇಕು. ಆದರೆ ಸಹಿ ಮಾಡುವುದಕ್ಕಿಂತ ಹೆಚ್ಚು ಮುಂದೆ ಹೋಗಲು ಆಗಿಲ್ಲ ಎಂಬ ಬೇಸರ ಇದ್ದೇ ಇದೆ. ಹೋರಾಟಗಳ ನಡುವೆ, ಕೃಷಿ ಕೂಲಿಕಾರರ ಸಂಘದ ಚಟುವಟಿಕೆಗಳ ನಡುವೆ ಸಮಯವೇ ಸಿಗದು. ಆದರೂ 'ಐಕ್ಯರಂಗ' ವನ್ನು, ತನ್ನ ಬದುಕಿನ ಗುರಿ ಸಾಧನೆಗೆ ಸಹಾಯವಾಗುವ ಎಲ್ಲವನ್ನೂ ಹೇಗಾದರೂ ತಿಳಿದುಕೊಳ್ಳುವ ಹಂಬಲ ಬಲವಾಗಿದೆ.


ಸಂದರ್ಶನ: ಜಯರಾಂ-ವೇದರಾಜ್

"ಕೊಸೊವೊ ವಿಮೋಚನಾ ಸೇನೆ" ಯ ಬೆನ್ನಿಗಿರುವುದು ಮಾದಕ ವಸ್ತುಗಳ ವ್ಯಾಪಾರದ ಕಳ್ಳ ಡಾಲರ್ ಹಣ!

ಯುಗೋಸ್ಲಾವಿಯದ ಮೇಲೆ ಅಮೆರಿಕಾ ನೇತೃತ್ವದ ನಾಟೋ ಧಾಳಿ ಆರಂಭವಾಗಿ ಐದು ವಾರಗಳು ದಾಟಿ ಹೋಗಿವೆ. ಯುಗೋಸ್ಲಾವಿಯಾದ ರಾಜಧಾನಿ ಬೆಲ್‌ಗ್ರೇಡಿನ ಪ್ರಮುಖ ಸ್ಥಳಗಳ ಮೇಲೆಲ್ಲಾ ನಾಟೋ ವಿಮಾನ ಪಡೆಗಳು ಬಾಂಬು ಬೀಳಿಸಿ ಧ್ವಂಸ ಮಾಡಿವೆ. ಸೇತುವೆಗಳನ್ನು ಧ್ವಂಸ ಮಾಡಿವೆ. ಯುಗೋಸ್ಲಾವಿಯದ ಜನಗಳ ಬದುಕನ್ನು ನರಕ ಮಾಡುತ್ತಿವೆ. ಆದರೆ ನಾಟೋದ ಉದ್ದೇಶ ಈಡೇರಿಲ್ಲ. ಯಾರ ಹೆಸರಲ್ಲಿ ಅಂದರೆ ಯಾವ ಕೊಸೊವೊದ ಅಲ್ಬೇನಿಯನ್ನರ ಹೆಸರಲ್ಲಿ ನಾಟೋ ಧಾಳಿ ನಡೆಸಿದೆಯೋ, ಆ ಜನಗಳ ಮೇಲೂ ನಾಟೋ ಬಾಂಬುಗಳು ಬಿದ್ದಿವೆ. ಈ ನಡುವೆ ಯುಗೋಸ್ಲಾವಿಯ ಪಡೆಗಳು ಕೊಸೊವೊದಲ್ಲಿ ಭೀಷಣ ಕುಕೃತ್ಯಗಳನ್ನು ನಡೆಸಿವೆ, ನಾಟೋ ಪಡೆಗಳು ಇದರಿಂದ ಬಡ ಕೊಸೊವೊ ಜನಗಳನ್ನು ಉಳಿಸಲು ಹೋರಾಡುತ್ತಿರುವ ಕೊಸೊವೊ ವಿಮೋಚನಾ ಸೇನೆಗೆ ನೆರವು ನೀಡುವ ಮಾನವೀಯ ಕೆಲಸ ಮಾಡುತ್ತಿವೆ ಎಂಬ ಪ್ರಚಾರ ಹರಡಿಸಲಾಗಿದೆ. ಈ ಸುದ್ದಿಗಳನ್ನೆಲ್ಲಾ ನೀವು ಪತ್ರಿಕೆಗಳಲ್ಲಿ, ರೇಡಿಯೋ, ಟಿ.ವಿ.ಗಳಲ್ಲಿ ಕೇಳಿರಬಹುದು, ನೋಡಿರಬಹುದು. ಆದರೆ ನಾಟೋ ಪಡೆಗಳು ತಾವು ಬೆಂಬಲಿಸುತ್ತಿದ್ದೇವೆ ಎನ್ನುವ ಕೊಸೊವೊ ವಿಮೋಚನಾ ಸೇನೆ (ಕೆ.ಎಲ್.ಎ)ಗೂ, ಮಾದಕವಸ್ತುಗಳ ಕಳ್ಳ ಸಾಗಾಣಿಕೆದಾರರಿಗೂ, ದೊಡ್ಡ ಅಂತರ್‍ರಾಷ್ಟ್ರೀಯ ಕ್ರಿಮಿನಲ್ ಗುಂಪುಗಳಿಗೂ ನೇರ ಸಂಬಂಧವಿದೆ ಎಂಬುದನ್ನು ನೀವು ಕೇಳಿದ್ದೀರಾ? ಪಾಶ್ಚಿಮಾತ್ಯ ದೇಶಗಳು, ಅಲ್ಲಿನ ಸುದ್ದಿ ಮಾಧ್ಯಮಗಳು ಮರೆ ಮಾಡಿರುವ ನಿಜ ಸಂಗತಿಯಿದು.

ಕೊಸೊವೊ ಜನಗಳ ಹಕ್ಕುಗಳಿಗೆ ಹೋರಾಡುತ್ತಿದ್ದೇನೆನ್ನುವ ಕೆ.ಎಲ್.ಎ. ನ್ನು ವಾಸ್ತವವಾಗಿ ಹುಟ್ಟು ಹಾಕಿದ್ದೇ ಅಮೆರಿಕಾದ ಗುಪ್ತಚರ ಸಂಘಟನೆ ಸಿಐಎ ಹಾಗೂ ಜರ್ಮನ್ ಗುಪ್ತಚಾರ ಸಂಘಟನೆ ಬಿ.ಎನ್.ಡಿ. ಇದರ ಆರಂಭದ ಕೆಲಸ ಮಾಡಿದ್ದು ಇದೇ ಬಿ.ಎನ್.ಡಿ. 'ಕೊಸೊವೊ ವಿಮೋಚನಾ ಸೇನೆ' ಯವರು ಮೊದಲು ಜರ್ಮನ್ ಸಮವಸ್ತ್ರವನ್ನು, ಪೂರ್ವಜರ್ಮನಿಯ ಶಸ್ತ್ರಾಸ್ತ್ರಗಳನ್ನು ಬಳಸಿದರು. ಅವರಿಗೆ ಹಣಕಾಸು ಒದಗಿಸಿದ್ದು ಮಾದಕ ವಸ್ತುಗಳ ಕಳ್ಳಸಾಗಾಣಿಕೆಯಿಂದ ಸಂಗ್ರಹಿಸಿದ ಹಣದಿಂದ - ಹೀಗೆಂದು ಪ್ರೊ. ಮೈಕೆಲ್ ಚೊಸುಡೊವ್‌ಸ್ಕಿ ಹೇಳುತ್ತಾರೆ. ಇವರು ಕೆನಡಾದ ಒಟಾವಾ ವಿಶ್ವವಿದ್ಯಾಲಯದ ಪ್ರಖ್ಯಾತ ಪ್ರಾಧ್ಯಾಪಕರು. ಆರಂಭದಿಂದಲೂ ಐಎಂಎಫ್-ವಿಶ್ವಬ್ಯಾಂಕು ನೀತಿಗಳನ್ನು ಕಟುವಾಗಿ ಟೀಕಿಸುತ್ತಿರುವ ಬುದ್ಧಿಜೀವಿ ಇವರು. ಕೆ.ಎಲ್.ಎ. ದ ನಿಜ ಸ್ವರೂಪವನ್ನು ಹಾಗೂ ಯುಗೋಸ್ಲಾವಿಯವನ್ನು ಚಿಂದಿ-ಚಿಂದಿ ಮಾಡುವ ಪಾಶ್ಚಿಮಾತ್ಯ ದೇಶಗಳ ಪಿತೂರಿಯನ್ನು ತನ್ನ ಒಂದು ಲೇಖನದಲ್ಲಿ ಇವರು ಬಯಲಿಗೆಳೆದಿದ್ದಾರೆ.

ಈ ಕೆ.ಎಲ್.ಎ. ನೆರೆಯ ಅಲ್ಬೇನಿಯಾ, ಟರ್ಕಿ ಹಾಗೂ ಇಟಲಿಯ ದೊಡ್ಡ ಕ್ರಿಮಿನಲ್ ಗ್ಯಾಂಗ್‌ಗಳೊಂದಿಗೆ, ಹೆದರಿಸಿ-ಬೆದರಿಸಿ ದುಡ್ಡು ಮಾಡುವ ಮಾಫಿಯಗಳೊಂದಿಗೆ ಸುಮಾರು ಕಳೆದ ಹತ್ತು ವರ್ಷಗಳಿಂದ ನೇರ ಸಂಪರ್ಕ ಹೊಂದಿದೆ, ಇದರ ದಾಖಲೆಗಳು ಪಾಶ್ಚಿಮಾತ್ಯ ದೇಶಗಳ ಪೋಲೀಸ್ ಕಡತಗಳಲ್ಲಿ ಇವೆ. ಈ ದೇಶಗಳು ಗೊತ್ತಿದ್ದು ತಮಗೇನೂ ತಿಳಿಯದಂತೆ ನಟಿಸುತ್ತಿದ್ದಾರೆ ಎಂದು ಪ್ರೊ. ಚೊಸುಡೊವ್‌ಸ್ಕಿ ಹೇಳುತ್ತಾರೆ.



ಕೆ.ಎಲ್.ಎ. ಒಂದು ಭಯೋತ್ಪಾದಕ ಸಂಘಟನೆ ಎಂದು ಬೋಸ್ನಿಯಾದಲ್ಲಿನ ಅಮೆರಿಕಾದ ರಾಯಭಾರಿ ರಾಬರ್ಟ್ ಗೆಲ್ಬಾರ್ಡ್‌ರವರೇ ಸ್ವತಃ ಒಂದು ವರ್ಷದ ಹಿಂದೆ ಹೇಳಿದ್ದರೆ, ಇನ್ನೊಬ್ಬ ಅಮೆರಿಕನ್ ವಿದೇಶಾಂಗ ಅಧಿಕಾರಿ ಗಾಂಬೋಲ್ಯಿಲೆಟ್ ಕೂಡಾ ಕೆ.ಎಲ್.ಎ. ಮಾದಕ ದ್ರವ್ಯಗಳ ಕಳ್ಳ ಸಾಗಾಟದಲ್ಲಿ ಪಾಲು ಹೊಂದಿದೆ ಎಂದು ಟೀಕಿಸಿದ್ದರು. ಆದರೆ ಈಗ ಅವನ್ನೆಲ್ಲಾ ಬದಿಗೊತ್ತಿ ಅಮೆರಿಕನ್ ಆಳರಸರು ಕೆ.ಎಲ್.ಎ. ಕೊಸೊವೊ ಜನಗಳ ನಿಜವಾದ ಪ್ರತಿನಿಧಿಯೆಂದು ನಂಬಿಸಲು ಪ್ರಯತ್ನಿಸುತ್ತಿದ್ದಾರೆ. ವಾಸ್ತವವಾಗಿ ಅಲ್ಲಿ ಕೊಸೊವೊ ಡೆಮಾಕ್ರಾಟಿಕ್ ಲೀಗ್ ಎಂಬ ಇನ್ನೊಂದು ಸಂಘಟನೆಯೂ ಇದೆ. ಆದರೆ ಪಾಶ್ಚಿಮಾತ್ಯರು ಅದನ್ನು ಬೇಕೆಂದೇ ಉಪೇಕ್ಷಿಸಿದ್ದಾರೆ ಎಂದು ಮೈಕೆಲ್ ಚೋಸುಟೋವ್‌ಸ್ಕಿ ಹೊರಗೆಡಹಿದ್ದಾರೆ. ಏಕೆಂದರೆ ಈ ಲೀಗ್‌ನ ಮುಖಂಡ ಇಬ್ರಾಹಿಂ ರುಗೋವಾ ನಾಟೋ ಬಾಂಬ್ ಧಾಳಿಗಳನ್ನು ನಿಲ್ಲಿಸಬೇಕೆಂದು ಆಗ್ರಹಿಸಿದ್ದರು, ಯುಗೋಸ್ಲಾವಿಯದ ಸರಕಾರದೊಂದಿಗೆ ಒಂದು ಶಾಂತಿಯುತ ಇತ್ಯರ್ಥಕ್ಕೆ ತಾನು ಸಿದ್ಧ ಎಂದೂ ಹೇಳಿದ್ದರು. ಈ ಇಬ್ರಾಹಿಂ ರುಗೋವಾರನ್ನು ಸರ್ಬಿಯನ್ನರು ಕೊಂದು ಹಾಕಿದ್ದಾರೆ ಎಂದೂ ಈ ಕೆಎಲ್‌ಎ ಸುದ್ದಿ ಹರಡಿಸಿತ್ತಂತೆ. ಮಾರ್ಚ್ 31 ರಂದು ಅವರು ಪತ್ರಿಕಾ ಸಮ್ಮೇಳನ ನಡೆಸಿದಾಗಲೇ ಇದು ಸುಳ್ಳು ಎಂದು ಸಾಬೀತಾದದ್ದು!

ತಾವು ಯಾವ ದೇಶವನ್ನು ಅಸ್ಥಿರಗೊಳಿಸಬೇಕು ಎಂದು ಈ ಸಾಮ್ರಾಜ್ಯಶಾಹಿಗಳು ಬಯಸುತ್ತಾರೋ ಅಲ್ಲಿ ಬಂಡುಕೋರ ಸಂಘಟನೆಗಳನ್ನು ಹುಟ್ಟು ಹಾಕುವುದು, ಅಂತವು ಈಗಾಗಲೇ ಇದ್ದಲ್ಲಿ ಅದಕ್ಕೆ ಶಸ್ತ್ರಾಸ್ತ್ರ ನೆರವು ನೀಡುವುದು, ಇದಕ್ಕಾಗಿ ಹೆರಾಯಿನ್ ಮುಂತಾದ ಅತ್ಯಂತ ಘಾತಕ ಮಾದಕ ವಸ್ತುಗಳ ಕಳ್ಳ ಸಾಗಾಣಿಕೆಯಿಂದ ಬಂದ ಕಪ್ಪು ಹಣದಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸಿ ಈ ಕಪ್ಪು ಹಣವನ್ನು ಬಿಳಿ ಮಾಡುವುದು ಅಮೆರಿಕಾ ಕಳೆದ 40 ವರ್ಷಗಳಲ್ಲಿ ಅನುಸರಿಸಿರುವ ತಂತ್ರ. 1960 ರ ದಶಕದಲ್ಲಿ ಏಶ್ಯಾ ಖಂಡದ ಲಾವೋಸ್‌ನಲ್ಲಿ ಅದು ಮಾಡಿದ್ದು ಇದನ್ನೇ. ನಂತರ ದಕ್ಷಿಣ ಅಮೆರಿಕಾದ ಖಂಡದ ನಿಕರಾಗುವದಲ್ಲಿ ಇದನ್ನು ಪುನರಾವರ್ತಿಸಲಾಯಿತು. ಅಫಘಾನಿಸ್ತಾನದಲ್ಲೂ ಇದೇ ತಂತ್ರವನ್ನು ಅನುಸರಿಸಲಾಯಿತು.

ಪಶ್ಚಿಮ ಯುರೋಪಿನ ದೇಶಗಳಿಗೆ ಹೆರೊಯಿನ್ ಮುಂತಾದ ಮಾದಕ ವಸ್ತುಗಳ ಕಳ್ಳ ಸಾಗಾಟ ನಡೆಯುವುದು ಯುಗೋಸ್ಲಾವಿಯಾ ಮತ್ತು ಸುತ್ತಮುತ್ತಲ ಬಾಲ್ಕನ್ ಪ್ರದೇಶದ ಮೂಲಕ. ಇದರಲ್ಲಿ ಅಲ್ಬೇನಿಯಾ ಮತ್ತು ಕೊಸೊವೊದ ಹಲವು ಕ್ರಿಮಿನಲ್ ಗುಂಪುಗಳು ಶಾಮೀಲಾಗಿವೆ ಎಂದು ಎರಡು ವರ್ಷಗಳ ಹಿಂದೆ ಗ್ರೀಸ್ ಮತ್ತು ಟರ್ಕಿ ದೇಶಗಳ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು.

1990 ರಲ್ಲಿ ಐಎಂಎಫ್-ವಿಶ್ವಬ್ಯಾಂಕ್ ಸಲಹೆಯ ಪ್ರಕಾರ ತಂದ 'ಆರ್ಥಿಕ ಸುಧಾರಣೆ'ಗಳು ಕೊಸೊವೊದ ಕೃಷಿ ಮತ್ತು ಕೈಗಾರಿಕೆ ಎರಡನ್ನೂ ದಿವಾಳಿಯೆಬ್ಬಿಸಿದವು. ಇದರಿಂದ ಕೊಸೊವೊ ಅಲ್ಬೇನಿಯನ್ ಜನಾಂಗದ ಜನ ಹಾಗೂ ಸರ್ಬಿಯನ್ನರು ಕೂಡಾ (ಕೊಸೊವೊ ಸಮಸ್ಯೆ ಏನು ಎಂಬ ಬಗ್ಗೆ 'ಐಕ್ಯರಂಗ' ದ ಸಂಚಿಕೆ 15 ರಲ್ಲಿ ನೀವು ಈಗಾಗಲೇ ಓದಿರುವಿರಿ) ದಟ್ಟ ದರಿದ್ರರಾದರು. ಕೊಸೊವೊದಲ್ಲಿ ನಿರುದ್ಯೋಗ 70% ಕ್ಕೇರಿತು. ಪಕ್ಕದ ದೇಶ ಅಲ್ಬೇನಿಯಾದಲ್ಲೂ 1993 ರಿಂದ ಆರಂಭವಾದ ಐ.ಎಂ.ಎಫ್- ವಿಶ್ವಬ್ಯಾಂಕ್ ಪ್ರೇರಿತ 'ಮುಕ್ತ ಮಾರುಕಟ್ಟೆ' ಆರ್ಥಿಕ ನೀತಿಗಳಡಿ ಕಳ್ಳ ವ್ಯಾಪಾರಗಳಿಗೂ ಮುಕ್ತ ಅವಕಾಶ ಸಿಕ್ಕಿತು. ಕಳ್ಳ ವ್ಯಾಪಾರಿಗಳಿಗೆ, ಕ್ರಿಮಿನಲ್ ಚಟುವಟಿಕೆಗಳಿಗೆ, ಜನಾಂಗ ಘರ್ಷಣೆಗಳಿಗೆ ಇದಕ್ಕಿಂತ ಒಳ್ಳೆಯ ಅವಕಾಶ ಬೇರೇನು ಬೇಕು?



ನಾಟೋ ಬಾಂಬುಧಾಳಿಗಳಿಂದ ಮುರಿದು ಬಿದ್ದಿರುವ ಯುಗೋಸ್ಲಾವಿಯದ ಬೆಲ್‌ಗ್ರೇಡ್ ಬಳಿಯ ಒಂದು ಸೇತುವೆ. ಪಕ್ಕದ ಚಿತ್ರದಲ್ಲಿ 'ಹೇ ಯುರೋಪ್, ನಿಮಗೆ ಮೂರನೇ ಮಹಾಯುದ್ಧದ ಬಲಿಪಶುಗಳು ಬೇಕೆ?' ಎಂಬ ಫಲಕ ಹೊತ್ತ ಪ್ರತಿಭಟನಾಕಾರರು

ಯುಗೋಸ್ಲಾವಿಯಾದ ಅಲ್ಬೇನಿಯಾದ ಗಡಿಗಳಲ್ಲಿ ತೈಲ, ಶಸ್ತ್ರಾಸ್ತ್ರ ಮತ್ತು ಮಾದಕ ವಸ್ತುಗಳ ತ್ರಿಕೋಣ ಕಳ್ಳ ವ್ಯಾಪಾರ ಕೊಸೊವೊದ ನಿರುದ್ಯೋಗಿ ಯುವಜನರನ್ನು ಸೆಳೆಯಿತು. ಇನ್ನೊಂದೆಡೆ ಇದೇ ನಿರುದ್ಯೋಗಿ ಯುವಜನ ಸಾವಿರ - ಸಾವಿರ ಸಂಖ್ಯೆಯಲ್ಲಿ ಮೇಲೆ ಹೇಳಿದ ಕೆ.ಎಲ್.ಎ. ಸೇರಲಾರಂಭಿಸಿದರು. ಮಾದಕ ವಸ್ತುಗಳ ಕಳ್ಳ ಸಾಗಾಣಿಕೆಯಿಂದ ಗಳಿಸಿದ ಅಪಾರ ದುಡ್ಡು ಈ ಕೆ.ಎಲ್.ಎ. ಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು 30000 ಯುವಕರಲ್ಲಿ ಹಂಚಲು ಸಹಾಯಮಾಡಿತು. ಕೊಸೊವೊ, ಅಲ್ಬೇನಿಯ, ಮೆಸೆಡೋನಿಯಾದ ಮಾದಕ ವಸ್ತು ಕಳ್ಳ ಸಾಗಾಟದಲ್ಲಿ ತೊಡಗಿದ್ದವರು ಹೊಸ ಆರ್ಥಿಕ ದೊರೆಗಳಾದರು. ಪಶ್ಚಿಮ ಯುರೋಪು, ಅಮೆರಿಕಾದ ಹಣಕಾಸು ವಲಯದಲ್ಲಿ ಸಂಪರ್ಕ ಪಡೆದ ಇವರು ಮಾದಕ ವಸ್ತುಗಳ ಶಸ್ತ್ರಾಸ್ತ್ರ ಕಳ್ಳ ಸಾಗಾಟದಲ್ಲಿ ಮಾಡಿದ ಅಪಾರ ಹಣವನ್ನು ಬಿಳಿ ಮಾಡಿಕೊಂಡು ತಮ್ಮ ಪ್ರಭಾವ ಹೆಚ್ಚಿಸಿಕೊಂಡರು.

ಒಟ್ಟಿನಲ್ಲಿ ಹೇಳುವುದಾದರೆ, ವಾಸ್ತವವಾಗಿ 1995 ರ ಮೊದಲೇ ಕೊಸೊವೊದ ಅದೃಷ್ಟದ ಬಾಗಿಲನ್ನು ಈಗ ಅದರ ವಿಮೋಚಕರಂತೆ ನಟಿಸುವ ನಾಟೋ ದೇಶಗಳೇ ಮುಚ್ಚಿಬಿಟ್ಟಿದ್ದವು. ನಾಟೋ ಮಾಫಿಯಾದೊಂದಿಗೆ ಅನೈತಿಕ ಸಂಬಂಧ ಬೆಳೆಸಿಕೊಂಡ 'ಸ್ವಾತಂತ್ರ್ಯ ಹೋರಾಟಗಾರರನ್ನು" ಸೃಷ್ಟಿಸಿತು. ಮಾದಕ ವಸ್ತುಗಳ ವ್ಯಾಪಾರದ ಹಣವನ್ನು ಅಮೆರಿಕಾ ಮತ್ತು ಜರ್ಮನಿಯ ಆಳರಸರು 'ಕೊಸೊವೊ ಬಿಕ್ಕಟ್ಟು' ಸೃಷ್ಟಿಸಲು ಒದಗಿಸಿದರು. ಇದರಲ್ಲಿ ಅವರ ಅಂತಿಮ ಗುರಿಯೆಂದರೆ ಯುಗೋಸ್ಲಾವಿಯವನ್ನು ತುಂಡು-ತುಂಡುಗೊಳಿಸಿ ಇಡೀ ಬಾಲ್ಕನ್ ಪ್ರದೇಶವನ್ನು ಮತ್ತೆ ವಸಾಹತುಗಳಾಗಿ ಮಾಡಿರುವುದು. ಇದರ ಫಲವೇ ಈಗ ನಡೆಯುತ್ತಿರುವ ಇಡೀ ಒಂದು ದೇಶದ ವಿನಾಶ. ಅಲ್ಲಿ ನಾಟೋ ಕಾರ್ಯಾಚರಣೆಗಳಿಂದ ನಾಗರಿಕರ ಭಾರೀ ಸಾವು - ನೋವಿಗೆ, ಕೊಸೊವೊದ ಹಳ್ಳಿಗಳಿಂದ ಹಿಂಸಾತ್ಮಕವಾಗಿ ಎಬ್ಬಿಸಲ್ಪಟ್ಟ ಅಲ್ಬೇನಿಯನ್, ಸರ್ಬಿಯನ್ ಜನಗಳ ನರಕಯಾತನೆಗಳಿಗೆ ನೇರವಾಗಿ ಪಾಶ್ಚಿಮಾತ್ಯ ಸರಕಾರಗಳೇ ಹೊಣೆ ಎಂದು ಪ್ರೊ. ಮೈಕೆಲ್ ಚೋಸುಡೋವ್‌ಸ್ಕಿ ಬಲವಾಗಿ ಆಪಾದಿಸಿದ್ದಾರೆ.

ನೆನಪುಗಳನ್ನು ಮತ್ತೆ ಹಸಿರುಗೊಳಿಸುವ ಢಾಕಾ - ಕಲ್ಕತ್ತಾ ಬಸ್ ಸೇವೆ

ಏಪ್ರಿಲ್ ತಿಂಗಳ 6 ರಂದು ಉದ್ಘಾಟನೆಗೊಂಡ ಢಾಕಾ-ಕಲ್ಕತ್ತಾ, ಕಲ್ಕತ್ತಾ -ಢಾಕ ಬಸ್ ಸಂಚಾರ ಹಳೆಯ ಸವಿನೆನಪುಗಳನ್ನು ಮತ್ತೆ ಚಿಗುರಿಸಿದೆ. ಢಾಕಾದಿಂದ ಹೊರಟ ಬಸ್ 'ಶ್ಯಾಮಲಿ' ಭಾರತ-ಬಾಂಗ್ಲಾದೇಶದ ಗಡಿಯಲ್ಲಿರುವ ಪೆಟ್ರಾಪೋಲ್ ತಲುಪಿದಾಗ ಈ ಅಂತರ್‍ರಾಷ್ಟ್ರೀಯ ಗಡಿಯೆ ಇಲ್ಲವೇನೋ ಎಂಬ ಭಾವನೆ ಕೆಲವುಕಾಲ ಉಂಟಾಯಿತು. ಬಾಂಗ್ಲಾ ದೇಶದಿಂದ ಹಲವೆಡೆಗಳಿಂದ ಬಂದಿದ್ದ ಸಾವಿರಾರು ಜನ ಬಸ್ ಭಾರತದ ಗಡಿ ಪ್ರವೇಶಿಸುತ್ತಿದ್ದಂತೆ ಭಾರೀ ಹರ್ಷೋದ್ಗಾರಗಳ ನಡುವೆ ಬೀಳ್ಕೊಟ್ಟರು.

ಬಾಂಗ್ಲಾದೇಶದ ರಾಜಧಾನಿಯಿಂದ ಆರಂಭವಾದ ಈ ಚಾರಿತ್ರಿಕ ಬಸ್ ಸಂಚಾರ ಉದ್ಘಾಟನೆ ಕೆಲವು ತಿಂಗಳ ಹಿಂದೆಯೇ ಆಗಬೇಕಿತ್ತು. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಮುಖ್ಯಮಂತ್ರಿ ಜ್ಯೋತಿಬಸು ಎರಡೂ ದೇಶಗಳ ಪ್ರಧಾನ ಮಂತ್ರಿಗಳೊಂದಿಗೆ ಮಾತನಾಡಿದ ಫಲವಾಗಿ ಕೊನೆಗೂ ಈ ಬಸ್ ಆರಂಭಿಸುವ ಒಪ್ಪಂದ ಏರ್ಪಟ್ಟಿತು.

ಬಸ್ ಹರಿದಾಸ್‌ಪುರದಲ್ಲಿ ಭಾರತದ ಗಡಿ ಪ್ರವೇಶಿಸುತ್ತಿದ್ದಂತೆ ಬಿ.ಎಸ್.ಎಫ್. ವಾದ್ಯಮೇಳ ಸ್ವಾಗತ ಗೀತೆ ನುಡಿಸಿತು. ಅಲ್ಲಿಂದ ಬಸ್‌ನದ್ದು ಆಮೆ ನಡಿಗೆ. ಏಕೆಂದರೆ ಅದನ್ನು ಸ್ವಾಗತಿಸಲು, ನೋಡಲು ಗಡಿಯ ಈಚೆಯೂ ಸಾವಿರಾರು ಜನ ನೆರೆದಿದ್ದರು. ತಮ್ಮ ಅಂಗಡಿ ಇತ್ಯಾದಿಗಳನ್ನು ಮುಚ್ಚಿ ಗಂಟೆಗಟ್ಟಲೆ ಇದಕ್ಕಾಗಿ ಕಾದಿದ್ದ ಜನ ಅವರು.

312 ಕಿ.ಮಿ. ದೂರದ ಈ ಉದ್ಘಾಟನಾ ಸಂಚಾರ ಯಾವುದೇ ಅಡ್ಡಿ - ಆತಂಕವಿಲ್ಲದೆ ಪೂರ್ಣಗೊಂಡಿತು. ಬಾಂಗ್ಲಾದೇಶದಲ್ಲಿ ಎಲ್ಲೋ ಇದಕ್ಕೆ ಅಡ್ಡಿ ಬರುತ್ತದೆಂಬ ಬೆದರಿಕೆಯಿತ್ತು. ಆದರೆ ಗಡಿಯ ಎರಡೂ ಕಡೆ ಒಂದೇ ಭಾಷೆ (ಬಂಗಾಳಿ) ಯನ್ನಾಡುವ ಜನ ಎರಡೂ ದೇಶಗಳ ಒಪ್ಪಿಗೆಯಿಂದ ಆರಂಭವಾದ ಈ ಸಂಪರ್ಕವನ್ನು ಗಟ್ಟಿಗೊಳಿಸಬೇಕು ಎಂದು ಬಗೆದಿರಬೇಕು. ಅತ್ತ ಪಂಜಾಬಿನಂತೆ ಇಲ್ಲಿಯೂ ಕೂಡಾ ಬ್ರಿಟಿಶ್ ಕುತಂತ್ರಗಳಿಗೆ ಬಲಿಯಾದವರು ತಾವು ಎಂಬ ನೆನಪು ಅವರಲ್ಲಿ ಮರುಕಳಿಸಿದಂತಿತ್ತು.

1947 ರಲ್ಲಿ ದೇಶದ ವಿಭಜನೆಯಾಗುವ ಎಷ್ಟೋ ಮೊದಲೇ ಅಂದರೆ 1905 ರಲ್ಲೇ ಬಂಗಾಳವನ್ನು ವಿಭಜಿಸುವ ಪ್ರಯತ್ನವನ್ನು ಬ್ರಿಟಿಶರು ನಡೆಸಿದ್ದು ಈಗ ಇತಿಹಾಸ. ಕೊನೆಗೂ 1947 ರಲ್ಲಿ ಅವರ ಕುತಂತ್ರ ಫಲಿಸಿತು. ಆದರೆ ಢಾಕಾ - ಕಲ್ಕತ್ತ ಬಸ್ಸನ್ನು ಕಂಡ ಆ ಕ್ಷಣ ಜನಗಳು ತಾವು ಬೇರೆ-ಬೇರೆ ಎಂಬ ಭಾವನೆಯನ್ನು ಮರೆತು ಸೋದರ ಭಾವ ಹರಡಿದ್ದು ಕಂಡುಬಂತು.

39 ಜನರಿದ್ದ ನಿಯೋಗವೊಂದು ಈ ಬಸ್ಸಿನಲ್ಲಿ ಪ್ರಯಾಣಿಸುತ್ತಿತ್ತು. ಇವರಲ್ಲಿ 24 ಮಂದಿ ಸರ್ಕಾರಿ ಅಧಿಕಾರಿಗಳು, 13 ಮಂದಿ ಪತ್ರಕರ್ತರು.

"ಪ್ರಧಾನ ಮಂತ್ರಿ ಬಂದರೋ ಎಂಬಂತೆ ಜನ ನಮ್ಮ ಹಿಂದೆ ಓಡಿಬಂದರು' ಎಂದು ಹರ್ಷದಿಂದ ಹೇಳಿದರು ಬಾಂಗ್ಲಾ ದೇಶ ನಿಯೋಗದ ನೇತೃತ್ವ ವಹಿಸಿದ್ದ ಅಲ್ಲಿಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅಬ್ದುಲ್ ಮತಿನ್ ಅಖಂಡ್. "ನಾನು ಕಲ್ಕತ್ತೆಗೆ ಬಹಳ ಸಲ ಬಂದಿದ್ದೇನೆ. ಆದರೆ ಈ ದಿನದ ಸ್ವಾಗತ ಅಭೂತಪೂರ್ವ. ಜನ ಸಾಮಾನ್ಯರಲ್ಲಿನ ಈ ಭಾವನೆಯಿಂದ ನಮ್ಮ ಹೃದಯ ತುಂಬಿ ಬಂದಿದೆ" ಎಂದರು. ಪ್ರತಿವರ್ಷ 30 ಲಕ್ಷ ಬಾಂಗ್ಲಾ ದೇಶೀಯರು ಭಾರತಕ್ಕೆ ಬಂದು ಹೋಗುತ್ತಾರೆ. ಸುಮಾರು 15 ಲಕ್ಷ ಬಾಂಗ್ಲಾದೇಶಿ ವಿದ್ಯಾರ್ಥಿಗಳು ಭಾರತದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಈ ಬಸ್ ಸೇವೆ ಇವರಿಗೆಲ್ಲಾ ಪ್ರಯೋಜನವಾಗುತ್ತದೆ ಎನ್ನುತ್ತಾರೆ ಅವರು.

'ಶ್ಯಾಮಲಿ' ಎರಡುದಿನಗಳ ನಂತರ ಕಲ್ಕತ್ತೆಯಿಂದ ಢಾಕಾಗೆ ಹೊರಟಾಗಲೂ ಅದೇ ಜನೋತ್ಸಾಹ. ಈ ಬಾರಿ ಭಾರತದ ಬಸ್ 'ಸೌಹಾರ್ದ್ಯ' ಕೂಡಾ ಜತೆಗೆ ಹೊರಟಿತು. ಇದರಲ್ಲೂ ಪತ್ರಕರ್ತರಿದ್ದರು. ಇನ್ನು ಸ್ವಲ್ಪ ಸಮಯದಲ್ಲೇ ಪ್ರತಿದಿನ ಎರಡೆರಡು ಬಸ್ಸುಗಳು ಢಾಕಾದಿಂದ ಮತ್ತು ಕಲ್ಕತ್ತಾದಿಂದ ಪ್ರತಿದಿನ ಓಡಾಡಲಾರಂಭಿಸುತ್ತವೆ ಎಂಬ ಆಶಯವನ್ನು ಪಶ್ಚಿಮ ಬಂಗಾಳ ಭೂ ಸಾರಿಗೆ ನಿಗಮದ ಅಧ್ಯಕ್ಷ ಶಂತನು ಗೋಸ್ವಾಮಿ ವ್ಯಕ್ತಪಡಿಸಿದ್ದಾರೆ.

(ಕೃಪೆ: ಗಣಶಕ್ತಿ ಆನ್ ಲೈನ್)

ಜಾತಿ ವ್ಯವಸ್ಥೆಯ ಬಗ್ಗೆ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯ ಅಧ್ಯ ನೇತಾರರಾದ ಇ.ಎಂ.ಎಸ್., ಬಿ.ಟಿ.ಆರ್. ಮಾರ್ಕ್ಸ್‌ವಾದಿ ಇತಿಹಾಸಕಾರರಾದ ಡಿ.ಡಿ.ಕೋಸಾಂಬಿ, ಇರ್ಫಾನ್ ಹಬೀಬ್, ಆರ್.ಎಸ್.ಶರ್ಮ, ರೊಮಿಲಾ ಥಾಪರ್, ಎ.ಆರ್.ದೇಸಾಯಿಯವರು ಮಂಡಿಸಿದ ವಿಶ್ಲೇಷಣೆಗಳ ಸಾರವನ್ನು ನಿಮ್ಮ ಮುಂದಿಡುವ ಉದ್ದೇಶದ ಈ ಲೇಖನದಲ್ಲಿ ಕಳೆದ ವಾರ ಭಾರತದಲ್ಲಿ ವರ್ಗಸಮಾ ಜಾತಿಯ ವ್ಯವಸ್ಥೆಯಾಗಿ ರೂಪುಗೊಂಡ ಬಗೆಯನ್ನು ನೋಡಿದ್ದೀರಿ. ಮುಂದೆ ಓದಿ....



ಜಾತಿ ವ್ಯವಸ್ಥೆಯ ಮೂಲಬೇರುಗಳೂ ಅವುಗಳ ನಿರ್ಮೂಲನವೂ

ಜಿ.ಎನ್.ನಾಗರಾಜ್

(ಕಳೆದ ಸಂಚಿಕೆಯಿಂದ.......)

ವೇದಾಭ್ಯಾಸೋ ಬ್ರಾಹ್ಮಣಸ್ಯ ಕ್ಷತ್ರಿಯಸ್ಯಚ ರಕ್ಷಣಾಂ
ವಾರ್ತಾನಕರ್ಮೈವ ವೈಶ್ಯಸ್ಯ ವಿಶಿಷ್ಟಾನಿಸ್ವಕರ್ಮಸು
ಶಸ್ತ್ರಾಸ್ತ್ರ ಭೃತಂಕ್ಷತ್ರಸ್ಯ ವಣಿಕ್ ಪಶುಕೃಷಿರ್ವಿಶಃ

ಎನ್ನುತ್ತಾ ಬ್ರಾಹ್ಮಣನಿಗೆ ಮಾತ್ರ ವೇದಾಭ್ಯಾಸ, ಕ್ಷತ್ರಿಯನಿಗೆ ಶಸ್ತ್ರಾಸ್ತ್ರ, ರಕ್ಷಣೆ, ವೈಶ್ಯರಿಗೆ ಕೃಷಿ, ಪಶು ಪಾಲನೆಯನ್ನು ಅವರ ಸ್ವಕರ್ಮ ಎಂದು ವಿಧಿಸುತ್ತದೆ.

ಶಂಕರ ಭಾಷ್ಯದಲ್ಲಿ ಉಲ್ಲೇಖಿಸಿದ ಗೌತಮ ಧರ್ಮ ಸೂತ್ರ ಮಾನವೀಯತೆಯನ್ನು ಆಳಕ್ಕೆ ತುಳಿಯುತ್ತಾ ಘೋಷಿಸುತ್ತದೆ - ಶೂದ್ರನು ಸ್ಮಶಾನಕ್ಕೆ ಸಮಾನ, ಆದುದರಿಂದ ಅವನ ಹತ್ತಿರ ಯಾರೂ ಅಧ್ಯಯನ ಮಾಡಬಾರದು. ಅವನು ವೇದವಾಕ್ಯವನ್ನು ಕೇಳಿದನೆಂದರೆ ಅವನ ಕಿವಿಯಲ್ಲಿ ಅರಗನ್ನು ಸೀಸವನ್ನು ತುಂಬಬೇಕು. ಇಂತಹವನು ಆಕಸ್ಮಾತ್ ವೇದವನ್ನು ಉಚ್ಚಾರಣೆ ಮಾಡಿದರೆ ವೇದೋಚ್ಚಾರಣೋಜಿಹ್ವಾಚ್ಛೇದೋ ದೇಹಧಾರಣೋ ಶರೀರ ಭೇದ ಇದೆ - ಎಂದರೆ ವೇದವನ್ನು ಉಚ್ಚರಿಸಿದರೆ ನಾಲಗೆಯನ್ನು ಕತ್ತರಿಸು, ವೇದವನ್ನು ಧರಿಸಿಯೇ ಬಿಟ್ಟರೆ ಕಲಿತೇಬಿಟ್ಟರೆ ಶರೀರವನ್ನು ಚಿಂದಿಮಾಡು. ಇದು ಕ್ರೌರ್ಯದ ತುತ್ತತುದಿ, ನೀಚತೆಯ ಹಿಮಾಲಯ. ಶೂದ್ರನಿಗೆ **ದಾಸ್ಯಂ ಶೂದ್ರಂ ದ್ವಿಜನ್ಮಾನಾಂ** ಎಂದು ಹಾಗೂ ಎಲ್ಲ ದ್ವಿಜರಿಗೆ ಸೇವೆ ಸಲ್ಲಿಸುವುದೇ ಶೂದ್ರನ ಕರ್ತವ್ಯ ಎಂದು ಅಪ್ಪಣೆಮಾಡುತ್ತದೆ. ಕೃಷಿ ಪಶು ಸಂಗೋಪನೆಯಲ್ಲಿಯೂ ಅವನು ತೊಡಗುವಂತಿಲ್ಲ. ಭೂಮಿಯ ಮಾಲೀಕತ್ವವನ್ನು ಅವನಿಗೆ ನೀಡಬಾರದು ಎಂದು ವಿಧಿಸುತ್ತದೆ. ಸಂಪತ್ತಿನ ಹಂಚಿಕೆಯ ಪ್ರಶ್ನೆಯಲ್ಲಿ ವಿವಿಧ ಜಾತಿಗಳಿಗೆ ಮನುಸ್ಮೃತಿ ಹತ್ತು ಪಾಲಿನಲ್ಲಿ ನಾಲ್ಕು ಬ್ರಾಹ್ಮಣನಿಗೆ ಮೂರು ಕ್ಷತ್ರಿಯನಿಗೆ, ಎರಡು ವೈಶ್ಯನಿಗೆ, ಒಂದು ಶೂದ್ರ ಪುತ್ರನಿಗೆ ಎಂದು ವಿಧಿಸುತ್ತದೆ. ಅಷ್ಟಕ್ಕೇ ನಿಲ್ಲದೆ ಮುಂದೆವರೆದು

ಬ್ರಾಹ್ಮಣಾ ಕ್ಷತ್ರಿಯ ವಿಶಾಂ ಶೂದ್ರಾ ಪುತ್ರೋನರಿಕ್ಥಭಾಗ್
ಯದೇವಾಸ್ಯ ಪಿತಾದದ್ಯಾತ್ ತ ದೇವಾಸ್ಯ ಧನುಂಭವೇತ್

ಮೂರು ದ್ವಿಜ ವರ್ಣದವರು ಶೂದ್ರನಿಗೆ ಪಾಲುಕೊಡದೆ ಸ್ವಲ್ಪ ಧನ ನೀಡಿ ಸಂತುಷ್ಟಗೊಳಿಸಬೇಕು ಎನ್ನುತ್ತದೆ. ಹೀಗೆ ಯಾವ ಕಾರಣಕ್ಕೂ ಶೂದ್ರ ಜಾತಿಗಳು ಭೂಮಿಯ ಒಡೆಯರಾಗಿ ಸ್ವಾವಲಂಬಿಗಳಾಗಬಾರದೆಂದು ವಿಧಿಸುತ್ತದೆ. ಅಲ್ಲದೆ ಇನ್ನೂ ಕ್ರೂರವಾಗಿ

ನಶೂದ್ರಾಯ ಮತಿ ದದ್ಯಾನ್ನೋಚ್ಚಿಷ್ಟಂ ನ ಹವಿಷ್ಕೃತಂ ನ
ಚಾಸ್ಯೋಪದಿಶೇದ್ಧರ್ಮಂ ನಚಾಸ್ಯ ವ್ರತಮಾದಿಶೇತ್

ಶೂದ್ರನಿಗೆ ಮತಿಯನ್ನು ನೀಡಬೇಡಿ, ಉಳಿದ ಅನ್ನವನ್ನು, ಹವಿಸ್ಸನ್ನು ಕೊಡಬೇಡಿ, ವ್ರತ, ಧರ್ಮಗಳನ್ನು ಉಪದೇಶಿಸಬೇಡಿ ಎಂದು ಮನು ನಿರ್ದೇಶಿಸುತ್ತಾನೆ. ಅಷ್ಟೇ ಅಲ್ಲ ಸಾಲ, ಸಾಲದ ಬಡ್ಡಿ, ಅದನ್ನು ಹಿಂತಿರುಗಿಸುವ ಬಗ್ಗೆಯೂ ವಿವಿಧ ವರ್ಣದವರಿಗೆ ವಿವಿಧ ವ್ಯವಸ್ಥೆ. ಸಾಲದ ಬಡ್ಡಿ ಬ್ರಾಹ್ಮಣರಿಗೆ ತಿಂಗಳಿಗೆ ಶೇ ಎರಡರಷ್ಟು, ಕ್ಷತ್ರಿಯರಿಗೆ ಮೂರು, ವೈಶ್ಯರಿಗೆ ನಾಲ್ಕು, ಶೂದ್ರರಿಗೆ ಐದು, ಅಂದರೆ ವರ್ಷಕ್ಕೆ ಶೇ. 60ರಷ್ಟು.

ಬ್ರಾಹ್ಮಣರಿಗೆ ಕ್ಷತ್ರಿಯರು, ಇತರರು ಪಾಪ ಪರಿಹಾರಾರ್ಥವಾಗಿ ಹಾಗೂ ಪುಣ್ಯ ಸಂಪಾದನೆ ಮಾಡುವ ದೃಷ್ಟಿಯಿಂದ ಮಾಡುವ ಯಥೇಚ್ಛ ಭೂದಾನ, ಗೋದಾನ, ಸುವರ್ಣ ದಾನಗಳಲ್ಲದೆ ಅವರಿಗೆ ಯಾವುದೇ ಕರ, ಕಂದಾಯಗಳನ್ನು ವಿಧಿಸಬಾರದು ಅವರು ಸಂಪಾದನೆ ಮಾಡಿದಷ್ಟು ಅವರಿಗೇ ಬಿಟ್ಟು ಕೊಡಬೇಕು. ರಾಜ್ಯಯಂತ್ರಕ್ಕೆ ಬೇಕಾಗುವ ವೆಚ್ಚಕ್ಕೆ ವೈಶ್ಯರಿಂದ, ಶೂದ್ರರಿಂದ ಅವರ ಸಂಪಾದನೆಯ 1/6, 1/8, 1/12ನೇ ಒಂದು ಭಾಗದಷ್ಟು ತೆರಿಗೆಯನ್ನು ಸಂಗ್ರಹಿಸಬೇಕು.

ಜೊತೆಗೆ ವಿದ್ವಾಂಸರ ಬ್ರಾಹ್ಮಣರ ಕಣ್ಣಿಗೆ ಪುರಾತನವಾದ ನಿಧಿ ಬಿದ್ದರೆ ಆ ನಿಧಿಪೂರಾ ಆತನಿಗೆ. ರಾಜನಿಗೆ ಭೂಮಿಯೊಳಗೆ ನಿಧಿ ಸಿಕ್ಕಿದರೆ ಅರ್ಧವನ್ನು ಬ್ರಾಹ್ಮಣರಿಗೆ ಹಂಚಬೇಕು. ತಾನು ಅರ್ಧವನ್ನು ಮಾತ್ರ ಉಳಿಸಿಕೊಳ್ಳಬೇಕು. ಬ್ರಾಹ್ಮಣರಿಗೆ ತಮ್ಮ ಬ್ರಾಹ್ಮಣ್ಯದಿಂದ ಸಂಪಾದನೆ ಸಾಕಾಗದಿದ್ದರೆ ಕ್ಷತ್ರಿಯ ವೃತ್ತಿಯನ್ನಾಗಲೀ, ವೈಶ್ಯ ವೃತ್ತಿಯಾದ ವ್ಯಾಪಾರ, ಕೃಷಿ, ಪಶುಪಾಲನೆಗಳನ್ನಾಗಲೀ ಕೈಗೊಳ್ಳಬಹುದು. ಆದರೆ ಕ್ಷತ್ರಿಯರು ವೇದೋಪದೇಶವನ್ನು ಕೈಗೊಳ್ಳಬಾರದು. ವೈಶ್ಯರು ಬ್ರಾಹ್ಮಣ, ಕ್ಷತ್ರಿಯರ ಉದ್ಯೋಗಕ್ಕೆ ಕೈಹಾಕಬಾರದು. ಶೂದ್ರರು ಈ ಮೇಲಿನ ಮೂರೂ ವರ್ಣದವರ ಕೆಲಸ ಕೈಗೊಳ್ಳಬಾರದು. ದಾಸರಾಗಿಯೇ ಉಳಿಯಬೇಕು. ಕೃಷಿ, ಪಶುಸಂಗೋಪನೆಯನ್ನು ಮಾಡಬೇಕಾದವನು ವೈಶ್ಯ ಮತ್ತು ಅವರಿಗೂ ಬ್ರಾಹ್ಮಣ, ಕ್ಷತ್ರಿಯರಿಗೂ ಸೇವೆಮಾಡಿ ಸಂಪತ್ತಿನ ನಿಜವಾದ ಉತ್ಪಾದನೆ ಮಾಡಬೇಕಾದವನು ಶೂದ್ರ. ಆದ್ದರಿಂದ ಮನುಸ್ಮೃತಿ ಹೇಳುತ್ತದೆ.

ವೈಶ್ಯ ಶೂದ್ರೌ ಪ್ರಯತ್ನೇನ ಸ್ವಾನಿಕರ್ಮಾಣಿ ಕಾರಯೇತ್
ತೌಹಿ ಚ್ಯುತೌ ಸ್ವಕರ್ಮಭ್ಯಃ ಕ್ಷೋಭಯೇತಾಮಿದಂ ಜಗತ್

ವೈಶ್ಯ ಶೂದ್ರರು ತಮ್ಮ ಕೆಲಸಗಳನ್ನು ಬಿಡದೆ ಮಾಡುವಂತೆ. ಪ್ರಯತ್ನಿಸಬೇಕು. ಅವರು ಕರ್ಮಚ್ಯುತರಾದರೆ ಜಗತ್ತೇ ಕ್ಷೋಭೆಗೆ ಒಳಗಾಗುತ್ತದೆ.

ಹೀಗೆ ಶೂದ್ರ ದಾಸನಾಗಿಯೇ ಉಳಿಯಬೇಕಾದರೆ ಅವನು ತನ್ನ ಸ್ಥಾನವನ್ನು ಸ್ವಲ್ಪವೂ ಅತಿಕ್ರಮಿಸದಂತೆ ತೀವ್ರ ದಂಡನೆಗೆ ಒಳಪಡಿಸಬೇಕು. ಅವನು ತನ್ನ ಕರ್ತವ್ಯ ಮಾಡದಿದ್ದರೆ, ಸಾಲ ವಾಪಸ್ ಮಾಡದಿದ್ದರೆ, ಮೇಲುಜಾತಿಯವರನ್ನು ನಿಂದಿಸಿದರೆ, ಅವರ ಹೆಣ್ಣುಗಳತ್ತ ದೃಷ್ಟಿಹಾಯಿಸಿದರೆ ಅತ್ಯಂತ ಕಠೋರ ಶಿಕ್ಷೆಗಳು ಕೈ, ಕಾಲು, ನಾಲಗೆ, ಕತ್ತರಿಸುವುದು, ಕಣ್ಣು ಕೀಳಿಸುವುದು ಇತ್ಯಾದಿಗಳು. ಇದೇ ಕೆಲಸಗಳನ್ನು ಮೇಲುವರ್ಣದವರು ಮಾಡಿದರೆ ಅವರಿಗೆ ಮೃದುಶಿಕ್ಷೆ. ಬ್ರಾಹ್ಮಣರಿಗಂತೂ ಯಾವ ಅಪರಾಧಕ್ಕೂ ಮರಣದಂಡನೆಯಿಲ್ಲ. ಏಕೆಂದರೆ ಬ್ರಹ್ಮಹತ್ಯಾ ಮಹಾಪಾಪಂ. ಒಂದು ಸಣ್ಣ ಉದಾಹರಣೆ ನೋಡಿ.

ಅವಕೃಷ್ಟನು ಉತ್ಕೃಷ್ಟನ ಜೊತೆ ಸಮಾಸನದಲ್ಲಿ ಕುಳಿತರೆ ಅವನ ಸೊಂಟಕ್ಕೆ ಕಬ್ಬಿಣದ ಬರೆಹಾಕಬೇಕು ಅಥವಾ ಕುಂಡಿ ಕೆತ್ತಬೇಕು. ಆದರೆ ಸಾಯಗೊಡಬಾರದು.

ಒಟ್ಟಿನಲ್ಲಿ ಶೂದ್ರರು ಭೂವಂಚಿತರಾಗಿ, ಹಣಕಾಸು, ಇತರ ಸಂಪತ್ತುಗಳಿಂದ ವಂಚಿತರಾಗಿ, ಮತಿಯೂ ಗತಿಯೂ ಇಲ್ಲದೆ ಇದ್ದರೆ ಮಾತ್ರ ದಾಸ್ಯಂ ಶೂದ್ರಂ ದಿಜನ್ಮಾನಾಂ ಎಂಬುದು ಸಾಧಿತವಾಗುತ್ತದೆ ಎಂದು ಮನು ಸಶಕ್ತವಾಗಿ ಜಾತಿವ್ಯವಸ್ಥೆಯನ್ನೊಂದು ಸಮಗ್ರವಾಗಿ ರೂಪಿಸುತ್ತಾನೆ.

ಅಸ್ಪೃಶ್ಯರು ಮತ್ತು ಮನುಸ್ಮೃತಿ:

ಶೂದ್ರರ ಪರಿಸ್ಥಿತಿಯೇ ಈ ಪರಿಯಾದರೆ ಇನ್ನು ನಾಲ್ಕು ವರ್ಣಗಳಿಗೂ ದೂರವಾದ ಅಂತ್ಯಜರ ಪರಿಸ್ಥಿತಿ ಇನ್ನೂ ಭೀಕರ ಎನ್ನುವುದರಲ್ಲಿ ಆಶ್ಚರ್ಯವುಂಟೇ!

ಮನುಸ್ಮೃತಿಯ ಪ್ರಕಾರ ನಿಷಾದರಿಗೆ ಮೀನು, ಆಯೋಗರಿಗೆ ಕೆತ್ತನೆ, ಮೇದ, ಆಂಧ್ರ, ಚಂಚು, ಮದ್ಗು ಇವರಿಗೆ ಕಾಡುಪ್ರಾಣಿಗಳ ಬೇಟೆ ವೃತ್ತಿಯ ಕ್ಷತ್ರ, ಉಗ್ರ, ಪುಕ್ಕಸ ಇವರಿಗೆ ಬಿಲದಲ್ಲಿರುವ ಉಡ ಮೊದಲಾದ ಪ್ರಾಣಿಗಳನ್ನು ತಿಂದು ಬದುಕಬೇಕು. ಜೊತೆಗೆ

ಚಂಡಾಲ ಶ್ವಪಚಾನಾಂತು ಬಹಿಗ್ರಾಃ ಮಾತ್ಪತಿ ಶ್ರಯಃ
ಅಪಪಾತ್ರಾಶ್ಚಕರ್ತವ್ಯಾ ಧನಮೇ ಷಾಂಶ್ವಗರ್ದಭಮ್
ವಾಸಾಂಸಿ ಮೃತ ಚೇಲಾನಿ ಭಿನ್ನ ಭಾಂಡೇಷು ಭೋಜನಮ್

ಚಾಂಡಾಲ, ಶ್ವಪಚರುಗಳು ಊರ ಹೊರಗೆ ಮಾತ್ರ ಆಶ್ರಯ ಪಡೆಯಬೇಕು. ಅವರ ಸಂಪತ್ತೆಲ್ಲಾ ನಾಯಿ ಕತ್ತೆಗಳು ಮಾತ್ರ. ಬಟ್ಟೆ ಹೆಣಗಳಿಗೆ ಹಾಕಿದ ಬಟ್ಟೆ. ಇನ್ನು ಅವರಿಗೆ ಆಹಾರ ನೀಡ ಬೇಕಾದರೆ ಕೂಲಿಯವರ ಮೂಲಕ ಒಡೆದು ಬೇಡವಾದ ಪಾತ್ರೆಯಲ್ಲಿ ನೀಡಬೇಕು.

ರಾತ್ರೌ ನವಿಚರೇಯುಸ್ತೇ ಗ್ರಾಮೇಷು ನಗರೇಷು ಚ
ದಿವಾ ಚರೇಯುಃ ಕಾರ್ಯಾರ್ಥಂ ಚಿಹ್ನಿತಾ ರಾಜಶಾಸನೈ ಅಬಾಂಧವಂ ಶವಂ ಚೈವ ನಿಹನರೆಯುರಿತಿ ಸ್ಥಿತಿಃ

ಹಳ್ಳಿ ಪಟ್ಟಣಗಳಲ್ಲಿ ರಾತ್ರಿ ಕಾಲದಲ್ಲಿ ಸಂಚರಿಸಲೇ ಬಾರದು (ಅಂದರೆ ಅಲ್ಲಿ ಉಳಿದು ಕೊಳ್ಳುವುದಕ್ಕೆ ಅವಕಾಶವಿಲ್ಲ) ಹಗಲು ಹೊತ್ತಿನಲ್ಲಿ ಯಾರ ಮೈ ಮೇಲೆ ಗುರುತು ಮಾಡುವ ಮೂಲಕ ರಾಜನು ಅನುಮತಿ ನೀಡಿದ್ದಾನೋ ಅವರು ಮಾತ್ರ ನಿರ್ಗತಿಕರ ಶವ ಸಂಸ್ಕಾರ ಮಾಡುವುದಕ್ಕಾಗಿ ಒಳಬರಬಹುದು. ಗಲ್ಲಿಗೆ ಹಾಕಿದ ವಧಿತರ ಚಾಪೆ ಬಟ್ಟೆ ಬರೆ ಉಪಯೋಗಿಸುವುದರಿಂದ ಇವರ ಜೀವನ.

ಇದು ಅಸ್ಪೃಶ್ಯರಿಗೆ ವಿಧಿಸಿದ ಜೀವನ. ಇಂತಹ ಪ್ರಾಣಿಗಳಿಂತಲೂ ಕೀಳಾದ ಜೀವನವನ್ನು ವಿಧಿಸುವ ಮೂಲಕ ಅತ್ಯಂತ ಕೀಳು ಆದರೆ ನಗರ ಪಟ್ಟಣ, ಹಳ್ಳಿಗಳಲ್ಲಿನ ಜೀವನಕ್ಕೆ ಅತಿ ಅವಶ್ಯವಾದ ಕೆಲಸಗಳಿಗೆ ಅವರನ್ನು ಸೀಮಿತಗೊಳಿಸುವ ಮೂಲಕ ಈ ಕೆಲಸಗಳನ್ನು ಮಾಡಲು ಅಂತ್ಯಜ ಜನ ಕಾಯುತ್ತಾ ಕುಳಿತುಕೊಳ್ಳುವಂತೆ ಹಾಗೂ ಅಗ್ಗದಲ್ಲಿ-ಕೇವಲ ಬಿಸಾಕುವ ಆಹಾರಕ್ಕಾಗಿಯೇ ಈ ಕೆಲಸಗಳನ್ನು ಮಾಡಲು ಸಿದ್ಧರಾಗುವಂತೆ ವ್ಯವಸ್ಥೆ ಮಾಡಿದೆ.

ಇದು ಮಧ್ಯಕಾಲೀನ ಯುಗದ ಆರಂಭದಲ್ಲಿ ಕಾಣುವ ಸಮಾಜದ ಚಿತ್ರ. ಇಂತಹ ಅಮಾನವೀಯ ವ್ಯವಸ್ಥೆಯ ವಿರುದ್ಧ ಭಾರತದ ವಿವಿಧ ಭಾಗಗಳಲ್ಲಿ ವಿವಿಧ ರೂಪಗಳಲ್ಲಿ ಚಳುವಳಿಗಳು ಧಾರ್ಮಿಕ ಸಂತರ ನೇತೃತ್ವದಲ್ಲಿ ಬೆಳೆದು ಬಂದವು. ತಮಿಳುನಾಡಿನ ಶೈವ, ವೈಷ್ಣವ ಚಳುವಳಿಗಳಿಂದ ಕ್ರಿಸ್ತಶಕ 6-7 ಶತಮಾನಗಳಲ್ಲಿ ಆರಂಭವಾಗಿ ಕನ್ನಡ ನಾಡಿನ 12 ನೇ ಶತಮಾನದ ಶಿವಶರಣರ ಚಳುವಳಿ, 14ನೇ ಶತಮಾನದ ಹರಿದಾಸ ಪಂಥ, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ಉತ್ತರ ಪ್ರದೇಶ, ಒರಿಸ್ಸಾ, ಬಂಗಾಲ, ಬಿಹಾರ, ಅಸ್ಸಾಮ್, ಜಮ್ಮು ಕಾಶ್ಮೀರಗಳ ಭಕ್ತಿಪಂಥಗಳು, ಪಂಜಾಬಿನ ಸಿಖ್ ಧಾರ್ಮಿಕ ಹೋರಾಟಗಳು ಜಾತಿ ಪದ್ಧತಿಯ ವಿರುದ್ಧ ಧ್ವನಿಯೆತ್ತಿದವು. ಹಲವು ವ್ಯಾಪಕವಾದ ಕೆಲವು ಆಳವಾದ ಪರಿಣಾಮ ಬೀರಿದುವು. ಸಮಾಜದ ಬದಲಾವಣೆಗೆ ಪ್ರಯತ್ನ ನಡೆಸಿದುವು. ಆದರೆ ಈ ಯಾವ ಚಳುವಳಿಗಳೂ ಜಾತಿ ಪದ್ಧತಿಯ ಬೇರುಗಳನ್ನು ಆಮೂಲಾಗ್ರವಾಗಿ ಕಿತ್ತೆಸೆಯುವುದರಲ್ಲಿ ಯಶಸ್ಸು ಪಡೆಯಲಿಲ್ಲ. ಈ ಧಾರ್ಮಿಕ ಚಳುವಳಿಗಳಲ್ಲಿ ಯಾವುದು ಎಷ್ಟು ಸಫಲವಾಯಿತು ಎಂದು, ಏಕೆ ಸಫಲವಾಗಲಿಲ್ಲ ಎನ್ನುವುದು ಬೇರೆಯೇ ವಿಷಯ. ಮುಂದಿನ ಸಂಚಿಕೆಗಳಲ್ಲಿ ಅವುಗಳಲ್ಲಿ ಕೆಲ ಚಳುವಳಿಗಳ ಬಗ್ಗೆ ವಿಶ್ಲೇಷಣೆ ನಡೆಸಬಹುದು.

ಆದರೆ ಭಾರತ ಆಧುನಿಕ ಜಗತ್ತಿಗೆ ಪ್ರವೇಶಿಸಿದ ನಂತರ ಕೆಲವು ರಭಸದ ಬೆಳವಣಿಗೆಗಳು ಆರಂಭವಾದವು. ಭಾರತದ ಆಧುನೀಕರಣ ಇಲ್ಲಿಯ ಸಮಾಜದ ಒಳಗಡೆಯಿಂದ ಹೊರಹೊಮ್ಮದೆ ಬ್ರಿಟಿಷ್ ವಸಾಹತುಶಾಹಿ ಪ್ರಭಾವದಲ್ಲಿ ಅವರಿಂದ ಆರಂಭಗೊಂಡುದರ ಫಲವಾಗಿ ಅನೇಕ ಕೊರತೆಗಳು, ಅಪೂರ್ಣತೆಗಳು ಕಾಣಿಸಿಕೊಂಡವು.

ಕೈಗಾರಿಕಾ ವಿಧಾನದ ಉತ್ಪಾದನೆಯ ವ್ಯವಸ್ಥೆ ಜಾತಿ ಆಧಾರಿತ ಉತ್ಪಾದನಾ ವ್ಯವಸ್ಥೆಯ ಮೇಲೆ ಹಲವು ರೀತಿಯ ಒತ್ತಡಗಳನ್ನು ಹೇರಿತು. ಜಾತಿ ವ್ಯವಸ್ಥೆ ಅಲ್ಲಲ್ಲಿ ಬಿರುಕುಬಿಟ್ಟು ತೂತಾಗಿದ್ದರೂ ಇನ್ನೂ ಭಾರತದ ಆರ್ಥಿಕ-ಸಾಮಾಜಿಕ ರಚನೆಯ ಮೇಲೆ ತನ್ನ ಹಿಡಿತವನ್ನು ಉಳಿಸಿಕೊಂಡಿದೆ.

ಜಾತಿ ವ್ಯವಸ್ಥೆಯ ಇಂದಿನ ಸ್ವರೂಪ, ಸ್ಥಿತಿ ಏನು? ಭಾರತದಲ್ಲಿ ಇಂದು ನಡೆಯುತ್ತಿರುವ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಧಾಳಿಯಿಂದ ಜಾತಿವ್ಯವಸ್ಥೆಯ ಮೇಲಾಗುವ ಪರಿಣಾಮವೇನು? ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಪ್ರಬಲವಾಗುತ್ತಿರುವ ಕೋಮುವಾದೀ ರಾಜಕಾರಣ, ಅದರ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳು ಹೇಗೆ ಜಾತಿ ವ್ಯವಸ್ಥೆಯನ್ನು ಪ್ರಭಾವಿಸಿವೆ? ಜಾತಿವಾದ - ಕೋಮುವಾದದ ನಡುವಣ ಸಂಬಂಧವೇನು? ಜಾತಿ ವ್ಯವಸ್ಥೆ ಇಂದು ಪಡೆದಿರುವ ಸ್ವರೂಪ, ಈ ಮೇಲಿನ ವಿವಿಧ ಪ್ರಕ್ರಿಯೆಗಳಿಂದುಂಟಾಗುವ ಪರಿಣಾಮದ ಹಿನ್ನೆಲೆಯಲ್ಲಿ ಜಾತಿ ವಿನಾಶ ಹೇಗೆ ಸಾಧ್ಯ ಎನ್ನುವ ವಿಷಯಗಳನ್ನು ಈ ಲೇಖನದ ಮುಂದಿನ ಭಾಗದಲ್ಲಿ ವಿಶ್ಲೇಷಿಸಲು ಪ್ರಯತ್ನಿಸುತ್ತೇನೆ.

ತ್ರಿಶೂಲ ಧಾರಿಗಳ ನಾಡಿನಿಂದ

ಪ್ರಹ್ಲಾದ್ ಬೇಟಗೇರಿ

ಸುದ್ದಿ ಮಾರುವ ಮಂದಿ
ನಡುವ ತಾನೆ ಸುದ್ದಿ ಮಾಡ
ಹೊರಟ ಭೂಪ
ಮಾಡಿದ್ದೆಲ್ಲಾ ತೋಪ!
ಈ ದೇಶ ಆಳುವ
ಕೋಶ ಕೆದಕುವ
ತ್ರಿಶೂಲಕೆ ಹತ್ತಿದ ಜಂಗ
ತೊಳೆಯ ಬಾರೋ ಮಂಗ.
ಸಂಗೀತದಂತಹ ನಿರರ್ಗಳ
ಹರಿಯುವ ಮಾತು
ಹೊರಡಿಸಲಿಲ್ಲನಾದ
ಸ್ವಾಮಿನಿಷ್ಠೆಯ ಭಕ್ತೆಯರ
ನಾಡುಗುಡುಗಿದರೆ
ಗುಡುಗುವುದು ದರ್ಬಾರು
ಕುರ್ಚಿಕಾಲು ಉರುಳಿ.
ಬೇಕಾಬಿಟ್ಟಿ ಅಂಡಲೆಯುವರು
ರಾಜ ಪಥದ ತುಂಬಾ

ಸಂಗೀತದ ಮಾತು ಹೊರಡಿಸಲಿಲ್ಲ ನಾದ
ಕೃಷ್ಣ ಕಾವೇರಿಯರು ಪಡೆಯಲಿಲ್ಲ ಮೋದ.
ತೆಗೆಬಿಸಾಕು ಡಮರುಗ ಕಮಂಡಲ
ಭವಾನಿ ವೈಗೈನದಿಗೆ
ತಿರುಚಿ ತಲೆವರ್ರೈ ಆತ್ಮಕೆ ಶಾಂತಿ
ಚೆನ್ನ ಚೆಲುವೆಗೆ ಜೈ ಅಂದವರು ಕೋಟಿ ಕೋಟಿ
ಒಳಗೆ ಬೆಚ್ಚಗೆ ಹುದುಗಿ ನೆಯ್ಯುವರು ಬಲೆ
ಬ್ರಹ್ಮಚಾರಿ ಅದರೊಳಗೆ ಸೆರೆ
ಬಂದು ಹೋಗುವಾ ದಿಕ್ಕಿಗೆ ಹಾಕಿ
ಸಾವಿರ ಸಾವಿರ ಸಲಾಮ

ನಾಮ ಕಾಯಲಿಲ್ಲ ಮಹಾನ್ ಭಾರತದ
ಮಾನ
ಮುಖದಲಿ ನಗೆ ಹುಸಿನಗೆ
ನಕ್ಕು ಹಾಕಿದಗುಂಡು ಎದೆ ಒಡೆದು
ಗೋಲ ಗುಮ್ಮಟಗಳು ಸಾರಿ ಹೇಳಿವೆ ಸಾವಿನ
ಕಥೆಯ
ತರವಲ್ಲ ತಗಿ ಆಳುವಪರಿ
ಅದ್ವಾನಗೊಂಡ ಕೊಳಲು ಹೊರಡಿಸದು
ರಾಗರಸ.
ದೇಶದ ತುಂಬಾ ಅಣುಕಸ
ಬ್ರಹ್ಮಚಾರಿಯ ಅಣಕಿಸಿದೆ ಬದುಕ ಪಾಠ
ಸ್ವರಾಜ್ಯ ಕಿತ್ತ ಸೂಕ್ಷ್ಮ ಮತಿ
ಸಾಹೇಬ ದೂರ ಬಹುದೂರ.
ಪದಪುಂಜಗಳ ನಿರರ್ಗಳ ಕಾವ್ಯಮಯ
ಮಾತು
ಉಳಿಸಲಿಲ್ಲ ತ್ರಿವರ್ಣದ ಮಾನ
ಅಳಿಸಲಿಲ್ಲ ಭಾರತದ ದುಮ್ಮಾನ

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ